MYSORE LEGISLATIVE ASSEMBLY

NINETEENTH DAY.

Saturday, 16th March 1963.

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

PAPERS LAID ON THE TABLE

Sri S. R. KANTHI (Minister for Education).—Sir, I beg to lay Notification No. GAD 15 SSC 62, dated 18th February 1963 [Amendments to the Mysore Public Service Commission (Consultation) Regulations, 1958], as required under clause (5) of article 320 of the Constitution of India.

BUDGET ESTIMATES FOR 1963-64—DEMANDS FOR GRANTS

No. 17-28. Education

(Debate continued)

ಶ್ರೀ ವಿ. ಎಂ. ದೇವ್ (ಗುಬ್ಬಿ).—ಒಟ್ಟಿನಲ್ಲಿ ಮಾನವಕುಲ ಪ್ರಪಂಚದಲ್ಲಿ ಮೊದಲು ವಿದ್ಯೆಗೆ ಎಷ್ಟು ಮಹತ್ವ ಕೊಡುತ್ತಿದೆ ಅನ್ನುವುದು ಮುಖ್ಯ ಪ್ರಶ್ನೆ. ಅದು ಸಮರ್ಪಕವಾಗಿಲ್ಲದಿದ್ದರೆ it is not just the foibles of human beings ಪದ್ಧತಿಯಲ್ಲಿ ಏನೋ ತಪ್ಪು ಇರಬೇಕು. ವಿದ್ಯೆಯಲ್ಲಿ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯಕ್ಕೆ ಬಹಳ ಮಹತ್ವ ಕೊಟ್ಟಿದೆ. ಏಕೆಂದರೆ ವಿದ್ಯೆಗೆ ಪುರಸ್ಕಾರ ದೊರೆಯಬೇಕಾದರೆ ಅದಕ್ಕೆ ಸರಿಯಾದ ವಾತಾವರಣವಿದ್ದರೆ ಆಗ ಅದರಿಂದ ಬರುವ ಪ್ರತಿಫಲ ನಿಜವಾಗಿ ಅಗಾಧವಾಗಿದೆ. ಅದಕ್ಕೆ ಸರಿಯಾದ ವಾತಾವರಣ ಎಲ್ಲಿರುತ್ತದೆಂದರೆ, ಸಮಾಜವಾದರೀತಿಯ ಸಮಾಜದ ಚೌಕಟ್ಟಿನಲ್ಲಿರುತ್ತದೆ; ಇನ್ನು ಯಾವ ಕಡೆಯಲ್ಲಿಯೂ ಇರುವುದಿಲ್ಲ. ಇದಕ್ಕೆ ಉದಾಹರಣೆ ಕೊಡುತ್ತೇನೆ. ಈವಾಗ ಆರ್ಥಿಕ ಮಟ್ಟದಲ್ಲಿ ನೋಡಿ. ರಷ್ಯ ಮೊದಲನೆ ಉಪಗ್ರಹ ಹಾರಿಸಿದಾಗ ಅವರ ಆರ್ಥಿಕ ಮಟ್ಟ ಅಮೇರಿಕದ ಅರ್ಧದಷ್ಟು ಇತ್ತು; ಆದರೂ ಅಮೇರಿಕಕ್ಕಿಂತ ಮುಂಚೆ ಉಪಗ್ರಹ ಬಿಟ್ಟರು. ಅವರಲ್ಲಿ ಉಕ್ಕಿನ ಉತ್ಪತ್ತಿ ಕಡಿಮೆಯಾಗಿದ್ದರೂ, ಅಮೇರಿಕದ ಎರಡೂವರೆಯಷ್ಟು ಯಂತ್ರ ಸಾಮಗ್ರಿಗಳನ್ನು ತಯಾರು ಮಾಡುತ್ತಾರೆ. ವಿದ್ಯೆಯ ಎಕನಾಮಿಕ್ಸಿನ ಒಂದು ಮುಖ ತೋರಿಸುತ್ತೇನೆ. ಇದರಿಂದ ಭ್ರಾತೃಭಾವನೆ ಉಂಟಾಗಬಹುದು. ವಿದ್ಯೆಯಿಂದ ಒಳ್ಳೆಯ ಫಲಬಂದರೆ ಸಾಮಾಜಿಕ ಜೀವನದಲ್ಲಿ ನಿಜವಾದ ಭ್ರಾತೃಭಾವನೆ ಬಂದು ದೇಶಕ್ಕೆ ನೆಮ್ಮದಿ ತಂದೀತು. ಆದ್ದರಿಂದ ಎಲ್ಲರೂ ಅದಕ್ಕೆ ತಕ್ಕ ಹಾಗೆ ದುಡಿಯಬೇಕು. ಮೂರನೆಯದಾಗಿ ರಾಜಕೀಯದಲ್ಲಿ ಒಂದು ತತ್ವ ಕಡ್ಡಾಯವಾಗಿ ಅಸ್ತಿತ್ವಕ್ಕೆ ಬಂದರೆ ರಾಷ್ಟ್ರ ಬಹಳ ಬಲವಾಗುತ್ತೆ. ಹಾಗೆ ಒಂದು ರಾಜಕೀಯ ತತ್ವಕ್ಕೆ ಕಟ್ಟುಬಿದ್ದು ಜನತಾ ಚೀನ ಬಲಗೊಂಡು ಈಗ ನಮ್ಮ ಮೇಲೆ ಯುದ್ಧ ಮಾಡುತ್ತಿದೆ. ಜನತಾ ಚೀನ ಇಂಡಿಯಾದೇಶದಮೇಲೆ ಬಿದ್ದ ನಂತರ ದೆಹಲಿಯಲ್ಲಿ ಸಹಿತ ವಿದ್ಯೆಕ್ಕೆ ಹೆಚ್ಚಿನ ದೃಷ್ಟಿಯನ್ನು ಕೊಡಬೇಕೆಂದು ಹೇಳುತ್ತಿದ್ದಾರೆ.

(ಶ್ರೀ ವಿ. ಎಂ. ದೇವ್)

ಸ್ವಾಮಿ ವಿವೇಕಾನಂದರು ಈ ರೀತಿ ಹೇಳುತ್ತಾರೆ.

"The mind of man is a reservoir of knowledge and that all knowledge, present, past or future, is within man in a state of manifestation or non-manifestation and the object of every system of education should be to help the mind to manifest it."

ಮನುಷ್ಯನ ಮನಸ್ಸಿಗೆ ಆಕಾಶವೇ ಲಿಮಿಟ್ಟು. ಇದರಲ್ಲಿ ಕಾಲಜ್ಞಾನವೂ ಇರಬೇಕೆಂದಿದೆ. Future ಒಂದೇ ಅಲ್ಲ; ಲಕ್ಷಾಂತರ ವರ್ಷಗಳ ಹಿಂದೆ ಏನಾಯಿತು ಎಂದು ತಿಳಿದುಕೊಳ್ಳಬಹುದು. ಈಗ present situation ಅನುಭವಕ್ಕೆ ತೆಗೆದುಕೊಂಡು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಒಬ್ಬ ಜಪಾನೀಸ್ ಗ್ರಂಥಕರ್ತೃ ಹೀಗೆ ಹೇಳುತ್ತಾರೆ:

"It is an established fact that the training of the intellect is not at all sufficient. The education of the Head without the training of the Heart increases one's power for evil, whereas the education of the Head along with the Heart increases one's power for good and this indeed is the true education."

ಅಂದರೆ ಎಜುಕೇಷನ್ ಕೊಟ್ಟುಬಿಟ್ಟರೆ ಬಲ ಬರುತ್ತದೆ. ಅದರಿಂದ ಆಗಬಾರದ್ದು ಆಗಬಹುದು; ಒಳ್ಳೆಯದು ಆಗಬಹುದು, ಕೆಟ್ಟದ್ದೂ ಆಗಬಹುದು. ಆದ್ದರಿಂದ ಅದಕ್ಕೆ ಸರಿಯಾದ ವಿದ್ಯೆ ಇರಬೇಕು, ಸರಿಯಾದ ವಿದ್ಯೆ ಇಲ್ಲದೆ ಹೋದರೆ ಅದು ವಿದ್ಯೆ ಆಗುವುದಿಲ್ಲ. ಅವಿದ್ಯೆ ಆಗುತ್ತದೆ. ಜಪಾನೀಸ್ ರೈಟರ್ ಹೇಳುವುದು ಸತ್ಯ. ಸರಿಯಾದ heart ಮತ್ತು head ಇವೆರಡನ್ನು ಹೊಂದುವುದೇ ನಿಜವಾದ ವಿದ್ಯೆ. ಇದರಮೇಲೆ ಒಂದು ಥೀಸೀಸ್ ಬರೆಯಬಹುದು. ಒಬ್ಬ ಮನುಷ್ಯ ಏನೂ ತಿಳಿಯದ ಮೂಢನಾಗಿರಬೇಕಾದರೆ, ಅದಕ್ಕೆ ಎಲ್ಲರೂ ಕಾರಣ. ಮನುಷ್ಯನ ಮನಸ್ಸಿಗೆ, ಜ್ಞಾನಕ್ಕೆ ಮಿತಿನೇ ಇಲ್ಲದೆ ಇರಬಹುದು. ಈ ಪಕ್ಷಕ್ಕೆ ಒಬ್ಬ ಮೂರ್ಖ ಮಂತ್ರಿಯೇ ಆಗಲಿ, ಒಬ್ಬ ಮೂರ್ಖ ಅಪೊಸಿಷನ್ ಮೆಂಬರೇ ಆಗಿರಲಿ, ಅದಕ್ಕೆ ಕಾರಣ ನಾವು ನೀವು. ಅದರ ಬಗ್ಗೆ ತಪ್ಪು ಎಲ್ಲರದೂ ಇದೆ, ಒಬ್ಬ ಮನುಷ್ಯನದಲ್ಲ. ಈ ದೃಷ್ಟಿಯಿಂದ ಪ್ರಪಂಚದಾದ್ಯಂತ ಇರುವುದನ್ನು ನೋಡುತ್ತಾ ಹೋದರೆ ಸಮಾಜವಾದ ತತ್ವದ ರೀತಿಯಲ್ಲಿ ಮುಂದಕ್ಕೆ ಹೋಗುವುದಕ್ಕೆ ದಾರಿ ಇರುತ್ತದೆ. ಈ ಅನುಕೂಲ ಬೇರೆ ಪದ್ಧತಿಗಳಲ್ಲಿ ಇಲ್ಲ. John Gunther, a great American Journalist ಬಂಡವಾಳಷಾಹಿ ರಾಷ್ಟ್ರಗಳಲ್ಲಿ ಏನಾಗಿದೆಯೆಂದು ಒಂದು ಕಡೆ ಹೀಗೆ ಹೇಳುತ್ತಾರೆ.

"Profound depravity and moral decay of every aspect of public life from music to sports, from animal life to the attitude towards science, from the understanding of religion to the approach to international affairs."

ಇದು ದೇಶಾದ್ಯಂತ ಇದೆ. ಇದು ನಮ್ಮ ದೇಶದಲ್ಲಿ ಸಾಕಾರರೂಪು ತೆಗೆದುಕೊಂಡಿದೆ. ಇರುವ ಪೊಸಿಷನ್ ತಿಳಿದುಕೊಂಡು, ಅದನ್ನು ಬಾಹ್ಯರೂಪದಲ್ಲಿ ಕಂಡುಕೊಂಡು ಹೋಗುವುದು ಒಳ್ಳೆಯದು. ನಮ್ಮ ದೇಶದಲ್ಲಿ ಒಟ್ಟಿನಲ್ಲಿ ಆಗಿರುವುದು ಇಷ್ಟೆ. Communalism ನಮ್ಮ ದೇಶದಲ್ಲಿ peculiar ಆಗಿ ಇರುತ್ತದೆ. ಈ ಶಕ್ತಿ ಭಾರತೀಯ ಮನುಷ್ಯನಲ್ಲಿರುತ್ತದೆ. ಈ ಜಾತೀಯತೆಯ ದ್ವೈತ್ಯತೆ ಸಾಕಾರ ಇರುವುದನ್ನು ಇಲ್ಲಿ ನೋಡಿದ್ದೇವೆ. ವೀರಶೈವರಿಗೆ ಸಹಾಯಮಾಡಿ, ಒಕ್ಕಲಿಗರಿಗೆ ಬಹಳ ಅನ್ಯಾಯಮಾಡುತ್ತಿದ್ದಾರೆ ನಮ್ಮ ಕಂಠಿ ಸಾಹೇಬರು, ಅವರು ನ್ಯಾಯ ಬಾಹಿರರಾದವರು ಎಂದು ಅರ್ಥ ಬರುವ ಹಾಗೆ ಕೆಲವರ ಮಾತುಗಳಲ್ಲಿ insinuation ಇತ್ತು. ಇನ್ನೂ ಒಂದು ಏನೆಂದರೆ ಸ್ಕೂಲು ಕಾಲೇಜುಗಳಿಗೆ ಮುಖ್ಯಾಧಿಕಾರಿಗಳಾಗಿ ಒಕ್ಕಲಿಗೇತರರು ಇರುವುದು ಒಳ್ಳೆಯದಲ್ಲ ಅಂದ ಹಾಗಾಯಿತು. ಶ್ರೀ ಕಂಠಿಯವರು ಖಾಸಗಿ ಸಂಸ್ಥೆಗಳಿಗೆ ಉತ್ತೇಜನ ಕೊಡುವುದರಲ್ಲಿ, ಸುತ್ತೂರು ಮಠಕ್ಕೆ ಸಹಾಯ ಮಾಡಿದ್ದಾರೆಂದು ಕೆಲವರ ವಾದದಲ್ಲಿ ಈ ಒಂದು insinuation ಇತ್ತು. ಇದರಲ್ಲಿ ಅಪೋಜಿಷನ್ ಲೀಡರೂ ನಾವೂ ಕಾನ್‌ಸರ್ಟೆಡ್ ಅಟ್ಯಾಕ್ ಮಾಡಬೇಕಾಗಿತ್ತು. ವಿದ್ಯಾಮಂತ್ರಿಗಳು 'ಪೆಚ್ಚೆಚ್ಚೆ' ಅಂದರು. ಆಗಿಹೋಯಿತು, ನಾನು ಇರಲಿಲ್ಲ. ಅವರಮೇಲೆ ಅಪಪ್ರಚಾರ ಮಾಡಿದವರು. They are broken down. It is nerve racking and fearful. If there is anything you give specific points and accuse, else it is cowardice—ನಮ್ಮ ವಿದ್ಯಾ ಮಂತ್ರಿಗಳಿಗೋ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಬರುವದಿಲ್ಲ. ಮಧ್ಯೆ ಮಧ್ಯೆ ಬಾಯಿ ಹಾಕಿ ಏನೋನೋ ಹೇಳುತ್ತಾರೆ. ಅವರು ಬರೀ

''ಬೆಳ್ಳುಳ್ಳಿ ಶಿವ''. ಗಂಭೀರವಾಗಿ ಕೂತುಕೊಂಡು ಕೇಳಿ points ಎಲ್ಲಾ ನೋಟುಮಾಡಿಕೊಂಡು, ಅಮೇಲೆ ಸಮಂಜಸವಾದ ಉತ್ತರ ಕೊಟ್ಟರೆ ಸರಿಯಾಗಿರುತ್ತದೆ. ಅದು ಬಿಟ್ಟು ಎತ್ತೆತ್ತಲೋ ಮಾತನಾಡುತ್ತಾರೆ. ಅದು ಎತ್ತೆತ್ತಲೋ ಆಗುತ್ತದೆ. Apart from that ಒಟ್ಟಿನಲ್ಲಿ ಆಗಬೇಕಾದುದು ಇಷ್ಟೆ. ಇದರಲ್ಲಿ ವಾಸ್ತವಾಂಶ ಎಷ್ಟಿದೆ ಎಂಬುದನ್ನು ನೋಡಿ, ಇದಕ್ಕೆ ಪರಿಹಾರ ಹುಡುಕಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಬಹಳ ಸ್ವಾರಸ್ಯವಾಗಿದೆ.

ಶ್ರೀ ವಿ. ಎಂ. ದೇವ್.—ಆದರೂ ನೀವೆಲ್ಲಾ ಮಾತನಾಡುವುದಕ್ಕೆ ವೇಳೆ ಕೊಡಿಸುವುದಿಲ್ಲ ವಲ್ಲಾ.

Mr. SPEAKER.—The Hon'ble Member has got two minutes. If he wants to lose it by conversation with Sri Muckannappa, I have no objection. He may carry on the conversation and I will call upon some other Member......

ಶ್ರೀ ವಿ. ಎಂ. ದೇವ್.—ಒಟ್ಟಿನಲ್ಲಿ ಇದು ಒಂದೇ ಒಂದು ರಂಗದಲ್ಲಿ ಆಗಿದೆ. Insinuation ಕೆಟ್ಟದ್ದು. ಇಲ್ಲಿ ಹೀಗೆ ಮಾತನಾಡಿದರೆ ಜನಗಳ ಟೀಕೆಗೆ ನಾವೂ ನೀವೂ ತುತ್ತಾಗುತ್ತೇವೆ. ಶ್ರೀ ಬುದ್ಧದಾಸ್ ಪಾರ್ಲಿಮೆಂಟರಿ ಸೀಟಿಗೆ ನಿಂತಾಗ ನಾನೂ ಅವರ ಜೊತೆ ಬೈಎಲೆಕ್ಷನ್ ಪ್ರಾಪಗ್ಯಾಂಡಾಕ್ಕೆ ಹೋಗಿದ್ದೆ. ಶ್ರೀಮಾನ್ ಜೆ. ಬಿ. ಮಲ್ಲಾರಾಧ್ಯರ ಸ್ಟೇಟ್‌ಮೆಂಟ್ ನನಗೆ ಗೊತ್ತಿದೆ. ಅವರು ಇಲ್ಲಿ ಕುಳಿತುಕೊಂಡು ಎಲ್ಲಾ ಶ್ರೀ ಬುದ್ಧದಾಸ್ ಅಲ್ಲಿ ಹೇಳಿದ್ದನ್ನೇ ಹೇಳುತ್ತಾ ಇದ್ದರೆ......

Mr. SPEAKER—Do not drag in Members of the other House. They are not here to defend themselves.

ಶ್ರೀ ವಿ. ಎಂ. ದೇವ್.—ಶ್ರೀ ಬುದ್ಧದಾಸರ ಹೇಳಿಕೆಯಲ್ಲಿ ಬುರುಡೆ ಇಲ್ಲ. ಅವರ ಕೊಟ್ಟ ಸ್ಟೇಟ್‌ಮೆಂಟ್ ಇವರೂ ಕೊಟ್ಟಿರುವುದು. ಇದರಿಂದ ಏನು ಆಗುತ್ತಿದೆಯೆಂದರೆ character assassination. ಈವಾಗ ಮುಖ್ಯವಾಗಿ ಬಂದಿರುವ ವಿಷಯ ಹೇಳುತ್ತೇನೆ. ಕಾಲೇಜ್ ಡೈರೆಕ್ಟರನ್ನು ನೋಡುವುದಕ್ಕೆ ನಿನ್ನೆ ಹೋಗಿದ್ದೆ. ಅವರನ್ನು meet ಮಾಡುವುದಕ್ಕೆ ಆಗಲಿಲ್ಲ. ಯೂನಿವರ್ಸಿಟಿ ಯಲ್ಲಿ ಬಹಳ ಜನರನ್ನು meet ಮಾಡಿದೆ.

ನಾನು ಹೇಳುವುದು ಇಷ್ಟೆ. ವಿದ್ಯೆಗೆ ಪುರಸ್ಕಾರ ಇಲ್ಲದೆ ಯಾವುದೂ ಬೆಳೆಯುವುದಿಲ್ಲ. ನಾನು ಕೇಳಬೇಕೆಂದಿರುವುದೇನೆಂದರೆ ಮುಂಚೆ ರೀವ್ಯಾಲ್ಯುಯೇಷನ್ ಇತ್ತು. ರೀಎಕ್ಸಾಮಿನೇಷನ್‌ಗೆ ಅವಕಾಶ ಇತ್ತು. ಅದರಿಂದ ಪ್ರಯೋಜನವೂ ಇರುತ್ತಿತ್ತು. ಈಗ ಎಲ್ಲಾ ಹಾಳಾಗಿ ಹೋಗು ತ್ತಿದೆ. ಮಾಡಬಾರದ ಕೆಲಸ ಮಾಡಿ ಎಂದು ಇವರು ಹೇಳುವುದು, ಅವರು ಮಾಡುವುದು, ಏಟಿಗೆ ಸಿಕ್ಕಿ ಹಾಕಿಕೊಳ್ಳುವುದು, ಇವರು ತಪ್ಪಿಸಿಕೊಳ್ಳುವುದು. ಹೀಗೆಲ್ಲಾ ವಿಪರೀತ ಪರಿಸ್ಥಿತಿ ಉಂಟಾಗು ತ್ತದೆ. ಈ ರೀತಿ ಮಾಡದೇ ಅವರು ಮಾಡಬೇಕಾದ ಕೆಲಸ ಸರಿಯಾಗಿ ಮಾಡದಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಮೊನ್ನೆ ಯೂನಿವರ್ಸಿಟಿಗೆ ಹೋಗಿದ್ದಾಗ ಇಷ್ಟೇ ಸೀಲಿಂಗ್‌ವಾಕ್ಸ್ ತೆಗೆದು ಕೊಳ್ಳಬೇಕೆಂದು ಹೇಳಿದ್ದಾರೆ ಎಂದು ಹೇಳಿದರು. ಇದು ದೊಡ್ಡ ಮನುಷ್ಯ ತನವಲ್ಲ. ಆ ಪತ್ರ ವ್ಯವ ಹಾರವೆಲ್ಲಾ ಇದೆ. ಇದು ನಗೆಪಾಟಲಾಗುತ್ತದೆ ಎಂದು ಹೇಳುತ್ತೇನೆ. ರೀ ವ್ಯಾಲ್ಯುಯೇಷನ್ ಇರ ಬೇಕು, ರೀಎಗ್ಸಾಮಿನೇಷನ್ ಇರಬೇಕು.

ಶ್ರೀಮತಿ ನಾಗರತ್ನಮ್ಮ ಹಿರೇಮಠ್‌ರವರು 'ಕೆನ್ನೆಗೆ ಕೆನ್ನೆ ಹಚ್ಚಿ' ಅಂತ ಅನ್ನುವ ಒಂದು ಪಾಠ ಪಬ್ಲಿಷ್ ಆಗಿದೆ ಎಂದು ಹೇಳಿದರು. ಅದನ್ನೆಲ್ಲಾ ಬಿಟ್ಟು ಏನು ಮಾಡಬೇಕು ಎಂದು ಹೇಳಿದರೆ ಅಂಥಾ ಕೆಲವು Sex ವಿಚಾರ ತೆಗೆದು ಹಾಕಿ ಎಂದು ಹೇಳುವುದಿಲ್ಲ. ಹುಡುಕತನದಿಂದ ಅಂಗ ವಿಕಲ ರಾದ ಮಕ್ಕಳು ಹುಟ್ಟುತ್ತಾರೆ ಎಂದು ಸಿದ್ಧಾಂತವಾಗಿದೆ. ಅಂತಹ ಟೆಕ್ಸ್ಟ್‌ಬುಕ್ಸ್ ಇಡಬಾರದು. ಸಂಸ್ಕೃತಿಯ ಕೆಲವು ಕಾರ್ಯಕ್ರಮಗಳನ್ನು ಇಡಬೇಕು. ಇಲ್ಲದೇ ಇದ್ದರೆ ಸಂಸ್ಕೃತಿ ಮುಂದು ವರಿಯಲಿಕ್ಕೆ ಅವಕಾಶವಾಗುವುದಿಲ್ಲ.

Mr. SPEAKER.—The Hon'ble Member's time is over. I must ask him to resume his seat.

Sri V. M. DEO.—Sir, the Chair's order has to be obeyed and I do so. But I have to say that the Chair has disappointed the whole House.

Mr. SPEAKER.—I will try to apportion time at the rate of five minutes in order to accomodate as many Hon'ble Members as possible.

† ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ್).—ಮಾನ್ಯ ಸಭಾಪತಿಗಳೇ ಈಗ ನಮ್ಮ ಮುಂದೆ ಇರತಕ್ಕ ವಿದ್ಯಾ ಖಾತೆಯ ಸಲುವಾಗಿ ಮಾನ್ಯಸದಸ್ಯರು ಹೇಳಿದಂತೆ ಇದನ್ನು ಈ ಸಭೆ ಅತಿ ಆನಂದದಿಂದ ಬರಮಾಡಿಕೊಳ್ಳಬೇಕಾಗಿತ್ತು. ಆದರೆ ರಾಜ್ಯದಲ್ಲಿ ಏನೋ ಒಂದು ಅನಾಹುತ ನಡೆದಿದೆ ಎಂದು ಹೇಳಿ ಇಲ್ಲದ ಆರೋಪಗಳನ್ನು ಮಾಡುತ್ತಾ, ವಿದ್ಯಾ ಇಲಾಖೆ, ವಿದ್ಯೆ ಎಷ್ಟು ಮಹತ್ವವಾದದ್ದು, ಪವಿತ್ರವಾದದ್ದು ಎನ್ನುವಂಥಹದನ್ನು ಮರೆತು, ಯಾವುದೋ ಒಂದು ಹಾಸ್ಯಾಸ್ಪದವಾದ ರೀತಿಯಲ್ಲಿ ಈ ಮಹತ್ವವಾದಂಥ ಪವಿತ್ರವಾದಂಥ ಖಾತೆಯನ್ನು ನೋಡುತ್ತಾ ಇದ್ದಾರೆಯಲ್ಲಾ ಎಂಬುದು ಎಲ್ಲರಿಗೂ ವ್ಯಥೆ ಆದಂಥಾ ಮಾತು; ನಮ್ಮ ಹಿಂದೂಸ್ತಾನ ಸ್ವತಂತ್ರವಾದ ಮೇಲೆ ನಮ್ಮ ಮುಖ್ಯ ಗುರಿ, ನಮ್ಮ ಹೋರಾಟ ಅಜ್ಞಾನವನ್ನು ತೊಡೆದು ಹಾಕುವುದರ ಸಲುವಾಗಿ ಮತ್ತು ನಮ್ಮ ಸಂಪತ್ತನ್ನು ಹೆಚ್ಚು ಮಾಡುವುದರ ಸಲುವಾಗಿ ಹಾಗೂ ಬಡತನವನ್ನು ನೀಗುವುದರ ಸಲುವಾಗಿ ಇದ್ದಿತೇ ಹೊರತು ಒಂದು ಗುಂಪನ್ನು ಕಟ್ಟಿಕೊಂಡು ಅಥವಾ ಯಾವುದಾದರೂ ಒಂದು ಜನಾಂಗಕ್ಕೆ ಅನ್ಯಾಯ ಮಾಡುವಂತಹ ಒಂದು ಇರಾದೆಯನ್ನು ಕಲ್ಪಿಸಿಕೊಂಡು ಈ ಸ್ವತಂತ್ರ್ಯವನ್ನು ಪಡೆಯಲಿಲ್ಲ. ನಾವು ಸ್ವಾತಂತ್ರ್ಯ ಪಡೆದೆವು. ಅಷ್ಟೇ ಅಲ್ಲ ಒಂದು ರಾಜ್ಯದಲ್ಲಿ ಭಾಗವಾಗಿ ಅಥವಾ ಭಿನ್ನವಾಗಿ ಹೋಗಿ ಎಲ್ಲೋ ನೆಲಸಿದಂಥ ಜನ ಏನಿತ್ತು ಅವರನ್ನು ಈಗ ಒಂದುಗೂಡಿಸಿ ಇಡೀ ಕರ್ನಾಟಕ ಏಕಿಕರಣವಾಗಬೇಕು, ನಮ್ಮ ಸಾಂಪತ್ತಿಕಸ್ಥಿತಿ ಸುಧಾರಿಸಬೇಕು, ಅಜ್ಞಾನ ಹೋಗಬೇಕೆಂಬ ಇರಾದೆಯಿಂದ ನಮ್ಮ ಮಹಾನಾಯಕರು ಮತ್ತು ಹಿರಿಯರು ಬಡಿದಾಡಿ ಈಗ ರಾಜ್ಯವನ್ನು ಒಂದುಗೂಡಿಸಿದ್ದಾರೆ. ಒಂದುಗೂಡಿಸಿದ್ದರ ಫಲವನ್ನು ನಾವು ಇಂದು ಉಣ್ಣಬೇಕಾಗಿದೆ. ಒಂದುಗೂಡಿಸಿದೆವು ಎಂದ ಮೇಲೆ ನಾವು ನಮ್ಮಲ್ಲಿದ್ದಂಥ ನ್ಯೂನತೆಗಳನ್ನು ಮರೆಯಬೇಕು. ನಾವು ಅಣ್ಣ ತಮ್ಮಂದಿರು ಎಂಬ ಭಾವನೆಯಿಂದ ಹೊಂದಿಕೊಳ್ಳಬೇಕು. ಅಣ್ಣ ತಮ್ಮಂದಿರಂತೆ ನಾವೆಲ್ಲರೂ ಹಿಂದೆ ಇದ್ದವರು. ನಾವು, ಇವರು ನಮ್ಮವರು ಎಂಬ ಭಾವನೆ ಸಾವಿರಾರು ವರ್ಷಗಳ ಹಿಂದೆ ಏನಿತ್ತು ಇತ್ತೀಚೆಗೆ ಅದು ನಮ್ಮಲ್ಲಿ ಮಾಯವಾಗಿ ಹೋಗಿತ್ತು. ಅದನ್ನು ತಿರುಗಿ ನಮ್ಮ ಕಲ್ಪನೆಗೆ ತಂದುಕೊಂಟ್ಟಂಥ ನಮ್ಮ ಹಿರಿಯರಿಗೆ ಮನ್ನಣೆ ಮಾಡಬೇಕಾಗಿದೆ ಏಕೆಂದರೆ ಮೈಸೂರು ರಾಜ್ಯ ಒಂದಾನೊಂದು ಕಾಲಕ್ಕೆ ಒಂದೇ ಕರ್ನಾಟಕ ರಾಜ್ಯವಾಗಿತ್ತು, ಯಾವುದೋ ಶಕ್ತಿಯ ದೆಶೆಯಿಂದ ಅದು ಭಿನ್ನವಾಗಿ ನಾವೆಲ್ಲರೂ ಅಣ್ಣ ತಮ್ಮಂದಿರು ಎಂಬುದನ್ನು ಮರೆತಿದ್ದೆವು. ಕುಂತಿಯು ಕರ್ಣನಿಗೆ ಅರ್ಜುನನು ತಮ್ಮನಾಗಬೇಕೆಂಬುದನ್ನು ಪರಿಚಯ ಮಾಡಿಕೊಟ್ಟಂತೆ ಆಗಿದೆ. ಇದರ ಮೂಲ ಉದ್ದೇಶ ನಮ್ಮ ಅಜ್ಞಾನತನ ತೊಲಗಿ ಜನದ ಸಾಂಪತ್ತಿಕ ಸ್ಥಿತಿ ಸುಧಾರಿಸಬೇಕು ಎಂಬುದಕ್ಕಾಗಿ ಹೋರಾಟವೇ ವಿನಾ ಮತ್ತಾವುದಕ್ಕೂ ಹೋರಾಟ ಇರಲಿಲ್ಲ. ಎಷ್ಟೋ ತ್ಯಾಗ ಮಾಡಿದ್ದೇವೆ. ಅದರ ಶ್ರೇಯಸ್ಸನ್ನು ಈಗ ನಾವು ಪಡೆದುಕೊಳ್ಳಬೇಕಾಗಿದೆ. ಆದ್ದರಿಂದ ಈಗ ನಮ್ಮ ರಾಜ್ಯದಲ್ಲಿ ಈ ವಿದ್ಯಾ ಇಲಾಖೆ ಅಲ್ಲೋಲ ಕಲ್ಲೋಲವನ್ನುಂಟುಮಾಡಿದೆ ಎನ್ನುವಂತಹ ಮಾತಿನಲ್ಲಿ ಎಳ್ಳಷ್ಟು ಕೂಡ ನಿಜವಿಲ್ಲ. ನಿಜವಾಗಿಯೂ ನೋಡಿದರೆ ನಾವು ನಮ್ಮ ಹಿಂದಿನ ಇತಿಹಾಸ ನೋಡಿದರೆ ಈ ಹತ್ತು ವರ್ಷದಲ್ಲಿ ಎಷ್ಟೊಂದು ಪ್ರಗತಿ ಸಾಧಿಸಿದ್ದೇವೆಯೋ ಅದಕ್ಕಿಂತ ಮಿಗಿಲಾಗಿ 1962-63 ನೇ ಸಾಲಿನಲ್ಲಿ ಹೇಳಲಾರದಷ್ಟು ಪ್ರಗತಿಯಾಗಿ, ಮುನ್ನಡೆ ನಡೆದಿದ್ದೇವೆ. ನಮ್ಮ ವಿದ್ಯಾ ಇಲಾಖೆ ಮುಂದೆ ಹೋಗಬೇಕು ಜನರಲ್ಲಿ ಇದ್ದಂಥ ಅಜ್ಞಾನತನ ತೊಲಗಬೇಕೆಂದರೆ overnight change ಮಾಡಲಿಕ್ಕೆ ಬರುವುದಿಲ್ಲ. ಎಷ್ಟು ಜನಗಳು ಇಷ್ಟು ಕಾಲದಿಂದ ವಿದ್ಯೆ ಪಡೆದಿದ್ದೇವೆ? ವಿದ್ಯಾ ಸಂಸ್ಥೆಗಳು ಒಂದು ಉನ್ನತ ಮಟ್ಟಕ್ಕೆ ಹೋಗಬೇಕಾದರೆ ನಮ್ಮಲ್ಲಿರತಕ್ಕ ಒಂದು ಕುಶಲತೆ ಮುಖ್ಯ. ಅದು ಬರೀ ಸರ್ಕಾರದ ಕೆಲಸ, ಸರ್ಕಾರದ ಜವಾಬ್ದಾರಿ ಆಗಿನಸರ್ಕಾರ ಅದು ಮಾಡಲಿಲ್ಲ. ಇದು ಮಾಡಲಿಲ್ಲ ಎನ್ನುವಂತಹದು ಹೇಳುತ್ತೇವೆ. ನಿಜವಾಗಿಯೂ ನಾವು ಮಾಡಬೇಕಾದ ಕಾರ್ಯ ಮಾಡುತ್ತಾ ಇದ್ದೇವೆಯೇ ಎಂಬುದನ್ನು ಯೋಚನೆಮಾಡಬೇಕಾಗಿದೆ, ಈ ಕಾಲದಲ್ಲಿ ಮಾನ್ಯ ಸದಸ್ಯರು ಸರ್ಕಾರ ಮಾಡಲಿಲ್ಲ ಎಂದು ಹೇಳುತ್ತಾರೆ. ಹೌದು, ನಾವು ಏನು ಮಾಡಬೇಕಾಗಿದೆಯೋ ಅದನ್ನು ಮಾಡಿದ್ದೇವೆಯೇ; ಯಾವುದೋ ಒಂದು ಕಾಲದಲ್ಲಿ ಬ್ರಿಟಿಷರ ಆಡಳಿತದಲ್ಲಿ ಇದ್ದೆವು ಅಥವಾ ರಾಜ ಮಹಾರಾಜರ ಆಡಳಿತದಲ್ಲಿ ಇದ್ದೆವು ಅವರಿಗೆ ಮಾಡಿದಂಥ ಆರೋಪ ಮಾಡಬೇಕೇ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಈಗ ಸಾಧಿಸಬೇಕು ಅನ್ನುವಂಥದು ಬಹಳ ಇದೆ. ಸಾಧಿಸಿರುವುದು ಬಹಳ ಅಲ್ಪ ಎನ್ನುವುದನ್ನು ಎಲ್ಲ ಸದಸ್ಯರೂ ಗಮನದಲ್ಲಿಟ್ಟುಕೊಳ್ಳಬೇಕು. ನಮ್ಮಲ್ಲಿ ಇದ್ದಂಥ ಅಜ್ಞಾನತನ ಹೋಗಬೇಕಾಗಿದೆ. ನಿರುದ್ಯೋಗತನ ಹೋಗಬೇಕಾಗಿದೆ. ಇದು ಹೋಗಬೇಕಾದರೆ ಒಂದು ಸತತವಾದ ಶ್ರೇಷ್ಠತರ ಮಾರ್ಗ ಎಂದರೆ ವಿದ್ಯಾಭ್ಯಾಸ. ಅದಕ್ಕೇ ನಮ್ಮ ರಾಜ್ಯದ ಹಿರಿಯರು ಅದರಲ್ಲೂ ವಿದ್ಯಾಭ್ಯಾಸದ ಸಲುವಾಗಿ ಹೆಚ್ಚು ಕಳಕಳಿಯಿಂದ ಮೊದಲಿನಿಂದಲೂ ದುಡಿಯುತ್ತಾ ಬಂದಿದ್ದಾರೆ, ತಜ್ಞರು ಒಂದು ಯೋಜನೆಯನ್ನು ತಯಾರುಮಾಡಿ, ನಮ್ಮ ರಾಜ್ಯಕ್ಕೆ ಯಾವ ಯೋಜನೆ ಅನ್ವಯಿಸುತ್ತದೆಯೋ ಅದನ್ನು ನಿರೂಪಿಸಿ ಈಗ ನಮ್ಮ ಮುಂದೆ ಕೆಲವು ಯೋಜನೆಗಳನ್ನು ಇಟ್ಟಿದ್ದಾರೆ. ಅವುಗಳಲ್ಲಿ ಕೆಲವೊಂದು ದೋಷಪೂರಿತವಾಗಿರಬಹುದು ಅಥವಾ ಶ್ರೇಯಸ್ಸಿಗೆ

ಒಯ್ಯದೇ ಇರಬಹುದು ; ಅಂದಮಾತ್ರಕ್ಕೆ ಎಲ್ಲವೂ ಹಾಸ್ಯಾಸ್ಪದವಾದವು ಅಥವಾ ಕೆಳ ಮಟ್ಟಕ್ಕೆ ಹೋಗುವಂಥವು ; ಈ ವಿದ್ಯಾಭ್ಯಾಸದಲ್ಲಿ ಅನುಕೂಲತೆಯೇ ಇಲ್ಲ ಎಂದು ಹೇಳಲಿಕ್ಕೆ ಆಗುವುದಿಲ್ಲ. ನ್ಯೂನತೆ ಇದ್ದ ಪಕ್ಷದಲ್ಲಿ ನಾವು ನೀವು ಎಲ್ಲರೂ ಪರಿಹರಿಸಬೇಕಾಗಿದೆ. ನಮ್ಮ ದೇಶದಲ್ಲಿ ಮೊದಲ ನಿಂದಲೂ ಕಂಪಲ್‌ಸರಿ ಪ್ರೈಮರಿ ವಿದ್ಯಾಭ್ಯಾಸಕ್ಕೆ ಪ್ರಾಮುಖ್ಯಕೊಟ್ಟಿದ್ದಾರೆ. ಅದನ್ನು ಸಾಧಿಸುವಾಗ ಎಲ್ಲರ ಸಹಕಾರಬೇಕು. ಇವತ್ತು ವಿದ್ಯಾಭ್ಯಾಸದ ಮೂಲ ಉದ್ದೇಶ ಏನಿದೆ ಅದು ಪ್ರಗತಿಪರವಾಗಿ ನಡೆಯಬೇಕಾದರೆ ಅದಕ್ಕೆ ತಕ್ಕಂಥ ಒಂದು ಶಿಬ್ಬಂದಿ ತಯಾರುಮಾಡಬೇಕು. ಅದಕ್ಕೆ ತಕ್ಕಂಥ ಶಾಲೆ ಮತ್ತು ಮಕ್ಕಳು ಕುಳಿತುಕೊಳ್ಳಲಿಕ್ಕೆ ಒಂದು ಕಟ್ಟಡ ನಿರ್ಮಾಣ ಮಾಡ ಬೇಕಾಗಿದೆ. ಈ ಮೂರು ಒಂದಕ್ಕೆ ಒಂದು ಸಮಭಾಗವಾಗಿ ನಡೆಯಬೇಕಾಗಿದೆ. ಇಂದು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಾ ಇದೆ ಎಂಬ ಮಾತನ್ನು ಎಲ್ಲರೂ ಹೇಳುತ್ತಾರೆ. ಆದರೆ ವಿದ್ಯಾರ್ಥಿ ಗಳ ಸಂಖ್ಯೆಗನುಗುಣವಾಗಿ ಶಿಕ್ಷಕರು ತಯಾರಾಗಿಲ್ಲ. ತಯಾರಾಗಬೇಕಾಗಿದೆ.

ಅದರಂತೆ ನಮಗೆ ವಿದ್ಯಾಕಟ್ಟಡಗಳಿಗೆ ಸ್ಥಳವಿಲ್ಲ ; ಕಟ್ಟಡಗಳಿಲ್ಲ ಅನ್ನುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ ; ಇದನ್ನು ಯಾವ ರೀತಿ ಬಗೆಹರಿಸಬೇಕು ಎಂಬುದನ್ನು ಪರಿಶೀಲಿಸಬೇಕಾಗಿದೆ. ಮಕ್ಕಳು ಕುಳಿತುಕೊಳ್ಳಲು ಶಾಲೆಗಳಲ್ಲಿ ಸಾಕಷ್ಟು ಸ್ಥಳವಿಲ್ಲ, ಕೆಲವು ಶಾಲಾ ಕಟ್ಟಡಗಳು ಈಗಲೋ ಆಗಲೋ ಬೀಳತಕ್ಕ ಸ್ಥಿತಿಯಲ್ಲಿವೆ, ಎಂತ ಹೀಗೆಲ್ಲ ಹೇಳುವುದು ಸರಿಯಲ್ಲ. ಆದರೆ ನಮ್ಮ ಪೂರೈಕೆಗೆ ಸಾಕಾಗುವಷ್ಟು ನಮ್ಮ ಆರ್ಥಿಕ ಸಂಪತ್ತನ್ನು ನಾವಿನ್ನೂ ಸರಿಯಾಗಿ ದೊರೆಕಿಸಿಕೊಂಡಿಲ್ಲ. ಈ ದೃಷ್ಟಿಯಿಂದ ನಮ್ಮಲ್ಲಿ ಎಷ್ಟು ವಿದ್ಯಾಭಿವೃದ್ಧಿಯಾಗಬೇಕೋ ಅಷ್ಟಾಗಿಲ್ಲ ಎಂಬುದು ಅದು ಬೇರೆ ಆಯಿತು.

ಆದರೆ ಈಗ ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಇರತಕ್ಕ ಹುಡುಗರ ಸಂಖ್ಯೆಗೂ ಅಧ್ಯಾಪಕರ ಸಂಖ್ಯೆಗೂ ಹೋಲಿಕೆ ಮಾಡಿದರೆ ಒಬ್ಬ ಅಧ್ಯಾಪಕರಿಗೆ 40 ಹುಡುಗರು ಇರಬೇಕೆಂತ ಹೇಳಿದೆ. ನನ್ನ ದೃಷ್ಟಿಯಲ್ಲಿ ಇದಿನ್ನೂ ಕಡಮೆಯಾಗಬೇಕು. ಏಕೆಂದರೆ ಪ್ರಾಥಮಿಕ ಶಾಲೆಗಳಲ್ಲಿ 40 ವಿದಾರ್ಥಿ ಗಳನ್ನು ಕಂಟ್ರೋಲ್ ಮಾಡತಕ್ಕ ಶಕ್ತಿ ಒಬ್ಬ ಅಧ್ಯಾಪಕರಿಗಿರುವುದಿಲ್ಲ. ಆದರೆ ಈ ವ್ಯವಸ್ಥೆಯನ್ನು ಕಾಲೇಜು ಮಟ್ಟದಲ್ಲಿ ಮಾಡಬಹುದು. ಆದರೆ ಪ್ರಾಥಮಿಕ ವಿದ್ಯಾಭ್ಯಾಸದ ಸ್ಟೇಜಿನಲ್ಲಿ ಒಬ್ಬ ಅಧ್ಯಾಪಕರು 40 ಜನ ಹುಡುಗರಿಗೆ ವಿದ್ಯೆ ಕಲಿಸುವುದೆಂದರೆ ಅದು ಸಾಧ್ಯವಿಲ್ಲದ ಮಾತು. ಈ ಶಾಲೆ ಗಳಿಗೆ ಬರತಕ್ಕ ಹುಡುಗರ ವಯಸ್ಸು ಬಹಳ ಕಡಮೆ ಇರುತ್ತದೆ. ಇವರನ್ನು ಸರಿಯಾಗಿ ಮಾರ್ಪಾಡು ಮಾಡಲು ಅವಕಾಶ ಆಗುವುದಿಲ್ಲ. ಈ ಹುಡುಗರನ್ನು ಒಂದು ಸುವ್ಯವಸ್ಥಿತ ರೀತಿಯಲ್ಲಿ ಮಾರ್ಪಾಡು ಮಾಡಬೇಕಾಗಿದ್ದರೆ ಆ ಅಧ್ಯಾಪಕರು ಸಾಕಷ್ಟು ಉತ್ತೇಜನ–ಉತ್ಸಾಹಗಳನ್ನು ತೆಗೆದುಕೊಳ್ಳಬೇಕು. ಹೆಚ್ಚು ಜನ ವಿದ್ಯಾರ್ಥಿಗಳಿದ್ದರೆ ಹಾಗೆ ಉತ್ತೇಜನದಿಂದ ಪಾಠ ಹೇಳುವುದಕ್ಕೆ ಆಗುವುದಿಲ್ಲ.- ಈ ಹುಡು ಗರ ಸಂಖ್ಯೆ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಇನ್ನೂ ಹತ್ತಿಪ್ಪತ್ತು ಹೆಚ್ಚಾಗಿದ್ದರೂ ಫರವಾಇಲ್ಲ. ಅಲ್ಲಿಯ ಪರಿಸ್ಥಿತಿಗೂ ಪ್ರಾಥಮಿಕ ಶಾಲಾ ಪರಿಸ್ಥಿತಿಗೂ ವ್ಯತ್ಯಾಸವಿರುತ್ತದೆ. ಆದ್ದರಿಂದ ಪ್ರಾಥಮಿಕ ಶಾಲೆಗಳಲ್ಲಿ ಒಬ್ಬ ಉಪಾಧ್ಯಾಯರಿಗೆ ಈಗ ನಿಗದಿ ಮಾಡಿರತಕ್ಕ ಹುಡುಗರ ಸಂಖ್ಯೆಯನ್ನು ಕಡಮೆ ಮಾಡಿದರೆ ಒಳ್ಳೆಯದೆಂದು ನನ್ನ ಅಭಿಪ್ರಾಯವಾಗಿದೆ.

ಇನ್ನು ಈ ಅಸೆಂಬ್ಲಿಯಲ್ಲಿ ಶಾಲಾ ಬಿಲ್ಡಿಂಗುಗಳ ವಿಚಾರ ಬಹಳ ಮುಖ್ಯವಾಗಿ ಚರ್ಚೆಗೆ ಬಂದಿದೆ. ಹಳೇ ಮೈಸೂರು ರಾಜ್ಯದಲ್ಲಿ ನಮ್ಮವರು ಹಿಂದೆ ಈ ಪ್ರಾಥಮಿಕ ಹಾಗೂ ಇತರ ಮಟ್ಟದಲ್ಲಿ ವಿದ್ಯೆಗೆ ಬಹಳ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದಾರೆ. ಆದರೆ ಎರಡನೇ ಕಡೆ ಸರ್ಕಾರದವರನ್ನು ಕಾಡದೆ ಅವರೇ ಈ ವಿದ್ಯೆಯ ಪ್ರಸಾರವನ್ನು ಬೆಳಸಿಕೊಂಡು ಬಂದಿದ್ದಾರೆ. ಈ ವಿಚಾರದಲ್ಲಿ ನಾವು ಸದಾ ಎರಡನೆಯವರನ್ನ ಕಾಡಿ ಈ ವಿದ್ಯಾಭ್ಯಾಸವನ್ನು ಮುಂದುವರಿಸಬೇಕೆಂದರೆ ಅದು ಆಗದ ಮಾತು. ಇದಕ್ಕೆ ಜನರೂ ಕೂಡ ತ್ಯಾಗ ಮಾಡಲೇಬೇಕು. ಸರ್ಕಾರವೇ ಪ್ರತಿಯೊಂದು ಬಾಬಿಗೂ ಬೆಂಬಲ ಕೊಡಬೇಕೆಂದರೆ ಆದು ಆಗದಮಾತು. ಬರಿ ಸರ್ಕಾರದವರ ನೆರವನ್ನೇ ಅವಲಂಬಿಸಿ ಕುಳಿತಲ್ಲಿ ನಾವು ಇನ್ನೂ ಎಷ್ಟು ವರ್ಷಗಳ ಕಾಲ ಹೀಗೇ ಕುಳಿತಿರಬೇಕೋ ಅದನ್ನು ಹೇಳುವುದಕ್ಕಾಗುವುದಿಲ್ಲ. ಈಗ ನಾವು ರಷ್ಯಾ–ಅ–ಚೈನಾ ವಿಚಾರವನ್ನು ತೆಗೆದುಕೊಳ್ಳೋಣ. ಅಲ್ಲಿನಂತೆ ನಾವು ಇಲ್ಲಿಯೂ ಹೆಚ್ಚು ದುಡ್ಡನ್ನು ಖರ್ಚುಮಾಡಿದರೆ ಇಲ್ಲಿಯೂ ಶಿಕ್ಷಣ ಒಳ್ಳೇ ರೀತಿಯಲ್ಲೇ ನಡೆಯುತ್ತದೆ. ಆದರೆ ನಮಗಿಲ್ಲಿ ಬಡತನವೂ ಹೋಗಬೇಕು, ಅವಿದ್ಯೆಯೂ ಹೋಗಬೇಕು. ಈ ಎರಡನ್ನೂ ನಾವೀಗ ಬಗೆಹರಿಸ ಬೇಕಾಗಿದೆ. ಮಕ್ಕಳಿನ್ನೂ ತಾಯಿಯ ಗರ್ಭದಲ್ಲಿರುವಾಗಲೇ ಶಿಕ್ಷಣ ಕೊಡತಕ್ಕಂಥ ಕಾಲ ಇಲ್ಲಿಯೂ ಸ್ವಲ್ಪದರಲ್ಲೇ ಬರಬಹುದು. ಆದರೆ ನಮ್ಮಲ್ಲಿ ಈ ಹಿಂದೆ ಕೆಲವು ಮಾತನಾಡಿದ ಸದಸ್ಯರು ನಮ್ಮ ವಿದ್ಯಾ ಮಂತ್ರಿಗಳ ಖಾತೆಯಲ್ಲಿ ಏನೋ ಒಂದು ಅನಾಹುತವೇ ಆಗಿಹೋಗಿದೆ ಅನ್ನೋರೀತಿಯಲ್ಲಿ ಹೇಳಿದ್ದಾರೆ. ಆದರೆ ಇದು ಪ್ರಗತಿಪರವಾದ ರಾಜ್ಯಕ್ಕೆ ಅನ್ವಯಿಸಕ್ಕ ಮಾತಲ್ಲ. ಒಂದು ಟೀಕೆ ಮಾಡುವುದಕ್ಕಾಗೇ ನಾವಿಲ್ಲಿಗೆ ತಯಾರಾಗಿ ಬಂದಿದ್ದೇವೆಂಬ ಭಾವನೆ ಇಟ್ಟುಕೊಂಡಿರತಕ್ಕವರಿಗೆ ಪ್ರತಿಯೊಂದೂ ವಾದಗ್ರಸ್ತವಾಗೇ ಕಾಣುತ್ತದೆ. ಈ ದಿವಸ ಒಂದು ಪಾರ್ಟಿ ಬಲದಮೇಲೆ ಒಂದು

(ಶ್ರೀ ಎಸ್. ಎಂ. ಗುರೆಡ್ಡಿ)

ಕೋಮಿನ ಬಲದಮೇಲೆ ಶಿಕ್ಷಣಾಭಿವೃದ್ಧಿ ನಡೆಯುತ್ತಿದೆ ಎಂದು ಹೇಳುವುದೇ ಒಂದು ಹೇತುವಾದರೆ ಅದು ವಿದ್ಯಾ ಪ್ರಗತಿಗೆ ಸರಿಯಾದ ಹೇಳಿಕೆಯಲ್ಲ. ಈಗ ವಿದ್ಯಾಭ್ಯಾಸದ ಲೈನಿನಲ್ಲಿ ಸಾಕಷ್ಟು ಪ್ರಗತಿಯಾಗಿದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಸ್ಕಾಲರ್‌ಷಿಪ್‌ಗಳನ್ನು ಕೊಡಲಾಗುತ್ತಿದೆ. ಈ ಹಿಂದೆ ಶೇಕಡ ಎರಡು ಇದ್ದ ಸ್ಕಾಲರ್‌ಷಿಪ್‌ಗಳನ್ನು ಈಗ ಶೇಕಡ 20ಕ್ಕೆ ಏರಿಸಿದೆ. ಇದರಲ್ಲಿ ಸರ್ಕಾರ ಹಾಗೂ ಸದಸ್ಯರುಗಳ ಸಹಕಾರ ಭಾವನೆಯಿಂದ ಆಗಿರತಕ್ಕದ್ದಾಗಿದೆ. ಇದರ ಜೊತೆಗೆ ಟ್ರಿಪಲ್ ಬೆನಿಫಿಟ್‌ನ ಅನುಕೂಲತೆಯನ್ನು ಶಿಕ್ಷರಿಗೆ ಮೊದಲು ಒದಗಿಸಲಾಗಿದೆ. ನಮ್ಮ ಶಿಕ್ಷಕರಿಗೆ ಮೊದಲು ಮನಸ್ಸು ಸಂತೃಪ್ತಿ ಇರಬೇಕು. ಹಾಗಿದ್ದರೇನೆ ಅವರು ಈ ಶಿಕ್ಷಣ ಬಾಬಿನಲ್ಲಿ ಹೆಚ್ಚಿನ ಉತ್ತೇಜನದಿಂದ ಕೆಲಸ ಮಾಡಲು ಸಾಧ್ಯ. ನಮ್ಮ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ಒಳ್ಳೆ ವಿದ್ಯೆ ದೊರೆಯುತ್ತದೆ. ಆದ್ದರಿಂದ ಆ ಶಿಕ್ಷರ ಮನಸ್ಸು ತೃಪ್ತಿಯಾಗಿರುವಂತೆ ನೋಡಿಕೊಳ್ಳಬೇಕು. ಆದರೆ ನಮ್ಮ ಆರ್ಥಿಕ ಬಿಕ್ಕಟ್ಟಿನಿಂದ ಸಾಕಷ್ಟು ಪಗಾರಗಳನ್ನು ಶಿಕ್ಷಕರಿಗೆ ಕೊಡಲಾಗುತ್ತಿಲ್ಲ. ಹೀಗಾಗಿ ಈ ದಿವಸ ಆ ಶಿಕ್ಷಕರ ಮನಸ್ಸು ಹರ್ಷವಾಗಿಲ್ಲ, ಈ ಕಾರ್ಯವನ್ನು ಸರ್ಕಾರದವರು ಸಾಧಿಸಲೇ ಬೇಕಾಗಿದೆ. ನಮ್ಮ ಶಿಕ್ಷಣ ಕ್ರಮದಲ್ಲಿ ಕೆಲವು ನ್ಯಾನತೆಗಳಿವೆ. ಇಲ್ಲಿಯತನಕ ನಮ್ಮ ಶಾಲೆಗಳಲ್ಲಿ ಏನೊಂದು ಪಾಠ ಪ್ರವಚನಗಳನ್ನು ನಡೆಸಿಕೊಂಡು ಬರಲಾಗುತ್ತಿತ್ತೋ ಅದು ಕೇವಲ ನಮ್ಮ ವಿದ್ಯಾವಂತರನ್ನು ಅವರು ಶಾಲೆಯಿಂದ ಹೊರಗೆ ಬಂದನಂತರ ಅವರನ್ನು ಒಂದು ಕಾರ್ಕೂನಗಿರಿಗೋ ಅಥವಾ ಮತ್ತೆ ಯಾವುದೋ ಒಂದು ಗುಲಾಂಗಿರಿ ವೃತ್ತಿಗೋ ಒಯ್ಯುತಕ್ಕದ್ದಾಗಿತ್ತು. ಆದರೆ ಈಗ ನಮ್ಮ ಸರ್ಕಾರ ಅದನ್ನು ಬದಲಾಯಿಸಿದೆ; ಜನರು ತಮ್ಮ ಕಾಲ ಮೇಲೆ ತಾವು ನಿಲ್ಲುವಂಥ ಒಂದು ವಿದ್ಯೆಯನ್ನು ಜನರಿಗೆ ಕೊಡಲಾಗುತ್ತಿದೆ. ಆ ದೃಷ್ಟಿಯಿಂದ ನಮ್ಮಲ್ಲೀಗ ತಾಂತ್ರಿಕ ವಿದ್ಯಾಭ್ಯಾಸಕ್ಕೆ ಬಹಳ ಮಹತ್ವ ಕೊಡಲಾಗಿದೆ. ನಮ್ಮಲ್ಲಿ ನೂರಾರು ಪಾಲಿಟೆಕ್ನಿಕ್ ಶಾಲೆಗಳನ್ನು ತೆರೆಯಲಾಗಿದೆ. ಇವುಗಳನ್ನು ಇನ್ನೂ ಹೆಚ್ಚಿಗೆ ತೆರೆಯುವ ಆವಶ್ಯಕತೆ ಇದೆ. ಆದರೆ ನಮ್ಮ ಇಂದಿನ ತುರ್ತು ಪರಿಸ್ಥಿತಿಯಲ್ಲಿ ಸೈನಿಕ ಸ್ಕೂಲುಗಳನ್ನು ಹೆಚ್ಚು ಹೆಚ್ಚಾಗಿ ತೆರೆಯುವುದು ನಾಡಿನ ಶ್ರೇಯಸ್ಸಿಗೆ ಆಗತ್ಯ ಅಂತ ಹೇಳಿದ್ದಾರೆ. ಇಂಡಿಯಾ ದೇಶದಲ್ಲಿ ಈಗಾಗಲೇ ಒಂದೆರಡು ಮಿಲಿಟರಿ ಹೈಸ್ಕೂಲುಗಳು ಜಾರಿಗೆ ಬಂದಿವೆ. ನಮ್ಮ ರಾಜ್ಯದಲ್ಲೂ ಸಹ ಇಂಥ ಮಿಲಿಟರಿ ಸೈನಿಕ ಶಾಲೆಗಳನ್ನು ತೆರೆಯಲಾಗಿದೆ. ಅದಕ್ಕಾಗಿ ನಾವು ನಮ್ಮ ಮಂತ್ರಿಗಳನ್ನು ಅಭಿನಂದಿಸದೆ ಇರಲಾರೆವು. ಈ ದಿವಸ ಈ ಮಿಲಿಟರಿ ಟ್ರೈನಿಂಗ್ ಶಾಲೆಗಳು ಎಲ್ಲ ಕಡೆಗೂ ಆಗಬೇಕಾಗಿದೆ. ನಾವೆಲ್ಲರೂ ಶಿಸ್ತಿನ ಸೈನಿಕರಾಗಬೇಕು. ಹಾಗೇ ನಮ್ಮ ನುಡಿನಡೆಯಲ್ಲೂ ಶಿಸ್ತನ್ನು ಪರಿಪಾಲಿಸತಕ್ಕವರಾಗಿ ಈ ಎರಡು ಸಂಘಟನೆಗಳು ಒಂದಾಗಿರುವುದು ಅಗತ್ಯ ಅಂತ ಹೇಳುತ್ತೇನೆ. ಹೀಗೆ ನಮ್ಮ ಜನರನ್ನು ಎಲ್ಲ ರಂಗದಲ್ಲೂ ನಾಗರೀಕರನ್ನಾಗಿ ಮಾಡಲು ಅವರಿಗಾಗಿ ಈಗ 19 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಇದಕ್ಕೆ ಇನ್ನೂ ಹೆಚ್ಚು ಹಣ ಖರ್ಚುಮಾಡಲು ಪ್ರಯತ್ನ ಮಾಡಿ ನಮ್ಮ ರಾಜ್ಯವನ್ನು ಮುಂದೆ ಬರುವಂತೆ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ.

ಶ್ರೀ ಎನ್. ನಂಜೇಗೌಡ (ಕೃಷ್ಣರಾಜ ಪೇಟೆ). –ಮಾನ್ಯ ಸಭಾಪತಿಗಳೇ, ಈಗ ಸಭೆಯ ಮುಂದಿರತಕ್ಕ ಡಿಮ್ಯಾಂಡನ್ನು ನಾನು ಅನುಮೋದಿಸುವುದಾಗಿದ್ದರೂ ಇದರಲ್ಲಿರತಕ್ಕ ಕೆಲವು ಅಂಶಗಳನ್ನು ವಿರೋಧಿಸಲು ಇಷ್ಟಪಡುತ್ತೇನೆ.

ಈ ವಿದ್ಯಾ ಸಂಸ್ಥೆಯೆಂಬುದು ಬಹಳ ಪವಿತ್ರವಾದುದು, ಈ ಸಂಸ್ಥೆಗಳಲ್ಲಿ ವಿದ್ಯಾರ್ಜನೆ ಮಾಡತಕ್ಕ ಜನರು ಒಳ್ಳೆಯ ವಿದ್ಯೆಕಲಿತು, ಅವರು ಸುಶಿಕ್ಷಿತರೂ–ಒಳ್ಳೆಯ ಸಂಸ್ಕೃತಿಯುಳ್ಳವರೂ ಆಗಿ ಬರುವಂಥ ಅವಕಾಶವಿರಬೇಕು. ಜನರಿಗೆ ಒಳ್ಳೆಯ ಆರೋಗ್ಯವಿರಬೇಕೆಂಬುದು ಎಷ್ಟು ಮುಖ್ಯವೋ ಅವರಿಗೆ ಒಳ್ಳೆ ವಿದ್ಯೆ ಇರಬೇಕೆಂಬುದೂ ಅಷ್ಟೇ ಮುಖ್ಯವೆಂದು ನಾನು ಹೇಳುತ್ತೇನೆ. ಈ ಹಿಂದೆ ಹುಡುಗರನ್ನು ಆಶ್ರಮಗಳಿಗೆ ಕಳುಹಿಸಿ, ಅಲ್ಲಿ ಯಾವ ಒಂದು ದುಷ್ಟ ಪದ್ಧತಿಗೂ ಅವಕಾಶವಿರದಂತೆ ತಡೆಗಟ್ಟಿ ಅಲ್ಲಿ ಹುಡುಗರನ್ನು ಸುಸಂಸ್ಕೃತರನ್ನಾಗಿಯೂ, ಸುಶಿಕ್ಷಿತರನ್ನಾಗಿಯೂ ತರಬೇತು ಮಾಡುತ್ತಿದ್ದರು. ಆದರೆ ಈಗಿನ ವಿದ್ಯಾಭ್ಯಾಸದ ಕ್ರಮವೇ ಒಂದು ರೀತಿಯಾಗಿದೆ. ಈ ದಿನ ಈ ವಿದ್ಯಾಭ್ಯಾಸ ಬರಿ ಒಂದು ರಾಜಕೀಯ ಭಾವನೆ ಮೇಲೆ ಬೆಳೆಯುತ್ತ ಇದರ ಮೂಲೋದ್ದೇಶವೇ ತಪ್ಪಿಹೋಗಿದೆ. ಆದರೆ ನಮ್ಮ ಶ್ರೀಮಾನ್ ಗುರೆಡ್ಡಿಯವರು ಸ್ಕಾಲರ್‌ಷಿಪ್‌ಗಳನ್ನು ಸರಿಯಾಗಿ ಹಂಚಲಾಗುತ್ತಿದೆ ಇತ್ತೀಚೆಗೆ ಸ್ಕಾಲರ್‌ಷಿಪ್‌ಗಳನ್ನು ಹೆಚ್ಚು ಮಾಡಲಾಗಿದೆ, ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಗಳನ್ನು ತೆರೆಯಲಾಗಿದೆ, ಹೀಗೆಲ್ಲ ವಿದ್ಯಾಭ್ಯಾಸ ಮುಂದುವರಿಯುತ್ತಿದ್ದರೂ ವೃಥಾ ಟೀಕೆಗಳನ್ನು ಮಾಡುತ್ತಿದ್ದಾರೆಂತ ಹೇಳಿದರು. ಆದರೆ ನಾನೀಗ ಒಂದೆರಡು ಉದಾಹರಣೆಗಳನ್ನು ಕೊಡುತ್ತ ಈ ಸ್ಕಾಲರ್‌ಷಿಪ್‌ಗಳನ್ನು ಹಂಚುವ ನೀತಿ ಏನಾಗಿದೆ ಎಂಬುದನ್ನು ಹೇಳುತ್ತೇನೆ. ಈ ದಿವಸ ಈ ಸ್ಕಾಲರ್‌ಷಿಪ್‌ಗಳನ್ನು ಯಾವ ರೀತಿ ಹಂಚಲಾಗುತ್ತಿದೆ, ಇವು ಯಾರಿಗೆ ದೊರೆಯುತ್ತಿವೆ,

ಬಡವರಿಗೇ ಅಥವಾ ಮತ್ತ್ಯಾರಿಗೆ ಎಂಬುದನ್ನು ತಿಳಿಸಬೇಕಾಗಿದೆ. ಈ ದಿವಸ ಮೈಸೂರಿನಲ್ಲಿ 16 ಹೈಸ್ಕೂಲುಗಳಿವೆ, ಅಲ್ಲಿರತಕ್ಕ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 9,000. ಅಲ್ಲಿ ಸ್ಕಾಲರ್‌ಷಿಪ್‌ಗಾಗಿ 980 ಅರ್ಜಿಗಳು ಬಂದಿದ್ದವು. ಆ ಪೈಕಿ 843 ಜನರಿಗೆ ಸ್ಕಾಲರ್‌ಷಿಪ್ ಸಿಕ್ಕಿದೆ. ಆದರೆ ಇದೇ ಬೆಂಗಳೂರಲ್ಲಿ 26 ಹೈಸ್ಕೂಲುಗಳಿವೆ. 19 ಸಾವಿರ ವಿದ್ಯಾರ್ಥಿಗಳಿದ್ದಾರೆ. 1,800 ಅಪ್ಲಿಕೇಷನ್‌ಗಳು ಬಂದಿದ್ದವು. ಇಲ್ಲಿ 538 ಹುಡುಗರಿಗೆ ಸ್ಕಾಲರ್‌ಷಿಪ್ ಕೊಡಲಾಗಿದೆ. ಇನ್ನು ನಮ್ಮ ಕೃಷ್ಣರಾಜಪೇಟೆ ಯಲ್ಲಿ ಆರು ಹೈಸ್ಕೂಲುಗಳಿವೆ. 900 ಹುಡುಗರಿದ್ದಾರೆ. ಅಲ್ಲಿ 93 ಜನರಿಗೆ ಸ್ಕಾಲರ್‌ಷಿಪ್ ಕೊಟ್ಟಿದ್ದಾರೆ. ಅರಕಲಗೂಡಿನಲ್ಲಿ ಆರು ಹೈಸ್ಕೂಲುಗಳಿವೆ. ಅಲ್ಲಿ ಒಟ್ಟು 1,650 ಹುಡುಗರಿದ್ದಾರೆ. ಅಲ್ಲಿ 80 ಜನರಿಗೆ ಸ್ಕಾಲರ್‌ಷಿಪ್ ಕೊಟ್ಟಿದ್ದಾರೆ. ಹೀಗೆ ಈ ದಿವಸ ಈ ಸ್ಕಾಲರ್‌ಷಿಪ್‌ಗಳನ್ನು ಯಾವ ನೀತಿಯ ಮೇಲೆ ಕೊಡುತ್ತಿದ್ದಾರೆಂಬುದೇ ಗೊತ್ತಾಗುವುದಿಲ್ಲ. ಈ ಸ್ಕಾಲರ್‌ಷಿಪ್ ಕೊಡತಕ್ಕ ವಿಚಾರದಲ್ಲಿ ಇನ್‌ಸ್ಟ್ರಕ್ಷನ್ ಗೈಡ್ ಎಂತ ಒಂದಿದೆ. ಆ ಗೈಡಿನಲ್ಲಿ ಒಂದು ಹೈಸ್ಕೂಲಿನಲ್ಲಿ ಎಷ್ಟು ಜನ ವಿದ್ಯಾರ್ಥಿಗಳಿದ್ದಾರೆ, ಎಷ್ಟು ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್‌ಕೊಡಬೇಕು ಅನ್ನತಕ್ಕದ್ದನ್ನೆಲ್ಲ ಆ ಗೈಡಿನಲ್ಲಿ ಕೊಟ್ಟಿದ್ದಾರೆ. ಸ್ಕಾಲರ್‌ಷಿಪ್ ಕೊಡುವ ವ್ಯವಸ್ಥೆ ಒಂದೊಂದು ಕಡೆ ಒಂದೊಂದು ವಿಧದಲ್ಲಿದೆ. ಇದು ಸಮರ್ಪಕವಾಗಿರಬೇಕು. ಸ್ಕಾಲರ್‌ಷಿಪ್ ಕೊಡಬೇಕಾದರೆ 1,200 ರೂಪಾಯಿಗಿಂತ ಕಡಮೆ ವರಮಾನವಿರುವವರಿಗೆ ಮಾತ್ರ ಕೊಡಬೇಕೆಂದಿದೆ. ಆದರೆ ಒಂಭತ್ತು ಸಾವಿರ ಹುಡುಗರಿರುವ ಕಡೆ 980 ಜನ ಸ್ಕಾಲರ್‌ಷಿಪ್ ಪಡೆಯಲು ಲಾಯಖ್ ಆಗಿದ್ದವರು ಮಾತ್ರ ಅರ್ಜಿಹಾಕಿದ್ದಾರೆ. ಉಳಿದ 8,000 ಜನರು ಸ್ಕಾಲರ್‌ಷಿಪ್ ಪಡೆಯಲು ಅರ್ಹರಲ್ಲ. ಇಂಥ ಕಡೆ 843 ಜನಗಳಿಗೆ ಸ್ಕಾಲರ್‌ಷಿಪ್ ಕೊಟ್ಟು, 900 ಹುಡುಗರಿರುವ ಕಡೆ 725 ಜನ ಅರ್ಜಿ ಹಾಕಿದ್ದವರಲ್ಲಿ 93 ಜನಗಳಿಗೆ ಮಾತ್ರ ಕೊಟ್ಟಿದ್ದಾರೆ. 19 ಸಾವಿರ ವಿದ್ಯಾರ್ಥಿಗಳಿರುವ ಕಡೆ 1,800 ಅರ್ಜಿಗಳು ಬಂದಿದ್ದು 538 ಹುಡುಗರಿಗೆ ಸ್ಕಾಲರ್‌ಷಿಪ್ ಕೊಟ್ಟಿದ್ದಾರೆ. ಇದು ಯಾವ ನೀತಿ ? ಸ್ಕಾಲರ್‌ಷಿಪ್ ಕೊಡುವುದು ಬಡವರಿಗೆ. ಇದಕ್ಕೆ ಒಂದು ನೀತಿ ಇರಬಾರದೇ ? ಒಂದು ನಿಯಮ ಬೇಡವೇ ? ಬಡವರಿಗೆ ಸರಿಯಾಗಿ ನ್ಯಾಯ ದೊರೆಯುತ್ತಿಲ್ಲವೆನ್ನುವುದಕ್ಕೆ ಒಂದು ನಿದರ್ಶನವನ್ನು ಕೊಡುತ್ತೇನೆ. ಸ್ಕಾಲರ್‌ಷಿಪ್ ಕಮಿಟಿಯಲ್ಲಿ 20 ಜನ ಸದಸ್ಯರಿದ್ದಾರೆ. ಹಿಂದೆ ಡಿಸ್ಟ್ರಿಕ್ಟಿಗೆ ಎಂಟು ಜನ ಮಾತ್ರ ಇರುತ್ತಿದ್ದರು, ಈಗ ತಾಲ್ಲೂಕಿಗೆ 23 ಜನ. ಇವರು ಎಷ್ಟು ಜನರಿಗೆ ಸ್ಕಾಲರ್‌ಷಿಪ್ ಕೊಡಬೇಕೋ ಅದನ್ನು ಪಾಲು ಮಾಡಿಕೊಂಡು ತಮಗೆ ಬೇಕಾದವರ ಮೂರು-ನಾಲ್ಕು ಹೆಸರುಗಳನ್ನು ಹೇಳುತ್ತಾರೆ. ಇದರಿಂದ ಯಾವ ನೀತಿಯೂ ಅನುಸರಿಸಿದಂತಾಗಲಿಲ್ಲ ಮತ್ತು ಬಡವರಿಗೆ ಸ್ಕಾಲರ್‌ಷಿಪ್ ಸಿಕ್ಕುವುದಿಲ್ಲ. 1,200 ರೂಪಾಯಿಗಳೊಳಪಟ್ಟು ಬರುವವರಿಗೆ merit ಮೇಲೆ ಸ್ಕಾಲರ್‌ಷಿಪ್ ಕೊಡಲು ಅಡ್ಡಿ ಏನಿದೆ ? ಅದಕ್ಕೆ ಇಷ್ಟು ಜನರನ್ನೊಳಗೊಂಡ ಒಂದು ದೊಡ್ಡ ಸಮಿತಿ ಏಕೆ ? ಕಮಿಟಿಯಲ್ಲಿ ವಿದ್ಯಾ ಇಲಾಖೆಯವರು ಇರುತ್ತಾರೆ ಅವರ ಜೊತೆಗೆ ಒಬ್ಬಿಬ್ಬರು ಸ್ಥಳದ ದೊಡ್ಡ ಮನುಷ್ಯರನ್ನು ನಾಮಕರಣ ಮಾಡಿ ಬಡತನ ಮತ್ತು merit ಈ ಆಧಾರದ ಮೇಲೆ ಹಂಚಿದರೆ ಆವಾಗ ಒಂದು ತತ್ವ ನೀತಿ ಇರುತ್ತದೆ. ಅದಿಲ್ಲದೆ ಒಂದು ರಾಜಕೀಯ ಪಕ್ಷವನ್ನೇ ಈ ಕಮಿಟಿಗಳಲ್ಲಿ ತುಂಬಿ ಒಂದು ಗುಂಪಿನ ಮನೋಭಾವವನ್ನು ಬೆಳಸುವುದು ನೀತಿಯಲ್ಲ. ಈ ಕಮಿಟಿಯನ್ನು ಮಾಡಿರುವುದರಲ್ಲಿ ಕೂಡ ವಿದ್ಯಾ ಸಚಿವರು ರಾಜಕೀಯ ಮಾಡುತ್ತಿದ್ದಾರೆ. ನಿನ್ನೆಯ ದಿನ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಒಂದು ವಿಷಯ ಹೇಳಿದರು. ಅದಕ್ಕೆ ಅಷ್ಟೇ ಪ್ರಾಶಸ್ತ್ಯವಿದೆ. ಕಮಿಟಿ ಮೆಂಬರುಗಳ ಪಟ್ಟಿಯನ್ನು ತರಿಸಿಕೊಂಡು ನೋಡಿದರೆ ಮಾನ್ಯ ಮುಖ್ಯ ಮಂತ್ರಿಯವರಿಗೆ ಅರ್ಥವಾಗುತ್ತದೆ, ಮುಖ್ಯ ಮಂತ್ರಿಗಳು ಇದನ್ನು ಗಮನಿಸಬೇಕೆಂದು ನಾನು ಹೇಳುತ್ತೇನೆ.

9-00 A.M.

ಕೃಷ್ಣರಾಜ ಪೇಟೆ ತಾಲ್ಲೂಕಿನಲ್ಲಿ 1,30,000 ಜನ ಸಂಖ್ಯೆ ಇದೆ, ಇಲ್ಲಿ ಒಂದು ಪಾಲಿಟೆಕ್ನಿಕ್ ಸ್ಕೂಲು ಇದೆ; ಇದಕ್ಕೆ ಒಂದು ಕಮಿಟಿ ನೇಮಕ ಮಾಡಬೇಕಾದರೆ ಈತಾಲ್ಲೂಕಿನಲ್ಲಿ ಲಾಯಖಾದವರು ಯಾರೂ ಇರಲಿಲ್ಲವೇ ? ಕಾಂಗ್ರೆಸ್ ಪಕ್ಷದವರೂ ಇರಲಿಲ್ಲವೇ ? ನೀತಿವಂತರಿರಲಿಲ್ಲವೇ ? ಈ ತಾಲ್ಲೂಕಿನವರನ್ನು ಬಿಟ್ಟು ಬೇರೆ ತಾಲ್ಲೂಕಿನವರನ್ನು ಅಲ್ಲಿಗೆ ಹಾಕುವುದು ಎಂದರೆ ಆ ತಾಲ್ಲೂಕಿನ ಜನಗಳ ಸ್ಥಿತಿ ಏನು, ಎನ್ನುವುದನ್ನು ಯೋಚನೆ ಮಾಡಿ. ನಮ್ಮ ವಿದ್ಯಾ ಮಂತ್ರಿಗಳು ಈ ಸ್ಥಾನದಲ್ಲಿದ್ದರೆ ಅವರ ಪರಿಸ್ಥಿತಿ ಏನಾಗುತ್ತಿತ್ತು ಎಂದು ಯೋಚನೆಮಾಡಿ.

ಶ್ರೀ ಎಸ್. ಆರ್. ಕಂಠಿ (ವಿದ್ಯಾ ಶಾಖೆಯ ಮಂತ್ರಿಗಳು).—ಮಾನ್ಯ ಸದಸ್ಯರಾದ ನಂಜೇಗೌಡರು ಆಗಲೇ ಈ ವಿಚಾರವಾಗಿ ನನ್ನನ್ನೂ ಕಂಡು ಕೆಲವು ಹೆಸರುಗಳು ಬಿಟ್ಟು ಹೋಗಿವೆ ಎಂದು ಹೇಳಿದರು. ಎರಡನೆಯ ತಾಲ್ಲೂಕಿನವರನ್ನೆ ಹಾಕಿದ್ದಾರೆ ಎನ್ನುವುದು-ಆಶ್ಚರ್ಯದ ಸಂಗತಿ. ಅವರು ಮೊದಲೇ ಹೇಳಿದ್ದರೆ, ಅದರ ಬಗ್ಗೆ ನೋಡಿ ಕ್ರಮ ತೆಗೆದುಕೊಳ್ಳುತ್ತಿದ್ದೆ.

ಶ್ರೀ ಎಚ್. ನಂಜೇಗೌಡ.—ಕಮಿಟಿ ರಚನೆ ಯಾದ ಕೂಡಲೇ ನಾನು ಒಂದು ಮನವಿಯನ್ನು ಬರೆದು ಕೊಟ್ಟಿದ್ದೇನೆ. ಸ್ಕಾಲರ್‌ಷಿಪ್ ಕಮಿಟಿ ಕೆಲಸ ಮುಗಿದನಂತರ ನನ್ನ ಮನವಿಯನ್ನು ಗಮನಕ್ಕೆ ತೆಗೆದುಕೊಂಡಿದ್ದಾರೆಂದು ಕಾಣುತ್ತದೆ. ಒಂದು ಅಧಿಕಾರ ಸ್ಥಾನದಲ್ಲಿರುವಾಗ ಇತರರಿಗೆ ಮಾರ್ಗದರ್ಶಕರಾಗಿರುವಂತಹ ನೀತಿಯನ್ನು ಹಾಕಬೇಕು. ನಾನು ತಮ್ಮಲ್ಲಿ ಬಂದು ಕೇಳಿದಾಗ ತಾವು ಏನೋ ಹೇಳಿದಿರಿ. ಅಧಿಕಾರ ಸ್ಥಾನದಲ್ಲಿದ್ದರೂ ಕೂಡ ಇನ್ನೊಬ್ಬರಿಗೂ ಮನುಷ್ಯತ್ವವಿದೆ ಎಂದು ತಿಳಿದು ತಾವು ಮಾಡುವ ಕೆಲಸ ಒಂದು ನೀತಿಯ ಮೇಲೆ ಅವಲಂಬಿಸಿರಬೇಕು. ಯಾರೋ ಒಬ್ಬರು ಹೇಳುತ್ತಾರೆಂದು ಅದರಂತೆ ನಡೆಯುವುದು ನೀತಿಯಲ್ಲ ; ಯಾವ ದುರುದ್ದೇಶದಿಂದಲೂ ಕೂಡ ಇನ್ನು ಮುಂದಾದರೂ ಮಾಡಬಾರದೆಂದು ಪ್ರಾರ್ಥನೆ ಮಾಡುತ್ತೇನೆ.

ಕಾಲೇಜುಗಳ ವಿಷಯದಲ್ಲಿ ಒಂದೆರಡು ಮಾತನ್ನು ಹೇಳುತ್ತೇನೆ. ಸೆಂಟ್ರಲ್ ಕಾಲೇಜಿನಲ್ಲಿ ಎಂ. ಎ. ತರಗತಿಗಳನ್ನು ತೆರೆದಿದ್ದಾರೆ. ಇದರಲ್ಲಿ ಮೂರು ಸೆಕ್ಷನ್‌ಗಳಿವೆ. ಇಲ್ಲಿ ಕೆಲಸ ಮಾಡತಕ್ಕವರು ಯಾರು ಎಂದರೆ ಒಬ್ಬ tutor. ಎಂ. ಎ. ತರಗತಿಗಳನ್ನು ತೆಗೆದುಕೊಳ್ಳಲು ಅನುಭವವಿರುವವರೂ, ಸರ್ವಿಸ್ ಆದವರೂ ಆದ ಒಬ್ಬರು ಮೈಸೂರು ಮಹಾರಾಜ ಕಾಲೇಜಿನಲ್ಲಿದ್ದವರು ಇಪ್ಪತ್ತು ವರ್ಷ ಸರ್ವೀಸಾದವರು ಇರಬೇಕಾದರೆ ಒಬ್ಬ tutorನ್ನು ನೇಮಕ ಮಾಡಿರುವುದು ಕೋಮುವಾರು ಭಾವನೆಯಲ್ಲದೆ ಮತ್ತೇನು ? Tutor ಆದವರು ಎಂ. ಎ. ತರಗತಿಗಳನ್ನು ತೆಗೆದುಕೊಂಡರೆ ವಿದ್ಯಾರ್ಥಿಗಳ ಗತಿಏನು ? ವಿದ್ಯಾ ಸಂಸ್ಥೆ ಹೇಗೆ ಉಳಿಯುತ್ತದೆ ? ಇದರಲ್ಲಿ ಏನಾದರೂ ನೀತಿ ಇದೆಯೇ ? ಸರ್ವಿಸ್ ಆದವರೂ, ಪಿ. ಎಚ್. ಡಿ. ಪಡೆದವರೂ, ಹರಿಜನ ಕೋಮಿಗೆ ಸೇರಿದವರೂ ಆದ ಒಬ್ಬರು ಸೆಂಟ್ರಲ್ ಕಾಲೇಜಿನಲ್ಲಿ ಇದ್ದಾರೆ. ಅವರೆನ್ನೆಲ್ಲ ಬಿಟ್ಟು ಟ್ಯೂಟರ್ ಆದವರನ್ನು ನೇಮಿಸಿದರೆ ವಿದ್ಯಾಭ್ಯಾಸದ ಮಟ್ಟ ಹೇಗೆ ಇರುತ್ತದೆ ? ಯಾವ ಮಟ್ಟದಲ್ಲಿ ಬೆಳೆದೀತು ಎನ್ನುವುದನ್ನು ಮಾನ್ಯ ವಿದ್ಯಾ ಮಂತ್ರಿಗಳು ಗಮನಿಸಬೇಕು.

ಇನ್ನೂ ಹೇಳುವ ವಿಷಯಗಳು ಅನೇಕ ಇದ್ದುವು. ಆದರೆ ಅಧ್ಯಕ್ಷರು ವೇಳೆಯಾಯಿತೆಂದು ಹೇಳುತ್ತಿದ್ದಾರೆ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Smt. VIJAYA RAGHAVENDER RAO DESAI (Chitapur) Sir, I support the demand placed before the House today. Due to pressure of time, I would not speak much about this Demand.

We have been given a note about the achievements of the Education Department during the year 1962-63. Many Hon'ble Members have already given valuable suggestions and I would not dwell on them.

We all know that in the field of education, the responsibility does not primarily lie on Government alone, the public also should share the responsibility. I would like to state that in spite of the greatest attention being given to the spread of education since the beginning of this century, very little progress has been *achieved*. The standard of education is going down so steeply that I would not like to say anything about it. The foundation, for all inventions and discoveries in the scientific and other fields, is education. Education is stem from which shoots like agriculture, science spring np.

The budget provision for education is 18.79 crores. Out of that primary education alone accounts for 9 and odd crores. I would like to ask the Government whether this large amount has been utilised properly. What is the standard of the teachers who teach primary classes ? I am of opinion that women are best suit d to handle primary education. I have already said during the general discussion on budget that primary education should he handed over to women and there should be a separte Directorate for Girl's Education and Primary Education. We have a responsibility to future generations because we have to prepare doctors, lawyers and engineers. We know the pains and difficulties in

bringing up a child. I therefore request the Government to consider my suggestions and take necessary action.

The budget estimates for Sanskrit education is 3½ lakhs. We know that Sanskrit is the main stem for most of the languages in India.

Even then we are not giving that much of attention and encouragement for Sanskrit. We are absolutely pushing it into oblivion. As we know Sanskrit is one of the sweet languages. Here, I would suggest that even though for the public examination they do not want to make this as a compulsory subject, let them keep it as a compulsory subject for 8th, and 9th and 10th standards so that Sanskrit may get a little encouragement as the oldest Indian language.

I have already said as regards vocational Institute for Gulbarga, that has been closed with an intention to start a polytechnic for girls. I do not know how far the Government is moving and I feel that polytechnic is necessary for the Hyderabad Karnatak area.

As far as Kannada is concerned, I keep it at the summit of my mind. I love it; I have the highest respect and reverence that it needs. But even then we cannot do only with Kannada for the study of applied science, for some of the research studies and schemes of research we must have English. We cannot discard English at this moment. I believe when I was a research student we were not only using English journals but also we had to use French and German journals. We had to pass some examinations in German and French. So I think English must have a little more encouragement and the standard of English should be raised. The other day somebody was speaking about Regional English language Institute for the southern States that has been established in Bangalore. In order to improve the standard of teaching in schools that institute is having a sum of about Rs. 5,04,000 and I believe the Andhra Government has also accorded sanction for Rs. 1,40,000 being their share for this institution. So, I request the Government to see that students come forward for taking advantage of this institute.

We are happy in having a Sainik School in Bijapur. Still I would ask the Government whether they can consider the proposal having some residential schools also. We must have one residential school for each division. The cost is not very much for it will require about Rs. 18 lakhs, and I think 150 to 200 acres of land is required for residential schools. About Rs. 15 to 20 lakhs are required as capital expenditure including building for main schools and also building for a hostel. I believe recurring expenditure will not exceed more than Rs. 50,000. So, I request the Government to consider this proposal. I thank the Chair for having given me just five minutes for offering my remarks. I support the Demand.

† ಶ್ರೀ ಇ. ನಾರಾಯಣ ಗೌಡ (ಬಂಗಾರಪೇಟೆ).—ಮಾನ್ಯ ಅಧ್ಯಕ್ಷರೇ, ಈ ದಿನ ವಿದ್ಯಾ ಮಂತ್ರಿಗಳು ಈ ಸಭೆಯ ಮುಂದಿಟ್ಟಿರತಕ್ಕ ಡಿಮ್ಯಾಂಡನ್ನು ವಿರೋಧಿಸುತ್ತಾ ಈ ಇಲಾಖೆಯಲ್ಲಿರುವ ಕೆಲವು ಲೋಪದೋಷಗಳನ್ನು ಈ ಸಮಯದಲ್ಲಿ ವ್ಯಕ್ತಪಡಿಸಲಿಚ್ಛಿಸುತ್ತೇನೆ.

(ಶ್ರೀ ಇ. ನಾರಾಯಣಗೌಡ)

ಸ್ವಾಮೀ, ಈ ಇಲಾಖೆ ಬಹಳ ಹಿಂದಿನಿಂದಲೂ ಸಾರ್ವಜನಿಕರ ಒಂದು ಗೌರವಕ್ಕೆ ಪಾತ್ರವಾಗಿತ್ತು. ಈಚೆಗೆ ದೇಶದಲ್ಲಿ ಈ ಇಲಾಖೆಯ ವಿಚಾರವಾಗಿ ಅನೇಕ ಭಿನ್ನಾಭಿಪ್ರಾಯಗಳೂ, ಅಸಮಾಧಾನಗಳೂ ವ್ಯಕ್ತಪಡುತ್ತಿವೆ. ಇದಕ್ಕೆ ಮೂಲಭೂತವಾದ ಕಾರಣವೇನೆಂದು ವಿಚಾರ ಮಾಡಿದರೆ, ಈ ಇಲಾಖೆಯಲ್ಲಿ ಶ್ರೀಮಾನ್ ಕಂಠಿಯವರು ವಿದ್ಯಾಮಂತ್ರಿಗಳಾದ ಮೇಲೆ ; ವೈಯ್ಯಕ್ತಿವಾಗಿ ಶ್ರೀಮಾನ್ ಕಂಠಿಯವರಲ್ಲಿ ನಮಗೆ ಗೌರವವಿದೆ, ಏಕೆಂದರೆ ಹಿಂದೆ ಅವರು ಈ ಸಭೆಯ ನಾಯಕರಾಗಿದ್ದವರು ಎಂದು ಅವರ ವಿಚಾರವಾಗಿ ಬಹಳ ಗೌರವ ತೋರಿಸಿದ್ದೇವೆ. ಆದರೆ ಅವರು ಈ ವಿದ್ಯಾ ಇಲಾಖೆಯನ್ನು ವಹಿಸಿಕೊಂಡ ಮೇಲೆ ಇದರಲ್ಲಿ ನಡೆಯತಕ್ಕ ಕೆಲ ಕೆಲವು ವಿಚಾರಗಳನ್ನು ನೋಡಿದರೆ ನಿಜವಾಗಿಯೂ ಅವರು ಈ ದೇಶದಲ್ಲಿ ಜನರ ಮತ್ತು ಎಲ್ಲ ಸದಸ್ಯರುಗಳ ಒಂದು ವಿಶ್ವಾಸವನ್ನು ಕಳೆದುಕೊಂಡಿದ್ದಾರೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಈ ಇಲಾಖೆಯಲ್ಲಿ ಒಂದು ಜಾತೀಯತೆಯ ವಿಷಬೀಜವನ್ನು ಬಿತ್ತಿ ದೇಶದ ಜನತೆಯಲ್ಲಿ ಒಂದು ಅಸಮಾಧಾನವನ್ನುಂಟುಮಾಡುತ್ತಿದ್ದಾರೆ. ಒಂದು ಉದಾಹರಣೆ ಹೇಳುತ್ತೇನೆ. Appointment of a Joint Director in G. O. No. E.D. 27, dated 25th January 1963. ಶಿಕ್ಷಣ ಇಲಾಖೆಯಲ್ಲಿ ಈ ಜಾಯಿಂಟ್ ಡೈರೆಕ್ಟರ ನೇಮಕ ಮಾಡಿರುವುದು ಹೇಗಿದೆ ಎಂದರೆ ಸೀನಿಯರು ಡೈರೆಕ್ಟರಾಗಿರುವವರೊಬ್ಬರನ್ನು ಕೈ ಬಿಟ್ಟು ಅವರಿಗಿಂತ ಹದಿನೆಂಟು ತಿಂಗಳು ಜೂನಿಯರಾಗಿರುವ ತಮ್ಮ ಸ್ವಜಾತಿಯ ಒಬ್ಬ ಅಧಿಕಾರಿಗಳನ್ನು ನೇಮಕ ಮಾಡಿಕೊಂಡಿದ್ದಾರೆ. ಈ ಬಗ್ಗೆ ಅವರು ಮೊನ್ನೆ ಹೇಳಿಕೆ ಕೊಡುವಾಗ ಅವರು ಸೀನಿಯಾರಿಟಿ ಲಿಸ್ಟಿನಲ್ಲಿ ಅವರ ಹೆಸರಿರಲಿಲ್ಲ ಎಂದು ಈ ಸೀನಿಯರು ಆಫೀಸರನ್ನು ನೇಮಿಸಿರುವುದು ತಪ್ಪು ಎಂದು ಹೇಳಿದರು. ಇದರಲ್ಲಿರುವಂತೆ 15-7-1958 ರಲ್ಲಿ Dr. Thimmaiah ಎಂಬುವರು ಸೀನಿಯರು ಡೈರೆಕ್ಟರಾಗಿದ್ದರು.

Mr. SPEAKER.—He should omit mentioning of names on the floor of the House.

ಶ್ರೀ ಇ. ನಾರಾಯಣ ಗೌಡ.—ಇವರಿಗಿಂತ ಹದಿನೆಂಟು ತಿಂಗಳು ಜೂನಿಯರು ಆಗಿರುವ ಅಧಿಕಾರಿಯೊಬ್ಬರನ್ನು ಶಿಕ್ಷಣ ಖಾತೆಯ ಜಾಯಿಂಟು ಡೈರೆಕ್ಟರಾಗಿ ನೇಮಕ ಮಾಡಿದ್ದಾರೆನ್ನುವ ವಿಚಾರ ಇದರಿಂದ ಗೊತ್ತಾಗುತ್ತದೆ. ಇಷ್ಟು ಜಾತೀಯ ಅಭಿಮಾನದಿಂದ ಈ ದೇಶಕ್ಕೆ ಅನ್ಯಾಯ ಮಾಡುತ್ತಿದ್ದಾರೆ ಎಂದು ವಿಷಾದದಿಂದ ಈ ಸಭೆಗೆ ತಿಳಿಸಬೇಕಾಗಿದೆ.

ಎರಡನೇದಾಗಿ ಸ್ಕಾಲರುಷಿಪ್ಪು ಕಮಿಟಿಗಳ ವಿಚಾರವಾಗಿ ಅನೇಕ ಮಾನ್ಯ ಸದಸ್ಯರುಗಳು ಈಗಾಗಲೇ ತಮ್ಮ ಅಸಮಾಧಾನವನ್ನು ವ್ಯಕ್ತಮಾಡಿದ್ದಾರೆ. ಪ್ರಶ್ನೋತ್ತರ ಕಾಲದಲ್ಲೂ ಸಹ ಇದರ ಬಗ್ಗೆ ಅನೇಕ ಪ್ರಶ್ನೆಗಳು ಉದ್ಭವಿಸಿವೆ. ಉದಾಹರಣೆಯಾಗಿ ಹೇಳಬೇಕಾದರೆ, K. G. F. Mining School ನಲ್ಲಿರುವ ಸ್ಕಾಲರುಷಿಪ್ಪು ಕಮಿಟಿಗೆ ಹೊರಗಿನಿಂದ ಬೇರೆ ತಾಲ್ಲೂಕಿನಿಂದ ಚುನಾಯಿತರಾಗಿರುವ ಬಂದಿರಾವ ಎಂ.ಎಲ್.ಎ.ಯನ್ನು ನೇಮಿಸಿದ್ದಾರೆ. ಹಾಗೂ K.G.F. ಮೈನಿಂಗ್ ಬೋರ್ಡಿನಿಂದ ಬರುವ ಎಂ. ಎಲ್. ಎ. ಒಬ್ಬರನ್ನು ನೇಮಿಸಿ, ಅಲ್ಲೇ ಇದ್ದ ಇನ್ನೊಬ್ಬರು ಎಂ. ಎಲ್. ಎ. ಯನ್ನು ಹಾಗೇ ಕೈ ಬಿಟ್ಟಿದ್ದಾರೆ. ಇದನ್ನು ವಿಚಾರಮಾಡಿ ನೋಡಿದರೆ, ಎಷ್ಟು ಮಟ್ಟಿಗೆ ಪಕ್ಷಪಾತ ತೋರಿಸುತ್ತಿದ್ದಾರೆ ಎನ್ನುವುದು ನಮಗೆ ವ್ಯಕ್ತವಾಗುತ್ತದೆ. ಈ ರೀತಿ ವಿದ್ಯಾ ಖಾತೆಯಲ್ಲಿ ಒಂದು ರಾಜಕೀಯ ಮನೋಭಾವ ಬಂದು ಇಡೀ ಜನತೆಯ ಒಂದು ಅಸಮಾಧಾನಕ್ಕೆ ಗುರಿಯಾಗುತ್ತಿರುವ ನಮ್ಮ ವಿದ್ಯಾಮಂತ್ರಿಗಳಲ್ಲಿ ನಾನು ಈ ಸಮಯದಲ್ಲಿ ಪ್ರಾರ್ಥಿಸುವುದು ಏನೆಂದರೆ ಅವರು ತಮ್ಮ ಖಾತೆಯನ್ನು ಪೂರ್ತಿಯಾಗಿ ಶ್ರೀಮತಿ ಗ್ರೇಸ್ ಟಕ್ಕರವರಿಗೆ ವಹಿಸಿ ಇವರು ಯಾವುದಾದರೂ ಒಂದು ಮಠಕ್ಕೆ ಮಠಾಧಿಪತಿಗಳಾಗುವುದು ಒಳ್ಳೆಯದು ಎಂದು ನಾನು ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. (ನಗು)

ಆ ಮೇಲೆ ಟೆಕ್ಸ್ಟ್ ಬುಕ್ ಕಮಿಟಿಗಳೆಂದು ಮಾಡಿದ್ದಾರೆ. ಇವೊತ್ತಿನವರೆಗೂ ಅನೇಕ ಪ್ರೈಮರಿ ಶಾಲೆಗಳ ಮಕ್ಕಳಿಗೆ ಟೆಕ್ಸ್ಟ್ ಬುಕ್ಕುಗಳು ಹೊರಕ್ಕೆ ಬಂದಿಲ್ಲ. ಒಂದೊಂದು ಜಿಲ್ಲೆಗೆ ಒಂದೊಂದು ರೀತಿಯಾದ ಟೆಕ್ಸ್ಟ್ ಬುಕ್ಕುಗಳಿವೆ. ಯಾರಾದರೂ ರಾಜಕೀಯ ಪಂಡಿತರುಗಳ ಗೋಸ್ಕರ ಈ ಕಮಿಟಿ ಇದೆಯೋ ಅಥವಾ ರಾಜ್ಯದ ವಿದ್ಯಾಭ್ಯಾಸಕ್ಕಾಗಿ ಒಂದು ಸರಿಯಾದ ಪದ್ಧತಿ ತರಬೇಕೆಂದಿದೆಯೋ ಗೊತ್ತಾಗುತ್ತಿಲ್ಲ. ಒಂದೊಂದು ಜಿಲ್ಲೆಗೆ ಪ್ರತ್ಯೇಕವಾಗಿ ಏಕೆ ಟೆಕ್ಸ್ಟ್ ಬುಕ್ ಗಳಿರಬೇಕು ? ಉದಾಹರಣೆಗೆ ಕೋಲಾರ ಜಿಲ್ಲೆಯಿಂದ ಒಬ್ಬರು ಅಧಿಕಾರಿಗಳು ಬೆಂಗಳೂರು ಜಿಲ್ಲೆಗೆ ವರ್ಗವಾಗಿ ಬಂದರೆ ಕೋಲಾರ ಜಿಲ್ಲೆಯಲ್ಲಿ ಅವರ ಮಕ್ಕಳಿಗಾಗಿ ಕೊಂಡು ಕೊಂಡ ಪುಸ್ತಕಗಳು ಇಲ್ಲಿಗೆ ಉಪಯೋಗಕ್ಕೆ ಬರುವುದಿಲ್ಲ. ಬೆಂಗಳೂರಿಗೆ ಬಂದು ಇಲ್ಲಿ ಹೊಸದಾಗಿ ಬೇರೆ ಪುಸ್ತಕಗಳನ್ನು ಕೊಂಡುಕೊಳ್ಳಬೇಕು. ಇದರಿಂದ ವಿದ್ಯಾಭ್ಯಾಸವನ್ನು ಮುಂದುವರಿಸುವುದಾದರೂ

ಹೇಗೆ ? ಒಂದೊಂದು ಕಡೆಗೆ ಒಂದೊಂದು ರೀತಿಯಾದ ಟೆಕ್ಸ್ಟ್ ಬುಕ್ಕುಗಳು ಎಂದು ನಿಗದಿ ಮಾಡಿದರೆ ಜನಗಳಿಗೆ ಎಷ್ಟೋ ಕಷ್ಟವಾಗುತ್ತದೆ. ಇದನ್ನು ಸರಕಾರ ಯೋಚನೆ ಮಾಡಬೇಕು.

ಪ್ರೈಮರಿ ಶಾಲೆಗಳ ಎಂದರೆ ಪ್ರಾಥಮಿಕ ವಿದ್ಯಾಭ್ಯಾಸದ ಆಡಳಿತದ ವಿಚಾರವಾಗಿ ಅನೇಕ ಮಿತ್ರರುಗಳು ಆಗಲೇ ಹೇಳಿದ್ದಾರೆ. ನಮ್ಮ ವಿದ್ಯಾಮಂತ್ರಿ ಅನೇಕ ಕಡೆ ಅನೇಕ ರೀತಿಯಾದ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಇದರಿಂದ ಏನಾಗಿದೆ ಎಂದರೆ, ನಾವು ಹಳ್ಳಿಗಳ ಕಡೆ ಹೋದರೆ ಅಲ್ಲಿನ ಜನ ನಮ್ಮನ್ನು ಇದು "ನಿಮ್ಮ ಮಾತೋ ಅಥವಾ ನಿಮ್ಮ ಮಂತ್ರಿಗಳಾದ ಕಂಠಿಯವರ ಮಾತೋ" ಎಂದು ಕೇಳುತ್ತಿದ್ದಾರೆ. ಹೀಗೆ ಗಂಟೆಗೊಂದು ದಿವಸಕ್ಕೊಂದು ಹೇಳಿಕೆಗಳನ್ನು ಕೊಡುತ್ತಿದ್ದಾರೆ; ಅದನ್ನು ಜನ ತಿಳಿದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ.

ಅಲ್ಲದೆ ಹಳ್ಳಿಗಳಲ್ಲಿ ಜನರೇ ಶಾಲಾ ಕಟ್ಟಡಗಳನ್ನು ಕಟ್ಟಿಸಬೇಕೆಂದರೆ ಕಷ್ಟವಾಗುತ್ತದೆ ಎಂದು ಹಿಂದಿನಿಂದಲೂ ಹೇಳುತ್ತಿದ್ದಾರೆ. ಇದರ ದೆಸೆಯಿಂದ ಶಾಲಾ ಕಟ್ಟಡಗಳನ್ನು ಕಟ್ಟಬೇಕಾಗಿದ್ದರೆ ಸಾರ್ವಜನಿಕರಿಂದ ಚಂದಾ ಹಣವನ್ನು ವಸೂಲುಮಾಡಿ ತಂದರೆ ಆಗ ಕಟ್ಟಡದ ನಿರ್ಮಾಣಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ಹೇಳುತ್ತಾರೆ. ಆದರೆ ಪ್ರತಿಯೊಂದು ಹಳ್ಳಿಯಲ್ಲಿಯೂ ಆ ರೀತಿ ಶಾಲಾ ಕಟ್ಟಡಗಳನ್ನು ಚಂದಾ ಹಣದಿಂದ ಕಟ್ಟಲು ಪ್ರಭಾವವುಳ್ಳವರು ಇಲ್ಲದೇ ಇದ್ದರೆ ಅಂತಹ ಪರಿಸ್ಥಿತಿಯಲ್ಲಿ ಕಟ್ಟಡಗಳನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲವೆಂದು ಅವರೇ ಹೇಳಿದ್ದಾರೆ.
ಕಡ್ಡಾಯ ಶಿಕ್ಷಣ ದೇಶದಾದ್ಯಂತ ಜಾರಿಗೆ ತಂದಿದ್ದೀರಿ ಮತ್ತು ಇದಕ್ಕಾಗಿ ಕೋಟ್ಯಾಂತರ ರೂಪಾಯಿ ಖರ್ಚುಮಾಡುತ್ತಿದ್ದೀರಿ. ವಿದ್ಯಾಭ್ಯಾಸ ಸೌಕರ್ಯ ಒದಗಿಸಲು: ಸ್ಕೂಲ್ ಕಟ್ಟಡ, ಉಪಾಧ್ಯಾಯರಿಗೆ ವಸತಿ ಸೌಕರ್ಯ ಒದಗಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಬೆಂಗಳೂರಿನಲ್ಲಿ ಕಾಲೇಜ ಬದಲಾವಣೆ ಮಾಡುವುದಕ್ಕೆ ಕಟ್ಟಡ ವಿಸ್ತರಣೆ ಮಾಡುವುದಕ್ಕೆಸಾರ್ವಜನಿಕರಿಂದ ಹಣ ಕೇಳುವದಿಲ್ಲ. ಸರಕಾರ ಹಣ ಒದಗಿಸುತ್ತದೆ. ಆದರೆ ಹಳ್ಳಿಗಾಡಿನಲ್ಲ ಸಣ್ಣ ಶಾಲೆಗಾಗಿ ಜನರಿಂದ ಹಣ ಕೇಳುತ್ತೀರಿ. ಇದರಿಂದ ಹಳ್ಳಿಗಳಲ್ಲಿ ವಿದ್ಯಾಭ್ಯಾಸ ಮುಂದುವರಿಯಬಾರದು ಎಂಬ ಮನೋಭಾವ ಇದ್ದಹಾಗಿದೆ. ಇಂಥ ನೀತಿಯನ್ನು ಬಿಟ್ಟು ಸರಕಾರ ಎಲ್ಲ ಖರ್ಚನ್ನೂ ವಹಿಸಿಕೊಳ್ಳಬೇಕು. ಗ್ರಾಮಾಂತರಪ್ರದೇಶಕ್ಕೆ ಉಪಾಧ್ಯಾಯರನ್ನು ವರ್ಗಾವಣೆ ಮಾಡುತ್ತೀರಿ. ಅದರಲ್ಲಿಯೂ ಹೆಣ್ಣುಮಕ್ಕಳಿಗೆ ತುಂಬಾ ಅನಾನುಕೂಲವಾಗುತ್ತದೆ. ವಸತಿ ಸೌಕರ್ಯವಿಲ್ಲದೆ ಕಷ್ಟವಾಗುತ್ತದೆ. ಆದ್ದರಿಂದ ಉಪಾಧ್ಯಾಯರಿಗೆ ವಸತಿ ಸೌಕರ್ಯ ಒದಗಿಸಬೇಕೆಂದು ಸೂಚನೆಮಾಡುತ್ತೇನೆ.

ಇನ್ನು ತಾಂತ್ರಿಕ ಶಾಲೆಗಳಿಗೆ ಅಭ್ಯರ್ಥಿಗಳನ್ನು ಆರಿಸಿಕೊಳ್ಳುವುದಕ್ಕೆ ಒಂದು ಕಮಿಟಿ ಮಾಡಿದ್ದೀರಿ. ಮೆರಿಟ್ ಗಣನೆಗೆ ತೆಗೆದುಕೊಂಡು ಚುನಾಯಿಸುತ್ತಾರೆಂದು ಹೇಳುತ್ತೀರಿ. ಆದರೆ ಕೆಲವು ಶಾಲೆಗಳಲ್ಲಿ ಅಕ್ರಮ ನಡೆದಿದೆ. ಕೆ. ಜಿ. ಎಫ್. ಶಾಲೆಯಲ್ಲಿ ಚುನಾಯಿಸುವಾಗ ಮೆರಿಟ್ ಗಣನೆಗೆ ತೆಗೆದುಕೊಂಡಿಲ್ಲ. ಇದೇ ರೀತಿ ಅನೇಕ ತಾಂತ್ರಿಕ ಶಾಲೆಗಳಲ್ಲಿ ಆಗುತ್ತಾ ಇರಬಹುದು. ಇದು ಸರಿಯಲ್ಲ. ಸರಕಾರದ ನೀತಿ ಎಲ್ಲ ತಾಂತ್ರಿಕ ಶಾಲೆಗಳಿಗೂ ಮೆಡಿಕಲ್ ಸ್ಕೂಲುಗಳಿಗೂ ಒಂದೇ ರೀತಿಯಾಗಿ ಅನ್ವಯಿಸಬೇಕು.

ನಾಲ್ಕನೆಯದಾಗಿ ಇನ್ನೊಂದು ವಿಚಾರ. ಡಿ.ಪಿ.ಐ. ಅವರ ಆಫೀಸಿನಲ್ಲಿ ಒಂದು ಅಚಾತುರ್ಯ ನಡೆದಿದೆ. ಅದು ದೇಶಕ್ಕೆ ಅವಮಾನಕರವಾದ ಸಂಗತಿ. ಅಂಥವರು ಯಾವದೇ ಅಧಿಕಾರಿಯಾಗಿರಲಿ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರಕ್ಕೆ ಮನವಿಗಳು ಬಂದಿವೆ. ಈ ವಿಚಾರದಲ್ಲಿ ಸರಕಾರ ತುಟಿಬಿಚ್ಚಿ ಮಾತನಾಡದೆ ಮೌನವಾಗಿ ಇರುವುದನ್ನು ನೋಡಿದರೆ ಅಂಥ ಅಧಿಕಾರಿಗಳಿಗೆ ಅಪ್ರತ್ಯಕ್ಷವಾಗಿ ಸರಕಾರ ಸಹಕಾರ ನೀಡುತ್ತಿದ್ದಾರೆಂದು ಅನಿಸುತ್ತದೆ. ಸಭೆಯಲ್ಲಿ ನಡೆದ ಚರ್ಚೆಗೆ ಉತ್ತರ ಕೊಡುವಾಗ್ಗೆ ವಿದ್ಯಾಮಂತ್ರಿಗಳು ಈ ವಿಚಾರದಲ್ಲಿ ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಈ ಸಭೆಗೆ ತಿಳಿಸಬೇಕು ಎಂದು ಹೇಳಬಯಸುತ್ತೇನೆ. ವಿದ್ಯಾಮಂತ್ರಿಗಳು ಈ ಸಭೆಗೆ ಸರಿಯಾದ ಸಮಾಧಾನಕರವಾದ ಉತ್ತರ ಕೊಡಬೇಕೆಂದು ಇಷ್ಟು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಫಕೀರಪ್ಪ ಎಸ್. ತಾವರೆ (ಸಿಗ್ಗಾವಿ).—ಮಾನ್ಯ ಸಭಾಪತಿಗಳೇ, ಮಾನ್ಯ ವಿದ್ಯಾಸಚಿವರು ಈ ಸಭೆಯಲ್ಲಿ ಮಂಡಿಸಿರತಕ್ಕಂಥ ಎಜ್ಯುಕೇಷನ್ ಡಿಮ್ಯಾಂಡ ಬಗ್ಗೆ ಮಾತನಾಡುತ್ತಾ ವಿದ್ಯಾ ಇಲಾಖೆಯು ರಾಜ್ಯದ ಜನಕ್ಕೆ ಯಾವ ರೀತಿ ಅನುಕೂಲತೆ ಒದಗಿಸಿಕೊಟ್ಟಿದೆ ಎನ್ನುವುದನ್ನು ಈ ಸಭೆಗೆ ಮತ್ತು ಮಾನ್ಯ ವಿದ್ಯಾ ಸಚಿವರ ಗಮನಕ್ಕೆ ತರಲಿಚ್ಛಿಸುತ್ತೇನೆ. ರಾಜ್ಯದ ಒಟ್ಟು ನೂರು ಕೋಟಿ ಆದಾಯದೊಳಗೆ ವಿದ್ಯಾ ಇಲಾಖೆಗೆ 5/1 ಭಾಗ ಹಣ ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡುತ್ತಲಿದ್ದೇವೆ. ಇಷ್ಟು ದೊಡ್ಡ ಮೊತ್ತದ ಹಣ ಖರ್ಚುಮಾಡುವ ಕಾಲಕ್ಕೆ ಅದೂ ಕೂಡ ರಾಷ್ಟ್ರದ ಭಾವೀ ಪ್ರಜೆಗಳಾದ ಮಕ್ಕಳಿಗೆ ತರುಣರಿಗೆ, ಅವರು ತಮ್ಮ ಮುಂದಿನ ಜೀವನದ ಅಸ್ತಿಭಾರ ಹಾಕುವ ಎಜ್ಯುಕೇಷನ್ ಬಗ್ಗೆ ಮಾತನಾಡುವಾಗ್ಗೆ ಸದಸ್ಯರೆಲ್ಲರೂ ನಮ್ಮ ಹೊಣೆ, ನಮ್ಮ ಜವಾಬ್ದಾರಿ ಅರಿತುಕೊಂಡು ಮಾತನಾಡುವುದಲ್ಲದೆ ಅದರಿಂದ ರಾಜ್ಯದ ಮೇಲೆ ಏನು ಪರಿಣಾಮವಾಗುತ್ತದೆ ಎಂಬುದನ್ನು ಯೋಚನೆ ಮಾಡಿ ಸಮಾಜಕ್ಕೆ ಒಳ್ಳೆಯದು ಆಗುವ ಹಾಗೆ ಮಾತನಾಡಬೇಕು ಎಂದು ಹೇಳುತ್ತೇನೆ. ಯಾವ

(ಶ್ರೀ ಫಕೀರಪ್ಪ ಎಸ್. ತಾವರೆ)

ದೊಂದು ವಿಷಯ ಚರ್ಚೆಮಾಡುವ ಕಾಲಕ್ಕೆ ಅದರ ರೂಪರೇಷೆ ಏನು, ಒಳಿತು ಏನು ಕೆಡಕು ಏನು ಎಂಬುದಕ್ಕೆ ಲಕ್ಷ್ಯ ಕೊಡಬೇಕು. ಮಾತನಾಡುವಾಗ್ಗೆ ದುಡುಕಿ ಕೆಳಗಿನ ಮಟ್ಟಕ್ಕೆ ಹೋಗಬಾರದು. ನಿಜವಾಗಿಯೂ ನ್ಯಾಯವಾದುದನ್ನು ನೋಡುವ ದೃಷ್ಟಕೋಣವಿರಬೇಕು. ಇಲ್ಲದಿದ್ದರೆ ದೇಶಕ್ಕೆ ದ್ರೋಹ ಮಾಡಿದ ಹಾಗಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ರಾಜ್ಯದಲ್ಲಿ ಒತ್ತಾಯದ ತಾಂತ್ರಿಕ ಶಿಕ್ಷಣ ಜಾರಿಗೆ ತಂದಿದ್ದಾರೆ. ಸಮಾಜದಲ್ಲಿ ಅನೇಕ ಸುಧಾರಣೆಗಳಾಗಬೇಕಾಗಿದೆ. ಸರಿಯಾದ ರಸ್ತೆ ಕಟ್ಟಡಗಳಿಲ್ಲ. ಸಮಾಜ ಮುಂದುವರಿಯಬೇಕಾಗಿದೆ. ಹಿಂದಿನ ಕಾಲದಲ್ಲಿ ಶಿಕ್ಷಣಕ್ಕೆ ಬಹಳ ಪ್ರಾಮುಖ್ಯತೆ ಕೊಟ್ಟಿದ್ದರು. ಇದಕ್ಕಾಗಿ ಒಳ್ಳೇ ಶಿಕ್ಷಕರನ್ನು ತಯಾರುಮಾಡುತ್ತಲಿದ್ದರು. ಈ ವಿಚಾರದಲ್ಲಿ ಸರ್ವಜ್ಞ ಕವಿ ಈ ರೀತಿ ಹೇಳಿದ್ದಾನೆ.

" ವಿದ್ಯೆ ಕಲಿಸದ ತಂದೆ ಬುದ್ಧಿ ಹೇಳದ ಗುರುವು
ಬಿದ್ದಿರಲು ಬಂದು ನೋಡದ ತಾಯಿಯು ಈ ಮೂವರು
ಶುದ್ಧ ವೈರಿಗಳು ಸರ್ವಜ್ಞ ॥ "

ಆದ್ದರಿಂದ ಮುಖ್ಯವಾಗಿ ಮಕ್ಕಳಿಗೆ ವಿದ್ಯೆ ಕಲಿಸುವ ಕೆಲಸ ಮಾಡಬೇಕೆಂದು ಹೇಳಿದ್ದಾರೆ. ಅದಕ್ಕಾಗಿಯೇ ನಮ್ಮ ರಾಜ್ಯ ಸರಕಾರ ದೇಶದಲ್ಲಿ ಕಡ್ಡಾಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಇದರಲ್ಲಿ ಕೆಲವು ಲೋಪದೋಷಗಳಿರಬಹುದು. ಒಳ್ಳೆ ತತ್ವವಿರುವುದನ್ನು ಮರೆಯಬಾರದು. ಮೊದಲು 1,200 ರೂ. ವರ್ಷಕ್ಕೆ ಆದಾಯವಿರುವವರಿಗೆ ಫ್ರೀಷಿಪ್ ಸಿಕ್ಕುತ್ತಿತ್ತು. ಈಗ 2400 ರೂ. ಆದಾಯ ಇರುವವರಿಗೆ ಫ್ರೀಷಿಪ್ ಸಿಕ್ಕುತ್ತದೆ. ಇದನ್ನು ನೋಡಿದರೆ ನೂರಕ್ಕೆ 90ರಷ್ಟು ವಿದ್ಯಾರ್ಥಿಗಳು ಪುಕ್ಕಟೆ ಶಿಕ್ಷಣ ಪಡೆಯುವುದಕ್ಕೆ ಅರ್ಹರಾಗಿದ್ದಾರೆ. ಇದಕ್ಕಾಗಿ ಒಂದು ಕೋಟಿ ರೂಪಾಯಿ ಖರ್ಚುಮಾಡುತ್ತೇವೆ. ಅದೇ ರೀತಿಯಾಗಿ ಮೊದಲು ಎರಡು ಪರ್ಸೆಂಟ ಸ್ಕಾಲರ್‌ಷಿಪ್ ಸಿಕ್ಕುತ್ತಾ ಇರಲಲ್ಲ. ಈಗ 20 ಪರ್ಸೆಂಟ್ ಸ್ಕಾಲರ್ ಷಿಪ್ ಕೊಡಲಾಗುತ್ತಿದೆ. ಇದಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿದ್ದೇವೆ. ಯಾವ ಶಿಕ್ಷಕರು ತಮ್ಮ ಜೀವನಕ್ಕೋಸ್ಕರ ನಿರಾಶಾ ಭಾವನೆ ತೋರಿಸುತ್ತಿದ್ದರೋ ಅಂಥವರ ಸಲುವಾಗಿ ಈಗ ಟ್ರಿಪಲ್ ಬೆನಿಫಿಟ್ ಸ್ಕೀಮ್ ಬಂದಿರುವುದರಿಂದ ಅವರಲ್ಲಿ ಆಶಾಭಾವನೆ ಮೂಡಿದೆ. ಆತ್ಮಬಲ ಶಿಕ್ಷಕರಲ್ಲಿ ಮಾಡಲಿಕ್ಕೆ ಹತ್ತಿದೆ. ಆದರೆ ಅವರಿಗೆ ತಮ್ಮ ಕರ್ತವ್ಯದ ಅರಿವು ಇನ್ನೂ ಆಗಿಲ್ಲ. ಇದು ಸಮಾಜದಲ್ಲಿ ಕಾಣುತ್ತದೆ.

9-30 A.M.

ನಮ್ಮ ಈ ಡಿಮ್ಯಾಂಡನ್ನು ಅನುಮೋದಿಸುತ್ತಾ ಮಾನ್ಯ ಸಚಿವರ ಲಕ್ಷ್ಯಕ್ಕೆ ಒಂದೆರಡು ತಪ್ಪುಗಳನ್ನು ತರ ಬಯಸುತ್ತೇನೆ. ಏನೆಂದರೆ ಇವತ್ತು ಅವರ ಮಲತಾಯಿ ಧೋರಣೆ ಕಡಿಮೆಯಾಗಬೇಕು ರಾಜ್ಯದಲ್ಲಿ ಒಂದು ಊರಿನಲ್ಲಿ 95 ಪರ್ಸೆಂಟ್ ಖರ್ಚನ್ನು ಸರ್ಕಾರ ಹೊತ್ತುಕೊಂಡು ಹೈಸ್ಕೂಲು ನಡೆಸಿದರೆ ರಾಜ್ಯದ ಬೊಕ್ಕಸ ಬರಿದಾಗುತ್ತದೆ. ಇನ್ನೊಂದು ಕಡೆ ಪಾಪ 100ಕ್ಕೆ 90 ರಷ್ಟು ಖರ್ಚು ಹಾಕಿಕೊಂಡು ನಡೆಸುತ್ತೇವೆಂದು ಮುಂದೆ ಬಂದರೂ ಅಲ್ಲಿ ಅನುಕೂಲತೆಗಳನ್ನು ಒದಗಿಸುವುದು ಕಷ್ಟವೆಂದು ಹೇಳುತ್ತಾರೆ, ಒಂದು ಕಡೆ ಪ್ರತಿವರ್ಷ 300 ವಿದ್ಯಾರ್ಥಿಗಳು ಇದ್ದರೂ ಕಟ್ಟಡ ಅಲ್ಲಿಗೆ ಇಲ್ಲ. ಒಂದು ಸ್ಕೂಲಿನಲ್ಲಿ 6-7 ಜನ ವಿದ್ಯಾರ್ಥಿಗಳು ಇದ್ದರೂ ಸಹ ಅಂಥದಕ್ಕೆ ಲಕ್ಷಗಟ್ಲೆ ಹಣತೆತ್ತು ಸ್ಕೂಲ್ ಬಿಲ್ಡಿಂಗ' ಕಟ್ಟಿಸುವ ಕ್ರಮ ನಡೆದಿದೆ. ಆದಕ್ಕೆ ಬಹಳ ನೊಂದುಕೊಂಡು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ : ಇದು ಹೋಗಬೇಕು ಟೀಕೆ ಟಿಪ್ಪಣಿಗಳ ಲೆಕ್ಕ ಹಾಕಿಕೊಳ್ಳುವಾಗ, ಎಲ್ಲಿಗೆ ಅನ್ಯಾಯ ಏನಿದೆಯೋ, ಅಲ್ಲಿಗೆ ನ್ಯಾಯವಾಗಿ ಸರ್ಕಾರದ ಸಲವತ್ತು ಹೆಚ್ಚಾಗಿ ಸಿಗಬೇಕೋ ಅಲ್ಲಿಗೆ ಕೊಡಬೇಕು. ಅವರಲ್ಲಿ ವಿಶಾಲ ಭಾವನೆ ಬಂದು ಎಲ್ಲ ಭಾಗದ ಜನರನ್ನೂ ಸಮ್ಮ ದೃಷ್ಟಿಯಿಂದ ನೋಡುವ ಮನೋಧೈರ್ಯ ಬರಬೇಕೆಂದು ಬೇಡಿಕೊಳ್ಳುತ್ತಿದ್ದೇನೆ.

ಸಾಧಾರಣವಾಗಿ ಕೆಲವು ಊರುಗಳನ್ನು ಬಿಟ್ಟರೆ ಎಲ್ಲಾ ಕಡೆಯಲ್ಲಿಯೂ ಸ್ಕೂಲುಗಳು ನಡೆಯುತ್ತಾ ಇವೆ. ಆದರೆ ಈ ಸ್ಕೂಲುಗಳಿಗೆ ಕಟ್ಟಡಗಳನ್ನು ಮಾಡಬೇಕಾಗಿದೆ. ಮತ್ತು ಅನೇಕ ಕಡೆಗಳಲ್ಲಿ ಶಿಕ್ಷಕರ ಸಂಖ್ಯೆ ಬಹಳ ಸಣ್ಣ ಪ್ರಮಾಣದಲ್ಲಿದೆ. ಯಾವ ಸ್ಕೂಲಿಗೆ ಹೋಗಿ ನೋಡಿದರೂ ಒಬ್ಬ ಶಿಕ್ಷಕ ಎರಡು ಕ್ಲಾಸು ನಡೆಸುತ್ತಿರುತ್ತಾನೆ ; ಮೂರು ಕ್ಲಾಸುಗಳನ್ನೂ ನೋಡಿಕೊಳ್ಳುತ್ತಿರುತ್ತಾನೆ ಇದು ನಿಜವಾಗಿಯೂ ನಿರುತ್ಸಾಹದ ಮಾತು. ನಮ್ಮ ದೇಶಕ್ಕೆ ಐದು ಸಾವಿರ ಜನ ಪ್ರಾಥಮಿಕ ಶಿಕ್ಷಕರು ಬೇಕಾಗಿದ್ದಾರೆ. ಇನ್ನೂ ಸಾವಿರಾರು ಜನ ತರಬೇತಿ ಹೊಂದದವರು ಇದ್ದಾರೆಂದು ಕೇಳುತ್ತೇನೆ. ಇಷ್ಟು ಮಂದಗತಿಯಿಂದ ಸಾಗಿದರೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಆಗ

ಬೇಕಾದ ಕಾರ್ಯವನ್ನು ಸಾಧಿಸುವುದಕ್ಕಾಗುವುದಿಲ್ಲ. ಆದುದರಿಂದ ತೀವ್ರಗತಿಯಿಂದ ಶಿಕ್ಷಕರಿಗೆ ಟ್ರೇನಿಂಗ್ ಕೊಡುವ ಕಾರ್ಯವನ್ನು ವಿದ್ಯಾ ಇಲಾಖೆ ಕೈಗೊಳ್ಳಬೇಕೆಂದು ಬೇಡಿಕೊಳ್ಳುತ್ತೇನೆ.

ಇದರ ಜೊತೆಯಲ್ಲಿ ಮೈಸೂರು ಯೂನಿವರ್ಸಿಟಿ ಕಡೆಗೆ ಹೊರಳಿದರೆ ಅಲ್ಲಿ ನಡೆಯತಕ್ಕಂಥ ಸ್ನಾತಕೋತ್ತರ ಶಿಕ್ಷಣದ ಕೆಲಸ ಪ್ರಗತಿಯಿಂದ ಸಾಗಿಲ್ಲ. ಆ ಬಗ್ಗೆಯೂ ಕೂಡ ಹೆಚ್ಚಿಗೆ ಲಕ್ಷ್ಯ ಹೋಗಬೇಕಾಗಿದೆ. ಧಾರವಾಡ ಯೂನಿವರ್ಸಿಟಿ ಕಡೆಗೆ ಹೊರಳಿ ನೋಡಿದರೆ ಇವತ್ತು 350 ಎಕರೆಯೊಳಗೆ ವಿಶಾಲವಾದಂಥ ಕಡೆಯಲ್ಲಿ ಈ ವಿದ್ಯಾಲಯ ತಲೆಯೆತ್ತಿ ನಿಂತಿವೆ; ಕನ್ನಡಿಗರ ಅಭಿಮಾನದಿಂದ ಒಂದು ದೊಡ್ಡ ಸಂಸ್ಥೆಯಾಗಿ ಬೆಳೆಯುತ್ತಾ ಇದೆ.

ನಮ್ಮ ವಿದ್ಯಾಭ್ಯಾಸದ ಅನುಕೂಲತೆಗಳನ್ನು ಒದಗಿಸುವ ಕಾಲಕ್ಕೆ ಮಾನ್ಯ ಮಂತ್ರಿಗಳು ಒಂದು ಕಡೆಗೇ ಲಕ್ಷ್ಯ ಕೊಟ್ಟು ಹಾಗೆ ಮಹತ್ವವಾಗಿ ಕಾಣಿಸುತ್ತದೆ. ಯಾವ ಭಾಗದಲ್ಲಿ ಶಿಕ್ಷಣದಲ್ಲಿ ಹಿಂದುಳಿದಂಥ ಜನರ ಸಂಖ್ಯೆ ಪ್ರಮಾಣ ಯಾವ ರೀತಿ ಇದೆ, ಅಲ್ಲಿಗೆ ಹೆಚ್ಚಿಗೆ ಗಮನ ಕೊಡುವುದು ನಮ್ಮ ಕರ್ತವ್ಯ. ಬೆಂಗಳೂರು ಊರೊಳಗೆ ನೋಡಿದರೆ ಅಂದಾಜು 49.6ರಷ್ಟು ಶಿಕ್ಷಣ ಹೊಂದಿದ ಜನರು ಸಿಗುತ್ತಾರೆ. ಕೊಡಗಿನಲ್ಲಿ 39ರಷ್ಟು ಸಿಗುತ್ತಾರೆ. ಬಿದರೆ, ಗುಲ್ಬರ್ಗ, ರಾಯಚೂರು ಭಾಗದಲ್ಲಿ 14, 15 ಪರ್ಸೆಂಟೇಜ್ ಸಿಗಬಹುದು. ಅದರಲ್ಲೂ ಹಿಂದುಳಿದ ಭಾಗಗಳನ್ನು ನೋಡಿದರೆ, 1, 2, 3 ರಷ್ಟು ಇರುವ ಒಂದು ದುಃಖದಾಯಕವಾದ ಪರಿಸ್ಥಿತಿ ಕಾಣುತ್ತಾ ಇದೆ. ಇದನ್ನು ಮಾನ್ಯ ವಿದ್ಯಾಸಚಿವರು ಲಕ್ಷ್ಯದಲ್ಲಿ ಇಟ್ಟುಕೊಂಡು ಯಾವ ಭಾಗಕ್ಕೆ ಹೆಚ್ಚು ಅನುಕೂಲತೆಗಳನ್ನು ಒದಗಿಸಬೇಕು, ಎಲ್ಲಿ ಜನ ಮುಂದೆ ಬಂದಿದ್ದಾರೆ, ಎಲ್ಲ ರಾಜ್ಯದ ನೆರವಿಲ್ಲದೆ ಹಿಂದುಳಿದಿದ್ದಾರೆ, ಯಾವ ಟೀಕೆ ಟಿಪ್ಪಣಿಗಳಿಗೆ ಲಕ್ಷ್ಯ ಕೊಡುತ್ತಾ ಇಲ್ಲ ಮತ್ತು ಗಣನೆಗೆ ತೆಗೆದುಕೊಂಡು, ಎಲ್ಲರನ್ನೂ ಒಂದೇ ದೃಷ್ಟಿಯಿಂದ ನೋಡಿಕೊಂಡು ಹೋದರೆ, ಅವರ ಕೈಯಲ್ಲಿ ಇಲಾಖೆ ಇರುವುದು ಸಾರ್ಥಕವಾಗುತ್ತದೆ, ದೇಶಕ್ಕೆ ಗೌರವ ಬಂದೀತು ಎಂದು ಅವರಲ್ಲಿ ಹೇಳಿಕೊಂಡು, ಮಾತನಾಡಲು ಸಮಯ ಒದಗಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ಉಪಕಾರ ಸ್ಮರಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎಸ್. ಆರ್. ಕಂಠಿ (ವಿದ್ಯಾಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದ ಈ ಚರ್ಚೆಯಲ್ಲಿ ಭಾಗವಹಿಸಿದಂಥ ಮಾನ್ಯ ಸದಸ್ಯರುಗಳೆಲ್ಲರಿಗೂ ನಾನು ತುಂಬಾ ಋಣಿಯಾಗಿದ್ದೇನೆ. ಅವರಿಗೆ ನನ್ನ ಅಭಿವಂದನೆಗಳನ್ನು ಅರ್ಪಿಸುತ್ತಾ ಇದ್ದೇನೆ.

ಈ ವಿದ್ಯಾ ಇಲಾಖೆ ಬಹಳ ದೊಡ್ಡದು, ಇದಕ್ಕೆ ಬಹಳ ಹಣ ಕೊಟ್ಟಿದ್ದೇವೆ, ಅದನ್ನು ಸರಿಯಾಗಿ ನಡೆಸಿಕೊಂಡು ಹೋಗುತ್ತೇವೆಯೋ ಇಲ್ಲವೋ ಅನ್ನತಕ್ಕಂಥ ಕೆಲವು ಮಾತುಗಳು ಒಬ್ಬ ಸದಸ್ಯರಿಂದ ಬಂದವು. ಈ ವಿಚಾರವಾಗಿ ನಾನು ಸ್ವಲ್ಪ ವಿಶದವಾಗಿ ಹೇಳಬೇಕೆಂತ ಮಾಡಿದ್ದೇನೆ. ಏಕೆಂದರೆ ಈಗ ಕೊಟ್ಟಂಥ ದುಡ್ಡನ್ನು ಸರಿಯಾಗಿ ನಡೆಸಿಕೊಂಡು ಹೋಗಲಾರದಂಥ ಸ್ಥಿತಿ ನಮ್ಮಲ್ಲಿ ಇಲ್ಲ ಎಂದು ನನಗೆ ಅನ್ನಿಸುತ್ತಾ ಇದೆ. ಈ ಒಂದು ವರ್ಷ ಕಾಲದಲ್ಲಿ ಬಹಳ ಕಷ್ಟಪಟ್ಟು ಎಲ್ಲಾ ಆಫೀಸುಗಳಲ್ಲಿ ಮತ್ತು ಆಡಳಿತ (administration) ವರ್ಗದಲ್ಲೂ ಸುವ್ಯವಸ್ಥಿತವಾದ ಆಡಳಿತ ತರುವ ಪ್ರಯತ್ನವನ್ನು ಮಾಡಲಾಗಿದೆ. ಇನ್ನೂ ಅನೇಕ ಕುಂದುಕೊರತೆಗಳಿವೆ. ಅವುಗಳನ್ನ ಹೋಗಲಾಡಿಸಬೇಕಾದರೆ ಅದಕ್ಕೆ ಇನ್ನೂ ಕೊಂಚಕಾಲ ಜಾಸ್ತಿಬೇಕು. ಆದ್ದರಿಂದ ಮಾನ್ಯ ಸದಸ್ಯರು ಹಾಗೆಯೇ ಸ್ವಲ್ಪ ತಾಳ್ಮೆಯಿಂದ ತಡೆಯಬೇಕು ಎಂದು ನಾನು ಅವರಲ್ಲಿ ಕೇಳಿಕೊಳ್ಳುತ್ತಾ ಇದ್ದೇನೆ.

ಮತ್ತೊಂದು ಮಾತೆಂದರೆ ಒಬ್ಬ ಸದಸ್ಯರು ಜಾತೀಯತೆಯ ವಿಚಾರವಾಗಿ ಮಾತನಾಡಿದರು. ಜಾತೀಯತೆಯ ಒಂದು ಉದಾಹರಣೆಯನ್ನು ಅವರು ಏನು ಹೇಳಿದ್ದಾರೋ ಈ ವಿಚಾರವಾಗಿ ಅನೇಕ ಸಲ ಹೇಳಿದ್ದೇನೆ. ಈ ಮನೆಯಲ್ಲಿ ಈ appointment of Joint Director of Technical Education ವಿಚಾರವಾಗಿ ಪುನಃ ಪುನಃ ಜಾತೀಯತೆಯ ಮಾತು ಹೇಳುವಾಗ, ಈ ಮಾತಿನ ವಿಷಯಕ್ಕೆ ಖುಲಾಸೆ ಕೊಟ್ಟಿದ್ದೇನೆ. ಅವರು ಯಾರಿಗಾದರೂ ಸಂಶಯದ ಬಾಧೆ ಇದ್ದರೆ, ಈ appointment of Joint Director of Technical Education ವಿಚಾರವಾಗಿ ತಮ್ಮ ಕಡೆಗೂ ನಾನು ಫೈಲನ್ನು ತಂದುಕೊಡುತ್ತೇನೆ, ತಾವು ಅದರಲ್ಲಿ ನಿರ್ಣಯವನ್ನು ಕೊಡಬಹುದು ತಾವು ಜಾತೀಯತೆ ಇದೆಯೆಂದು ಹೇಳಿದರೆ, ನಾನು ಒಪ್ಪಿಕೊಳ್ಳುತ್ತೇನೆ ಎಂದು ತಮ್ಮ ಮುಂದೆ ಹೇಳುತ್ತೇನೆ. ಅದು ಇಲ್ಲದೆ ಹೋದರೆ ಹೈಕೋರ್ಟಿನ ಜಡ್ಜ್‌ಗಳಿಗೆ ಫೈಲನ್ನು ಕೊಡುತ್ತೇನೆ. ಅವರೇ ಹೇಳಲಿ ನನ್ನದು ತಪ್ಪು ಇದೆಯೆಂದು ಹೇಳಿದರೆ ಈ ಮಂತ್ರಿಪದವಿಗೂ, ಈ ಮಾನ್ಯ ಸಭೆಯ ಸದಸ್ಯತ್ವಕ್ಕೂ ರಾಜೀನಾಮೆ ಕೊಡಲು ಸಿದ್ಧನಿದ್ದೇನೆ. ಯಾರೋ ಅಧಿಕಾರಿಗಳು ಏನೋ ತಮ್ಮ ಸ್ವಂತದ ಸ್ವಾರ್ಥಕ್ಕಾಗಿ ಈ ತರಹ ನಿರಪರಾಧಿಗಳಾದಂಥ ಸದಸ್ಯರನ್ನು ಉಪಯೋಗ ಮಾಡಿಕೊಂಡಿರತಕ್ಕದ್ದು ಸರಿಯಲ್ಲ. ಅದನ್ನು ಸ್ವಚ್ಛವಾಗಿ ತಿಳಿದುಕೊಳ್ಳಬೇಕು. ಯಾವುದಾದರೂ ಒಂದು ಮಾತು ಯಾರೋ ಅಧಿಕಾರಿಗಳು ಹೇಳಿದರೆ, ಅದು ಸತ್ಯವೋ ಅಸತ್ಯವೋ, ನಿಜವೋ ಅಲ್ಲವೋ ಅನ್ನುವ ಮಾತನ್ನು ನೀವು ಸ್ವಚ್ಛವಾಗಿ ತಿಳಿದುಕೊಂಡು ಮಾತನಾಡಬೇಕು. ಅಂಥ ಸ್ಥಿತಿಯನ್ನು ನಾವು ಕಲ್ಪಿಸಿಕೊಡುತ್ತೇವೆ. ಆದುದರಿಂದ

(ಶ್ರೀ ಎಸ್. ಆರ್. ಕಂಠಿ)

ಯಾರಾದರೂ ಸದಸ್ಯರು ಇಂಥವರಿಗೆ ಹೀಗಾಗಿದೆ ಅಂತ ಒಂದು ಮಾತನ್ನು ಹೇಳಿದರೆ, ನಾನು ಅವರ ಹತ್ತಿರ ಕೂತುಕೊಂಡು ನಾನೇ ಅವರಿಗೆ ಎಲ್ಲ ವಿಧವಾದಂಥ ನಿಜವಾದ ಸಂಗತಿ ಹೇಳಿಕೊಟ್ಟು, ಆ ಮೇಲೆ ಇವರು ಏನು ಎಲ್ಲಾ ಮಾತು ಹೇಳುವುದು ಸರಿ ಎಂದು ಒಪ್ಪಿಕೊಳ್ಳುತ್ತೇನೆ. ಇಲ್ಲದಿದ್ದರೆ ನಿಸ್ವಾರ್ಥಿಗಳಾದಂಥ ನಿಷ್ಪಕ್ಷಪಾತಿಗಳಾದಂಥ ಜನಗಳಿಗೆ ನಾನು ಅದನ್ನು submit ಮಾಡಲಿಕ್ಕೆ ಸಿದ್ಧನಿದ್ದೇನೆ. ಜಾತಿ ಜಾತಿಯ ಮಾತನ್ನು ಆಡುವುದು ಸರಿಯಲ್ಲ. ಏಕೆಂದರೆ ಯಾವುದೋ ಜಾತಿಯವರು ಇವತ್ತಿನ ದಿವಸ ಒಂದು ದೊಡ್ಡ ಸ್ಥಾನಕ್ಕೆ ಹೋದರೆ ನನಗೆ ಬರುವ ಭಾಗ್ಯ ಅಷ್ಟರಲ್ಲಿಯೇ ಇದೆ. ನನ್ನ ಜಾತಿಯವರು ದೊಡ್ಡ ಅಧಿಕಾರಿಯಾದರೆ ನನಗೆ ಬರುವ ಭಾಗ್ಯ ಅಷ್ಟೇ. ಬೇರೆ ಜಾತಿಯವರು ಆದರೆ ನನ್ನ ಮೇಲೆ ಆಕಾಶ ಕಳಚಿಬೀಳುವುದು ಅಷ್ಟರಲ್ಲಿಯೇ ಇದೆ. ನಾನು ಮುಂಬೈ ರಾಜ್ಯದಿಂದ ಇಲ್ಲಿಗೆ ಬಂದವನು : ಯಾವ ರಾಜ್ಯದಲ್ಲಿ Communalism ಭಾವನೆ ಬಹಳ ಕಡಿಮೆ ಇದೆಯೋ ಅಂಥ ಕಡೆಯಿಂದ ಬಂದವನಾದುದರಿಂದ ನನಗೆ ಜಾತಿಯ ಭಾವನೆಗಳು ಬರುವುದಿಲ್ಲ. ಈ ವಿಚಾರವೆಲ್ಲಾ ನನ್ನಲ್ಲಿ ಬರುವುದಿಲ್ಲ. ಆದರೂ ಕೂಡ ಪುನಃ ಪುನಃ ಜಾತೀಯತೆಯ ಚಾರ್ಜ್ ನನ್ನ ಮೇಲೆ ಮಾಡುವುದರಿಂದ, ಜನಗಳಿಗೆ ಕೂಲಂಕಷವಾಗಿ, ದೇವರ ಸಾಕ್ಷಿಯಾಗಿ ವಿಚಾರ ಮಾಡಬೇಕೆಂದು ಅವರಿಗೆ ನಾನು ಬೇಡಿಕೊಳ್ಳುತ್ತಾ ಇದ್ದೇನೆ.

ಶ್ರೀ ಇ. ನಾರಾಯಣ ಗೌಡ.—ಒಮ್ಮೊಮ್ಮೆ ಸ್ವಾಮಿಗಳ ಪ್ರಭಾವಕ್ಕೆ ಒಳಗಾಗಿ ಬಿಡುತ್ತೀರ.

ಶ್ರೀ ಎಸ್. ಆರ್. ಕಂಠಿ.—ಯಾರ ಪ್ರಭಾವಕ್ಕೂ ಒಳಗಾಗುವುದಿಲ್ಲ ಎಂದು ನಿಮಗೆ ಹೇಳಿದ್ದೇನೆ. ಹೈಕೋರ್ಟು ಜಡ್ಜಿಗಳು ತೆಗೆದುಕೊಂಡು ಸರ್ಕಾರ ತಪ್ಪು ಅಂತ ಹೇಳಿದರೆ ಒಪ್ಪಿಕೊಳ್ಳುತ್ತೇನೆ. ಸುಮ್ಮನೆ ಯಾರೊಬ್ಬರು ಅಧಿಕಾರಿಗಳೂ ತಮಗೆ ಅನ್ಯಾಯವಾಗಿದೆ ಎಂದು ಭಾವಿಸಿಕೊಂಡು ಅನ್ಯಾಯವಾದ ರೀತಿಯಲ್ಲಿ ಪಾಪ, ಹೌಸಿನ ಅಥವಾ ಮೇಲ್ಮನೆ ಸದಸ್ಯರ ಪ್ರಯೋಜನ ಪಡೆಯಬಾರದೆಂದು ವಿನಂತಿ ಮಾಡಿಕೊಳ್ಳುತ್ತಾ ಇದ್ದೇನೆ.

ಆದ್ದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಸಂಗ ಬಂದರೂ ತೆಗೆದುಕೊಳ್ಳಬಾರದು, ತೆಗೆದುಕೊಳ್ಳುವುದು ಸರಿಯಾದ್ದಲ್ಲ ಎಂದು ಮಾಡಿದ್ದೇನೆ. ಏಕೆಂದರೆ ಕೆಲವು ಕಾಲ ನೋಡೋಣ, ನಂತರ ಸರಿಯಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಶ್ರೀಮಾನ್ ನಂಜೇಗೌಡರು ಸ್ಕಾಲರ್‌ಷಿಪ್ ಕಮಿಟಿ ವಿಚಾರ ಹೇಳಿದರು. ಯಾವ ಉದ್ದೇಶದಿಂದ ಮಾಡಿದ್ದೇವೆ ಎಂದು ಕೇಳುತ್ತಾರೆ. ಗವರ್ನಮೆಂಟ್ ಆರ್ಡರ್ ಇದೆ ಆ ಪ್ರಕಾರ ಮಾಡಿದ್ದೇವೆ ಅದನ್ನು ಅವರು ನೋಡಿಕೊಳ್ಳಬಹುದು. ಎಲ್ಲಾ ಸ್ಕಾಲರ್‌ಷಿಪ್ ಕಮಿಟಿ ಚೆನ್ನಾಗಿದೆ ಎಲ್ಲರೂ ಒಪ್ಪುವಂಥಹುದು ಆಗಿದೆ ಎಂದು ನಾನು ಎಂದೂ ಹೇಳುವುದಿಲ್ಲ. ಏಕೆಂದರೆ ಕಮಿಟಿ ಮಾಡುವ ಕಾಲಕ್ಕೆ ಅದರಲ್ಲಿ ಸ್ವಲ್ಪ ವ್ಯತ್ಯಾಸವಾಗುತ್ತಾ ಇದೆ. ಇಡೀರಾಜ್ಯದಲ್ಲಿ 178 ಸ್ಕಾಲರ್‌ಷಿಪ್ ಕಮಿಟಿಗಳನ್ನು ಮಾಡುವ ಕಾಲಕ್ಕೆ ಎಲ್ಲಾ ಕಡೆಯಲ್ಲೂ ನಾವು ಕಣ್ಣು ಇಟ್ಟುಕೊಂಡು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಂಜೇಗೌಡರಂಥ ಜನಗಳು ಯಾರಿಗೆ ಅನ್ಯಾಯವಾಗಿದೆ ಎಂದು ಅನಿಸುತ್ತಾ ಇದೆ ಅಂಥಾ ಮಾನ್ಯ ಸದಸ್ಯರು ಬಂದು ಹೇಳಿದರೆ ಒಪ್ಪಿಕೊಳ್ಳುವುದಕ್ಕೆ ಸಿದ್ಧವಾಗಿದ್ದೇನೆ. ಒಪ್ಪಿಕೊಂಡಿದ್ದೇನೆ. ಆದರೆ ಇವರಲ್ಲಿ ಭೂತ ಇದೆ, ಜಾತಿವಾದ ಇದೆ, ಎನ್ನುವುದು ಸರಿಯಲ್ಲ. ಮೇಲ್‌ಮನೆ ಮಾನ್ಯ ಸದಸ್ಯರು, ಈ ಮನೆ ಮಾನ್ಯ ಸದಸ್ಯರು ಜಾತಿಯ ವಿಚಾರವನ್ನು ಎತ್ತುವುದು ಸಂಪೂರ್ಣವಾಗಿ ಬಿಟ್ಟು ನಿಚ್ಚಳವಾಗಿ ಶಿಸ್ತಿನಿಂದ ವಿಚಾರ ಮಾಡೋಣ. ಅಲ್ಲದೆ ಯಾರು ಜಾತಿವಾದ ತರುತ್ತಾರೆ ಅವರಿಗೆ ನಿಷ್ಠುರವಾಗಿ ಹೇಳೋಣ ಇದು ಸರಿಯಲ್ಲ ಎಂದು. ಜಾತಿವಾದ ಎಂದರೆ ಹೇಗೆ ಏನು ಎಂದು ಕೂಲಂಕಷವಾಗಿ ಪರಿಶೀಲನೆ ಮಾಡೋಣ. ಅದರಿಂದ ಜಾತಿವಾದ ಹೋಗುತ್ತದೆ ; ಇಲ್ಲದೆ ಹೋದರೆ ನಮ್ಮ ರಾಜ್ಯ ಸರಿಯಾಗಿ ನಡೆಯುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ.

ಸೆಂಟ್ರಲ್ ಕಾಲೇಜಿನ ಟ್ಯೂಟರ್ಸ್ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. 5 ಜನ ಪ್ರೊಫೆಸರ್ಸ್ ಇದ್ದಾರೆ ಅದರಲ್ಲಿ ಇಬ್ಬರು ಟ್ಯೂಟರ್ಸ್ ಇದ್ದದ್ದು ನಿಜ. ಡೈರೆಕ್ಟರ್ ಆಫ್ ಕೊಲಿಜಿಯೇಟ್ ಎಜ್ಯುಕೇಷನ್, ಅವರೂ ಒಂದೇ ಜಾತಿಯವರು ಇರಬಹುದು. ಇಂಥಾ ಪ್ರಶ್ನೆ ಬಂದಾಗ ಕೂಲಂಕಷವಾಗಿ ವಿಚಾರ ಮಾಡಬೇಕು. ಅದು ಏನಾಗಿದೆ ಎಂಬುದನ್ನು ನೋಡಿ. ಕೆಳಗಿನವರು ಯಾರಾದರೂ ಯೋಗ್ಯರು ಇದ್ದರೆ ಅವರನ್ನು ಮೇಲ್‌ಭಾಗಕ್ಕೆ ತಂದಿರಬಹುದು. ಇದು ಗೋತ್ತಾಗುವುದು ಕಷ್ಟ. ಪಾಲಿಸಿ ಪ್ರೋಗ್ರಾಂ ಪ್ರಕಾರ ನಡೆಯಬೇಕಾಗುತ್ತದೆ. ಆದರೆ ಆ ರೀತಿ ಕಾರ್ಯರೂಪದಲ್ಲಿ ನಡೆಯುವುದಕ್ಕೆ ಸಾಧ್ಯವೇ ? ಪ್ರತಿಯೊಂದು ಕಾಲೇಜು, ಪ್ರತಿಯೊಂದು ಶಾಲೆ, ಪ್ರತಿಯೊಂದು ಸಂಸ್ಥೆಯಲ್ಲಿ ನಡೆಯುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ನಿಮಗೆ ತಿಳಿಸಬಯಸುತ್ತಾ ಇದ್ದೇನೆ. ಪಿ. ಎಚ್. ಡಿ. ಪಾಸ್ ಆದವರು ಒಂದೇ ಜಾತಿಯವರು ಇರುವುದಿಲ್ಲ. ಮೊನ್ನೆ ದಿವಸ 150 ಜನರನ್ನು ಇಂಟರ್‌ವ್ಯೂ

ಮಾಡಿದ್ದೆವು ; ಅದರಲ್ಲಿ ಪಿ. ಎಚ್. ಡಿ. ಪಾಸ್ ಆದವರು ಬೇರೆ ಬೇರೆ ಜಾತಿಯವರು ಇದ್ದರು. ಯೋಗ್ಯತೆ ಇದ್ದರೂ ಇನ್ನೂ ಮೇಲಿನ ಜಾಗಕ್ಕೆ ಏಕೆ ಹಾಕಲಿಲ್ಲ ಎಂದರೆ ಐ. ಎ. ಎಸ್. ಲಿಸ್ಟ್ ಮಾಡಿರಲಿಲ್ಲ, ಕೇಡರ್, ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿರಲಿಲ್ಲ. ಅದನ್ನೆಲ್ಲಾ ಮಾಡುತ್ತಾ ಇದ್ದೇವೆ. ಐ. ಎ. ಎಸ್. ಪ್ರೊವಿಷನಲ್ ಲಿಸ್ಟ್ ಆಗಿತ್ತು. ತಕರಾರು ಅರ್ಜಿ ಹಾಕುತ್ತಾ ಇದ್ದಾರೆ. ಅದನ್ನೆಲ್ಲಾ ನೋಡುತ್ತಾ ಇರುವುದರಿಂದ ಇಷ್ಟರಲ್ಲೇ ಟ್ಯೂಟರ್ಸ್‌ನ್ನು ಮೇಲೆ ಹಾಕಬೇಕು ; ಅದನ್ನು ನೋಡಿ, ಪ್ರಮೋಷನ್ ಕೊಡಬೇಕೆಂಬ ನಿರ್ಣಯ ಮೊನ್ನೆ ದಿವಸ ತೆಗೆದುಕೊಂಡಿದ್ದೇವೆ.

ಶ್ರೀ ಜಿ. ದುಗ್ಗಪ್ಪ (ಹೊಳಲ್ಕೆರೆ).—ಸೆಂಟ್ರಲ್ ಕಾಲೇಜಿನಲ್ಲಿ ಪೋಸ್ಟ್ ಗ್ರ್ಯಾಜ್ಯುಯೇಟ್ ಸ್ಟಡೀಸ್ ಪ್ರಾರಂಭಮಾಡಿದ್ದೀರಿ. ಅಲ್ಲಿ ಅಧ್ಯಾಪಕರು ಯಾರು ಇರಬೇಕೆಂದರೆ ಪೋಸ್ಟ್ ಗ್ರ್ಯಾಜ್ಯುಯೇಟ್ ಕ್ವಾಲಿಫಿಕೇಷನ್ ಇದ್ದವರು ಇರಬೇಕು. ಆರ್ಡಿನರಿ ಎಂ. ಎ. ಮಾಡಿರತಕ್ಕ ಅಧ್ಯಾಪಕರನ್ನು ತಾವು ಇಲ್ಲಿಗೆ ನೇಮಕ ಮಾಡಿದ್ದೀರಿ. Historyನಲ್ಲಿ ಎಂ.ಎ., ಪಿ.ಎಚ್.ಡಿ., ಫಾರಿನ್ ಯೂನಿವರ್ಸಿಟಿಯಲ್ಲಿ, ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾಗಿರುವವರನ್ನು ಬಿಟ್ಟು......

ಶ್ರೀ ಎಸ್. ಆರ್. ಕಂಠಿ.—ನೀವು ಹೇಳಿದ್ದರಲ್ಲಿ ಅರ್ಥ ಇದೆ. ಅದನ್ನು ನೋಡಿಸುತ್ತೇನೆ. ಯೂನಿವರ್ಸಿಟಿಯವರು ಕೆಲವೊಂದು ಕಂಡೀಷನ್‌ಗಳನ್ನು ಹಾಕಿದ್ದಾರೆ. ಆ ಕಂಡೀಷನ್‌ಗಳ ಪ್ರಕಾರ ನಡೆಯಬೇಕಾಗುತ್ತದೆ. ನಡೆಯುತ್ತಾ ಇದ್ದೇವೆ ಎಂದು ಭಾವನೆ ಮಾಡಿದ್ದೇನೆ. ಯೂನಿವರ್ಸಿಟಿಯವರು ಹಾಕಿದ ನಿಯಮಗಳನ್ನು ಮೀರಿ ನಡೆಸಬೇಕೆಂಬ ಇಚ್ಛೆ ಇದೆ. ಬೇರೆ ಯಾವುದೋ ಪೋಸ್ಟ್ ಗ್ರ್ಯಾಜ್ಯುಯೇಟ್ ಸ್ಟಡೀಸ್‌ಮಾಡಿ ಹೆಸರು ಪಡೆಯಬೇಕೆಂದಿಲ್ಲ. ಸೆಂಟ್ರಲ್ ಕಾಲೇಜು ಐಡಿಯಲ್ ಕಾಲೇಜು. ಅದು ಐಡಿಯಲ್ ಆಗಿ ನಡೆಸಬೇಕೆಂದೇ ಉದ್ದೇಶ ಇದೆ.

ಪ್ರೈಮರಿ ಎಜ್ಯುಕೇಷನ್ ವಿಚಾರವಾಗಿ ಬಹಳ ಜನರು ಮಾತನಾಡಿದ್ದಾರೆ. ನಿಜವಾಗಿಯೂ ಬಹಳ ಮಹತ್ವದ ವಿಷಯ ಅದನ್ನು ಮಾತನಾಡಿದ್ದು ಸರಿ. ಇದಕ್ಕೆ ಬರುವುದಕ್ಕೆ ಮುಂಚೆ ಸ್ಕಾಲರ್‌ಷಿಪ್ ಕಮಿಟಿ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ಏನೆಂದರೆ ಈ ಸ್ಕಾಲರ್‌ಷಿಪ್‌ಗಳನ್ನು ಕೆಲವೊಂದು ನಿಯಮಾವಳಿಗಳ ಪ್ರಕಾರ ಹಂಚಿದ್ದೇವೆ. ಮೊದಲು ಡಿಸ್ಟ್ರಿಕ್ಟ್‌ದಲ್ಲಿ ಇರುವಂಥ ಜನ ಸಂಖ್ಯೆ ತೆಗೆದುಕೊಂಡು ಸ್ಕಾಲರ್‌ಷಿಪ್ ಕೊಡುತ್ತಾ ಇದ್ದೆವು. ಆ ಮೇಲೆ ಪ್ರತಿಯೊಂದು ತಾಲ್ಲೂಕಿಗೂ ಆ ತಾಲ್ಲೂಕಿನಲ್ಲಿರುವಂಥ ಶಾಲೆಗಳಲ್ಲಿ ಓದುವಂಥ ವಿದ್ಯಾರ್ಥಿಗಳ ಜನಸಂಖ್ಯೆ ಪ್ರಮಾಣ ನೋಡಿಕೊಂಡು ಕೊಟ್ಟಿದ್ದಾಗಿದೆ. ಇದು ಕೆಲವು ಕಡೆ ಏನಾಗಿದೆ ಎಂದರೆ ನಮ್ಮ ಜಿಲ್ಲೆಯಲ್ಲಿ ಹೇಳುತ್ತೇನೆ. ವಿಜಾಪುರ ಜಿಲ್ಲೆಯಲ್ಲಿ ಜನಸಂಖ್ಯೆ ಬಹಳ ಜಾಸ್ತಿ, ರೂರಲ್ ಏರಿಯಾದಲ್ಲಿ ಜಾಸ್ತಿ ಸಿಕ್ಕಬೇಕೆಂಬ ಉದ್ದೇಶದಿಂದ ಅರ್ಬನ್ ಏರಿಯಾದಲ್ಲಿ ಕಮ್ಮಿಮಾಡಿ ಎಂದು ಜನರಲ್ ಆಗಿ ಆದೇಶ ಕೊಟ್ಟಿದ್ದೇವೆ. ಇದರ ಉದ್ದೇಶ ಇಷ್ಟೆ; ಗ್ರಾಮಾಂತರಗಳಲ್ಲಿ ನಡೆಯುವಂಥ ಹೈಸ್ಕೂಲುಗಳಿಗೆ ಹೆಚ್ಚು ಸಿಕ್ಕಬೇಕು. ಕೃಷ್ಣರಾಜಪೇಟೆ ಅದು ಗ್ರಾಮಾಂತರವಲ್ಲ. ಅದು ಅರ್ಬನ್ ಏರಿಯಾ ಅವರಿಗೆ ಕಡಿಮೆ ಸಿಕ್ಕಿರಬಹುದು.

ಪ್ರೈಮರಿ ಎಜ್ಯುಕೇಷನ್ ಬಗ್ಗೆ ಶ್ರೀಮತಿ ವಿಜಯದೇಸಾಯಿ ಅವರು ಇಷ್ಟು ವರ್ಷ ಆದರೂ ಒಂದೂ ಮುಂದೆ ಹೋಗಿಲ್ಲ ಎಂಬ ಮಾತನ್ನು ಹೇಳಿದರು. ಅವರು ಏಕೆ ಆ ರೀತಿ ಹೇಳಿದರೋ ಗೊತ್ತಾಗಲಿಲ್ಲ. ಯಾರ ಮೇಲೆ ಇದು ರಿಫ್ಲೆಕ್ಷನ್ ಎಂಬುದನ್ನು ಅವರು ಅರ್ಥಮಾಡಿಕೊಳ್ಳಲಿಲ್ಲ. ಹೀಗೆ ಹೇಳಿದಾಕ್ಷಣಕ್ಕೆ ಯಾವ ಕಾಂಗ್ರೆಸ್ ಪಾರ್ಟಿಗೆ ಅವರು ಸೇರಿದ್ದಾರೋ ಆ ಕಾಂಗ್ರೆಸ್ ಪಾರ್ಟಿಯವರು ಸ್ವಾತಂತ್ರ್ಯ ಬಂದ ಮೇಲೆ ಏನೂಮಾಡಿಲ್ಲ ಎಂದು ಅರ್ಥವಾಗುತ್ತದೆ. ಇದನ್ನು ಅವರು ಸ್ವಲ್ಪ ಯೋಚನೆ ಮಾಡಬೇಕಾಗಿತ್ತು. ಇದನ್ನು ನಾನು ಒಪ್ಪುವುದಿಲ್ಲ. ಕಾಂಗ್ರೆಸ್ ಪಾರ್ಟಿ ಅಧಿಕಾರದಲ್ಲಿರಲಿ, ಮತ್ತೆ ಯಾವ ಪಾರ್ಟಿ ಅಧಿಕಾರದಲ್ಲಿರಲಿ ಈ 15 ವರ್ಷಗಳ ಕಾಲದಲ್ಲಿ ಶಿಕ್ಷಣದಲ್ಲಿ ಬಹಳ ಮುಂದುವರಿದಿದ್ದೇವೆ ಮತ್ತು ಅದರಲ್ಲೂ 1956-57ರಲ್ಲಿ ಎಷ್ಟು ದುಡ್ಡು ಖರ್ಚುಮಾಡುತ್ತಾ ಇದ್ದೆವೋ ಅದಕ್ಕೆ ಎರಡು ಪಟ್ಟು ದುಡ್ಡನ್ನು ಈ ದಿವಸ ಖರ್ಚುಮಾಡುತ್ತಾ ಇದ್ದೇವೆ. ಪ್ರೈಮರಿ ಎಜ್ಯುಕೇಷನ್‌ಗೆ 11 ಕೋಟಿ ರೂಪಾಯಿಗೆ ಮೇಲ್ಪಟ್ಟು ಖರ್ಚುಮಾಡುತ್ತಾ ಇದ್ದೇವೆ. ಇದು ಎಲ್ಲಾ ವ್ಯರ್ಥ ಎಂದು ನನಗೆ ಅನಿಸುವುದಿಲ್ಲ. ಕೆಲವು ಕಡೆಯಲ್ಲಿ ಶಾಲೆಗಳು ಸರಿಯಾಗಿ ನಡೆಯುತ್ತಾ ಇರಲಿಕ್ಕೆ ಇಲ್ಲ ಅಂದ ಮಾತ್ರಕ್ಕೆ ಎಲ್ಲಾ ಕಡೆಯಲ್ಲೂ ಸರಿಯಾಗಿ ನಡೆಯುವುದಿಲ್ಲ ಎಂದು ಹೇಳಿದರೆ ತಪ್ಪಾಗುತ್ತದೆ. ನಿನ್ನೆ ದಿವಸ ವಿವರಿಸಿದ್ದೇನೆ ಪ್ರಾಥಮಿಕ ಶಿಕ್ಷಣಕ್ಕೆ ಪ್ರತಿ ಹುಡುಗನಿಗೆ ಸುಮಾರು 20 ರೂಪಾಯಿ ಖರ್ಚು ಮಾಡುತ್ತಾ ಇದ್ದೇವೆ. ಇವೆಲ್ಲಾ ವ್ಯರ್ಥ ಎಂದು ಹೇಳುವುದು ಸರಿಕಾಣುವುದಿಲ್ಲ ಎಂದು ನನ್ನ ಅಭಿಪ್ರಾಯ ಇದೆ. ನಮ್ಮ ರಾಜ್ಯದಲ್ಲಿ 30 ಸಾವಿರ ಪ್ರಾಥಮಿಕ ಶಾಲೆಗಳು ಇವೆ. 30-9-62ಕ್ಕೆ 32,27,000 ವಿದ್ಯಾರ್ಥಿಗಳು ಪ್ರಾಥಮಿಕ ಶಾಲೆಗಳಲ್ಲಿ ಓದುತ್ತಾ ಇದ್ದಾರೆ. 83,000 ಜನ ಶಿಕ್ಷಕರು ಇದ್ದಾರೆ. ಸೆಕೆಂಡರಿ ಸ್ಕೂಲುಗಳು 1,000 ಇವೆ. ಶಿಕ್ಷಕರು 7,000 ಜನ ಇದ್ದಾರೆ. ಮತ್ತು 2,15,000 ಜನ ವಿದ್ಯಾರ್ಥಿಗಳು ಓದುತ್ತಾ ಇದ್ದಾರೆ. ಇವುಗಳಲ್ಲಿ 150 ಹೈಸ್ಕೂಲ್‌ಗಳು ಮಾತ್ರ ಗರ್ಲ್ಸ್ ಹೈಸ್ಕೂಲುಗಳು. 850 mixed boys and girls high schools ಇದೆ.

(ಶ್ರೀ ಎಸ್. ಆರ್. ಕಂಠಿ)

ಮಾನ್ಯ ಸದಸ್ಯರು ಹಿಂದಿನ ಮಾಜಿ ಮಂತ್ರಿಗಳು ಆಕಾಶ ಕಳಚಿ ಬೀಳುತ್ತದೆಯೋ ಏನೋ ಅನ್ನುವ ಹಾಗೆ ಕೋ-ಎಜ್ಯುಕೇಷನ್ ಬೇಡ, ಹೆಣ್ಣು ಮಕ್ಕಳಿಗೆ ಬೇರೆ ಶಾಲೆಗಳನ್ನು ಸರ್ಕಾರದವರು ಮಾಡಬೇಕು ಎಂದು ಹೇಳಿದರು ಅವರೇ ಇದನ್ನು ವಿಚಾರ ಮಾಡಲಿ. ಅವರಿಗೆ ಗೊತ್ತಿರುವ ಮಟ್ಟಿಗೆ ನಾವು ಇಷ್ಟು ಹೆಣ್ಣುಮಕ್ಕಳಿಗೆಲ್ಲ ಪ್ರತ್ಯೇಕ ಶಾಲೆಗಳನ್ನು ಮಾಡಲು ಸಾಧ್ಯವೇ ಎಂಬುದನ್ನು ಅವರೇ ಯೋಚನೆ ಮಾಡಲಿ. ಈ ವಿಚಾರದಲ್ಲಿ ನಾನು ನನ್ನ ವೈಯಕ್ತಿಕ ದೃಷ್ಟಿಯಿಂದ ಹೇಳುವುದಾದರೆ ಈಗ ಕೋ-ಎಜುಕೇಷನ್ನು ಕಾರ್ಯರೂಪದಲ್ಲಿ ಜಾರಿಗೆ ತರುವುದಕ್ಕೆ ಸಾಧ್ಯವಿದೆ. ಆದರೆ ನಾವು ಈಗ ಎಲ್ಲಿಯೋ ಅಲ್ಲೊಂದು-ಇಲ್ಲೊಂದು ಹೈ ಸ್ಕೂಲುಗಳನ್ನು ಪ್ರತ್ಯೇಕವಾಗಿ ಹೆಣ್ಣುಮಕ್ಕಳುಗಳಿಗೆ ಕೊಟ್ಟಿದ್ದೇವೆ. ಅಷ್ಟೇನೆ. ಆದುದರಿಂದ ಈ ಕೋಎಜ್ಯುಕೇಷನ್ನನ್ನು ಜಾರಿಗೆ ತಂದರೆ ಏನೋ ಒಂದು ದೊಡ್ಡ ಪರಿಣಾಮ ವುಂಟಾಗಿಬಿಡುತ್ತೆ ಅಂತ.........

ಶ್ರೀ ಅಣ್ಣಾರಾವ್ ಗಣಮುಖಿ (ಅಫ್‌ಜಲ್‌ಪುರ).—ಈ ಎರಡನ್ನೂ ಒಟ್ಟಿಗೆ.........

ಶ್ರೀ ಎಸ್. ಆರ್. ಕಂಠಿ.—ಇದು ಈಗಾಗಲೇ ಜಾರಿಯಲ್ಲಿ ಬಂದು ಹೋಗಿದೆ. ಈ ದಿವಸ ಯಾವ ಬಾಯ್ಸ್ ಹೈ ಸ್ಕೂಲಿನಲ್ಲಿ ಗರ್ಲ್ಸ್‌ಗಳಿಲ್ಲ? ಎಲ್ಲ ಬಾಯ್ಸ್ ಹೈ ಸ್ಕೂಲುಗಳಲ್ಲೂ ಗರ್ಲ್ಸ್ ಇದ್ದಾರೆ. ಆದರೆ ಎಲ್ಲಿ ಶಕ್ಯವಿದೆಯೋ ಹೆಣ್ಣುಮಕ್ಕಳುಗಳಿಗೆ ಪ್ರತ್ಯೇಕವಾಗಿ ಬೇರೊಂದು ಹೈ ಸ್ಕೂಲನ್ನು ಕೊಡಲು ಅಂಥ ಕಡೆಗಳಲ್ಲಿ ಮಾತ್ರ ಕೊಡಲಾಗಿದೆ. ಅಷ್ಟುಮಾತ್ರಕ್ಕೇ ನಮಗೆ ಈ ಕೋ-ಎಜ್ಯುಕೇಷನ್ ಹಿಡಿಸುವುದಿಲ್ಲ ಅಂತ ಹೇಳುವುದು ಸರಿ ಇದ್ದಂತೆ ಕಾಣುವುದಿಲ್ಲ. ಆದರೆ ಈಗ ಜನರು ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿ ಬೇಕೆಂತ ಕೇಳುತ್ತಿದ್ದಾರೆ. ಇಂಥ ಸಮಯದಲ್ಲಿ ಹೆಣ್ಣುಮಕ್ಕಳಿಗೇ ಪ್ರತ್ಯೇಕ ಹೈ ಸ್ಕೂಲುಗಳಿರಬೇಕೆಂತ ಕೇಳುವುದು ನನಗೇನೋ ಸರಿ ಕಾಣುವುದಿಲ್ಲ. ಆದರೆ ಈಗ ನಾನೀ ವಿಚಾರವನ್ನು ಸರ್ಕಾರದವರ ಪರವಾಗಿ ಹೇಳುತ್ತಿಲ್ಲ. ಈ ಬಗ್ಗೆ ನನ್ನ ವೈಯುಕ್ತಿಕ ವಿಚಾರವನ್ನು ಕೇಳುವುದಾದರೆ ಈ ಕೋ-ಎಜುಕೇಷನ್ನಿನಿಂದ ಅಷ್ಟೇನು ತೊಂದರೆಯಾಗಲಿಕ್ಕಿಲ್ಲವೆಂದು ನನ್ನ ಭಾವನೆ. ನಮ್ಮ ಹಣಕಾಸಿನ ದೃಷ್ಟಿಯಿಂದ ಹೇಳುವುದಾದರೆ ಇನ್ನು ಮುಂದಕ್ಕೆ ಹೆಣ್ಣುಮಕ್ಕಳಿಗೆ ಪ್ರತ್ಯೇಕವಾಗಿ ಎಲ್ಲ ಕಡೆಗಳಲ್ಲಿಯೂ ಹೈ ಸ್ಕೂಲುಗಳನ್ನು ಕೊಡುತ್ತೇವೆಂತ ಹೇಳುವುದಕ್ಕಾಗುವುದಿಲ್ಲ. ಮುಂದೆ ಇದು ಸಾಧ್ಯವಾಗಲಾರದು.

ಈ ದಿವಸ ಸರ್ಕಾರಿ ಸೈನ್ಸ್ ಕಾಲೇಜುಗಳಲ್ಲೂ ಮತ್ತು ಆರ್ಟ್ಸ ಕಾಲೇಜುಗಳಲ್ಲೂ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ 15,720 ಇದೆ. ಪ್ರಾಯ್‌ವೇಟ್ ಕಾಲೇಜುಗಳಲ್ಲಿ ಓದತಕ್ಕ ವಿದಾರ್ಥಿಗಳ ಸಂಖ್ಯೆ 27,322 ಇದೆ. ಈ ಪ್ರಕಾರ ಈ ಸಾಯಿನ್ಸ್ ಮತ್ತು ಆರ್ಟ್ಸ ಕಾಲೇಜುಗಳಲ್ಲಿ ಓದುತ್ತಿರುವ ಒಟ್ಟು ವಿದಾರ್ಥಿಗಳ ಸಂಖ್ಯೆ 43,042 ಇದೆ. ಹೀಗೆ ಈಗ ಗೌರ್ನಮೆಂಟ್ ಇಂಜಿನಿಯರಿಂಗ್ ಕಾಲೇಜುಗಳಲ್ಲಿ 1,574 ವಿದ್ಯಾರ್ಥಿಗಳಿದ್ದಾರೆ. ಖಾಸಗೀ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವವರ ಸಂಖ್ಯೆ 2,550. ಈ ಪ್ರಕಾರ ಒಟ್ಟು ಇಂಜಿನಿಯರಿಂಗ್ ಕಾಲೇಜುಗಳಲ್ಲಿ 4,124 ವಿದ್ಯಾರ್ಥಿಗಳಿದ್ದಾರೆ. ಎಲ್ಲಾ ಪಾಲಿಟೆಕ್ನಿಕಲ್ ಶಾಲೆಗಳಲ್ಲೂ ಓದತಕ್ಕ ಹುಡುಗರ ಸಂಖ್ಯೆ 2,902 ಇದೆ. ಈ ಪ್ರಕಾರ ಪ್ರಾಯಿವೇಟ್ ಪಾಲಿಟೆಕ್ನಿಕ್‌ಗಳಲ್ಲಿ ಓದುತ್ತಿರುವ ಹುಡುಗರ ಸಂಖ್ಯೆ 8,458 ಇದೆ. ಮುಂದಿನ ವರ್ಷ ಈ ಸಂಖ್ಯೆ ಇನ್ನೂ ಜಾಸ್ತಿಯಾಗಬಹುದು. ಈ ಸಂಖ್ಯೆ ಇಷ್ಟಕ್ಕೆ ನಿಲ್ಲುವುದಿಲ್ಲ.

ಇನ್ನು ಪ್ರಾಥಮಿಕ ಶಾಲೆಗಳ ಬಗ್ಗೆ ಸರ್ಕಾರದವರು ಏನೇನು ಪ್ರಯತ್ನ ಮಾಡಬಹುದಾಗಿತ್ತೋ ಅದೆಲ್ಲವನ್ನೂ ಮಾಡಿದ್ದಾರೆ—ಮಾಡುತ್ತಲೂ ಇದ್ದಾರೆ. ಆದರೆ ಕೆಲವು ಮಾನ್ಯ ಸದಸ್ಯರುಗಳು ಈ ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಸರ್ಕಾರದವರೇ ಕಟ್ಟಿಸಿಕೊಡಬೇಕೆಂದು ಕೇಳಿದ್ದಾರೆ. ನನ್ನ ಅಂದಾಜಿನ ಪ್ರಕಾರ ಹೇಳುವುದಾದರೆ ಈ ಕಾರ್ಯಕ್ಕೆ ಸುಮಾರು 20-25 ಕೋಟಿ ರೂಪಾಯಿಗಳು ಶಾಲಾ ಕಟ್ಟಡಗಳಿಗೆ ಹಿಡಿಯಬಹುದೆಂತ ತಿಳಿದು ಬಂದಿದೆ. ಆದರೆ ಈ ಕಟ್ಟಡಗಳ ಸಂಖ್ಯೆ ಇಷ್ಟಕ್ಕೆ ನಿಲ್ಲುವುದಿಲ್ಲ. ಇವು ವರ್ಷೇವರ್ಷೇ ಬೆಳೆಯುತ್ತಿರುತ್ತವೆ. ವರ್ಷಕ್ಕೆ 32-34 ಲಕ್ಷ ರೂಪಾಯಿಗಳುವರೆಗೆ ಖರ್ಚು ಮಾಡಬೇಕಾಗುತ್ತದೆ. ಆದರೆ ನಾವೀಗ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ವಿದ್ಯಾ ಬಾಬಿಗೆ 40 ಲಕ್ಷ ರೂಪಾಯಿಗಳು ಸಾಕಾಗಬಹುದೆಂತ ಅಂದಾಜು ಮಾಡಿ ನಿಗದಿ ಮಾಡಿದ್ದೇವೆ. ಹೀಗಿರುವಾಗ ಈ ಪ್ರಾಥಮಿಕ ವಿದ್ಯಾ ಶಾಲೆಗಳನ್ನೆಲ್ಲ ಸರ್ಕಾರದವರೇ ಕಟ್ಟಿಸಬೇಕೆಂದರೆ ಅದು ಸಾಧ್ಯವಿದೆಯೇ ಎಂಬುದನ್ನು ತಾವೆಲ್ಲರೂ ಆಲೋಚನೆ ಮಾಡಬೇಕಾಗಿದೆ. ಈ ದಿವಸ ಸರ್ಕಾರದವರು ಈ ವಿದ್ಯಾಖಾತೆಗಾಗಿ 19 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಎಲ್ಲ ಬಾಬುಗಳಿಗಿಂತಲೂ ಈ ಬಾಬಿಗೆ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದೇವೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಹುದಾಗಿದ್ದರೆ ನಮ್ಮ

ದೇಶದ ಇಂದಿನ ಕ್ಲಿಷ್ಟಪರಿಸ್ಥಿತಿ ಹೀಗೇ ಮುಂದುವರಿದಲ್ಲಿ ಈಗ ಸರ್ಕಾರದವರು ಈ ಬಾಬಿಗೆಷ್ಟು ಹಣವನ್ನೊದಗಿಸಿದ್ದಾರೋ ಇಷ್ಟು ಮುಂದೆ ಸಿಗಲಿಕ್ಕಿಲ್ಲ. ಹೀಗಿರುವಾಗ ಸಾರ್ವಜನಿಕರು ಸಹಕಾರ ನೀಡದಿದ್ದರೆ ಈ ಶಾಲಾಕಟ್ಟಡಗಳ ಅಭಿವೃದ್ಧಿ ಹೇಗಾಗುತ್ತದೆ? ಆದರೆ ಇವುಗಳ ಪೂರಾ ಜವಾಬ್ದಾರಿಯನ್ನು ಹೊರಲಿಕ್ಕೆ ಸರ್ಕಾರಕ್ಕೆ ಎಂದೂ ಸಾಧ್ಯವಾಗುವುದಿಲ್ಲ. ಶಿಬ್ಬಂದಿಗೂ ಸಂಬಳ ಕೊಡಬೇಕು, ಈ ಶಾಲಾಕಟ್ಟಡಗಳನ್ನೂ ನಾವೇ ಕಟ್ಟಿಸಬೇಕು ಎಂದರೆ ಅದು ಎಂದಿಗೂ ಸಾಧ್ಯವಿಲ್ಲದ ಮಾತು.

It is a mistake that Hon. Members are making. It is the primary responsibility of the society. The community must come forward and bear the burden.

Sri S. SIVAPPA (Sravanabelagola).—That is a new definition of 'socialistic pattern of society'.

Sri S. R. KANTHI.—It may be new or old. But this would be realized in course of time. Today or tomorrow Members will realize the truth of what I say. We cannot spend all the money in one plan and keep quite thereafterwards. It will have to be spread over for 15 to 20 years. In course of time we would have to evolve a method by which the community will also share the burden.

Sri V. M. DEO.—As in all fields, the public and private sectors must co-operate. I agree. But a time should come when the public sector should predominently have the responsibility in the field of education.

Sri S. R. KANTHI.—That again is a mistake. It is a joint partnership not only now but in future also. It is the joint responsibility of the society and the Government. I will quote the example of South Kanara. I have gone there thrice and I have found out how both sectors can help. I commend that example to one and all.

ನಾನು ಸೌತ್ ಕ್ಯಾನರಾಕ್ಕೆ ಮೂರಾವರ್ತಿ ಹೋಗಿ ನೋಡಿಕೊಂಡು ಬಂದಿದ್ದೇನೆ. ಇಲ್ಲಿಯುವರೆಗೂ ಅಲ್ಲಿನ ಜನರು ಎಂದೂ ನಮಗೊಂದು ಹೈಸ್ಕೂಲನ್ನು ಕೊಡಿ, ನಮಗೊಂದು ಕಾಲೇಜನ್ನು ಕೊಡಿ ಎಂತ ಸರ್ಕಾರದವರನ್ನು ಕೇಳಿಲ್ಲ. ಅವರೇನಿದ್ದರೂ ಆ ಪ್ರಾಯಿವೇಟ್ ಹೈಸ್ಕೂಲುಗಳನ್ನು ತೆರೆಯುವುದಕ್ಕೆ ಅವಕಾಶ ಹಾಗೂ ಅವುಗಳಿಗೆ ರೆಕಾಗ್ನಿಷನ್ ಕೊಡಿ ಎಂತ ಮಾತ್ರ ಕೇಳುತ್ತಿದ್ದಾರೆ. ಅವರು ವಿದ್ಯಾಭಿವೃದ್ಧಿಯಲ್ಲಿ ಮುಂದುವರಿಯುತ್ತಿರುವುದನ್ನು ನೋಡಿದರೆ ಬಹಳ ಸಂತೋಷವಾಗುತ್ತದೆ. ಹಾಗೆ ಅವರು ಅಷ್ಟರಮಟ್ಟಿಗೆ ವಿದ್ಯೆಯಲ್ಲಿ ಮುಂದೆ ಬಂದಿರುವುದಕ್ಕೆ ಮೂಲ ಕಾರಣ ಅವರು ಈ ವಿಚಾರಗಳಲ್ಲೆಲ್ಲ ಸ್ವಾವಲಂಬಿಗಳಾಗಿರುವುದರಿಂದಲೇ ಅವರು ಹಾಗೆ ಮುಂದೆ ಬಂದಿದ್ದಾರೆ. ಇನ್ನು ಉತ್ತರ ಕರ್ಣಾಟಕದಲ್ಲೂ ಇದೇ ಪರಿಸ್ಥಿತಿ ಇದೆ. ಅಲ್ಲಿಯವರೂ ಸ್ವಾವಲಂಬಿಗಳಾಗೇ ಇದ್ದರು. ಆದರೆ ಇತ್ತೀಚೆಗೆ ಅಲ್ಲಿಯ ಕೆಲವು ಜನರು ಸರ್ಕಾರಿ ಹೈಸ್ಕೂಲುಗಳನ್ನು ಕೊಡಬೇಕೆಂದು ಕೇಳಲಿಕ್ಕೆ ಈಗ ಪ್ರಾರಂಭಿಸಿದ್ದಾರೆ. ಆದರೆ ಈ ದಿವಸ ಸರ್ಕಾರದವರಿಗೆ ಈ ಹೈಸ್ಕೂಲುಗಳನ್ನು ಸ್ಥಾಪಿಸಲು ಸಾಧ್ಯವಿಲ್ಲದೆ ಇರುವುದರಿಂದಲೇ ಪ್ರಾಯಿವೇಟ್ ಹೈಸ್ಕೂಲುಗಳನ್ನು ತೆರೆಯಲು ಜನರು ಮುಂದೆ ಬಂದರೆ ಅವುಗಳಿಗೆ ರೆಕಾಗ್ನಿಷನ್ ಇತ್ಯಾದಿಗಳನ್ನು ಕೊಡುತ್ತೇವೆಂದು ಹೇಳಿದ್ದೇವೆ.

ಇನ್ನು ತರಬೇತಾದ ಶಿಕ್ಷಕರ ಕೊರತೆಯಿದೆ ಎಂತ ಹೇಳಿದ್ದಾರೆ. ಇನ್ನು ನಮ್ಮ ಡಿ.ಪಿ.ಐ. ಅವರು ಒದಗಿಸಿರತಕ್ಕ ವರದಿ ಪ್ರಕಾರ ಪ್ರಾಥಮಿಕ ಶಾಲೆಗಳಲ್ಲಿ ಒಬ್ಬೊಬ್ಬ ಅಧ್ಯಾಪಕರು ಆವರೇಜಿನಲ್ಲಿ 38 ಜನ ವಿದ್ಯಾರ್ಥಿಗಳಿಗೆ ಪಾಠಪ್ರವಚನ ನಡೆಸುತ್ತಿರುವುದಾಗಿ ತಿಳಿದು ಬಂದಿದೆ. ಆದರೆ ಕೆಲವು ಕಡೆಗಳಲ್ಲಿ ಈ ಅಧ್ಯಾಪಕರ ಕೊರತೆಯಿದೆ. ಆದರೆ ಹಿಂದಿನ ಸಾಲಿಗಿಂತ ಈ ವರ್ಷ ಇದು ಎಷ್ಟೋ ಸುಧಾರಣೆಯಾಗಿದೆ. ಮುಂದಿನ ವರ್ಷದ ಬಡ್ಜೆಟ್ಟಿನಲ್ಲಿ ತಮಗೆಲ್ಲರಿಗೂ ಗೊತ್ತಿರುವಂತೆ ಒಂದು ಸಾವಿರ ಜನ ಶಿಕ್ಷಕರನ್ನು ಜಾಸ್ತಿ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಲಾಗಿದೆ. ದುಡ್ಡಿನ ಅಭಾವದಿಂದ ಈ ಕಾರ್ಯ ಸ್ವಲ್ಪ ಹಿಂದೆ ಬಿದ್ದಿದೆ. ಆದರೆ ಈಗ ಹೀಗೆ ಈ ಶಿಕ್ಷಕರ ಸಂಖ್ಯೆಯನ್ನು

(ಶ್ರೀ ಎಸ್. ಆರ್. ಕಂಠಿ)

ಹೆಚ್ಚಿಸಿಕೊಳ್ಳಬಹುದೆಂಬ ಬಗ್ಗೆ ಕೆಲವು ಸಲಹೆಗಳು ಬಂದಿವೆ. ಇದೇ ಸಂದರ್ಭದಲ್ಲಿ ಅಧಿಕಾರ ವಿಕೇಂದ್ರೀಕರಣ ಪ್ರಶ್ನೆಯೂ ಬಂದಿದೆ. ಇದಕ್ಕಾಗಿ ಒಂದು ಸಮಿತಿ ನೇಮಕವಾಗಿದೆ. ಡ್ರಾಫ್ಟ್ ಬಿಲ್ ತಯಾರಾಗಿದೆ, ಆದರೆ ಕೆಲವು ತೊಂದರೆಗಳಿವೆ.

10-00 A.M.

ನಮ್ಮ ಸ್ಥಾನಿಕ ಸಂಸ್ಥೆಗಳು, ತಾಲ್ಲೂಕು ಬೋರ್ಡ್‌ಗಳು, ಪಂಚಾಯಿತಿಗಳು ಮತ್ತು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಬೋರ್ಡ್‌ಗಳು ಯಾವರೀತಿಯಿಂದ ನಡೆಯುತ್ತಿವೆ ಅದರಲ್ಲಿ ಏನು ಮಾರ್ಪಾಡು ಮಾಡಬೇಕು ಎನ್ನುವ ವಿಚಾರವಾಗಿ ಶ್ರೀಮಾನ್ ಕೊಂಡಜ್ಜಿ ಬಸಪ್ಪನವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ನೇಮಿಸಿದ್ದೇವೆ. ಅವರು ಯಾವರೂಪ ತಾಳಬೇಕೆಂದು ಹೇಳುತ್ತಾರೆಯೋ ಅವರ ರಿಪೋರ್ಟ್ ಬಂದ ಮೇಲೆ ಅದರ ನಿರ್ಣಯ ಮಾಡಲಿಕ್ಕೆ ಸಾಧ್ಯವಾಗುತ್ತದೆ. ನಾನು ಡ್ರಾಫ್ಟ್ ಬಿಲ್ಲನ್ನು ತರಿಸಿನೋಡಿದೆ. ಅದನ್ನು ನೋಡಿದ ಮೇಲೆ ಅದರಲ್ಲಿ ವಿಕೇಂದ್ರೀಕರಣ ಕಡಮೆ ಇದೆ. ಆ ತರಹ ವಿಕೇಂದ್ರೀಕರಣವಾಗುವುದಿಲ್ಲ. ಸಾಮಾನ್ಯ ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡಿಗೆ ಅಧಿಕಾರ ಕೊಡುತ್ತೇವೆಂದರೆ ನನ್ನ ಮಟ್ಟಿಗೆ ನಾನು ಒಪ್ಪುವುದಿಲ್ಲವೆನ್ನುವ ಮಾತನ್ನೂ ನಾನು ಹೇಳುತ್ತೇನೆ. ಕೊಂಡಜ್ಜಿ ಬಸಪ್ಪನವರಿಂದ ರಿಪೋರ್ಟ್ ಬರುವವರೆಗೂ, ತಾಲ್ಲೂಕ್ ಡೆವಲಪ್‌ಮೆಂಟ್ ಕಮಿಟಿಗಳಿಗೆ ಸರಿಯಾದ ಅಧಿಕಾರ ಕೊಟ್ಟಿಲ್ಲ, ಅಧಿಕಾರ ವಿಕೇಂದ್ರೀಕರಣವಾಗಿಲ್ಲವೆನ್ನುವುದು ಸರಿಯಲ್ಲವೆಂದು ನನ್ನ ವೈಯುಕ್ತಿಕ ಅಭಿಪ್ರಾಯ.

Medium of instruction ಎಂದರೆ ಶಾಲೆಗಳಲ್ಲಿ ಮತ್ತು ಕಾಲೇಜುಗಳಲ್ಲಿ ಯಾವರೀತಿಯ ವಿದ್ಯಾಭ್ಯಾಸ ಕ್ರಮವಿರಬೇಕು ಎನ್ನುವ ವಿಚಾರವನ್ನೂ ಕೆಲವರು ಎತ್ತಿದ್ದಾರೆ ಪ್ರೈಮರಿ ಮಟ್ಟದಲ್ಲಿ ಸಣ್ಣಮಕ್ಕಳು ಅವರ ಮಾತೃಭಾಷೆಯಲ್ಲಿಯೇ ಓದಬೇಕು ಎನ್ನುವಂಥಾದ್ದನ್ನು ಸರ್ಕಾರದವರು ಒಪ್ಪಿದ್ದಾರೆ. ಇದು ಅಖಿಲಭಾರತೀಯ ನಿರ್ಣಯವಾಗಿದೆ. ಹೈ ಸ್ಕೂಲಿನಲ್ಲಿ ಕನ್ನಡವನ್ನು regional language, ಕಡ್ಡಾಯ ಮಾಡಿಲ್ಲ. ಪ್ರಾದೇಶಿಕ ಭಾಷೆಯನ್ನು ಕಡ್ಡಾಯವಾಗಿ ಮಾಡಲಾರದಂಥ ಯಾವುದಾದರೂ ಒಂದು ರಾಜ್ಯ ನಮ್ಮ ಭಾರತದಲ್ಲಿದ್ದರೆ ಅದು ಮೈಸೂರು ರಾಜ್ಯ. ಮಹಾರಾಷ್ಟ್ರದಲ್ಲಿ ಹೇಗಿದೆ ಎಂಬುದನ್ನು ಇಲ್ಲಿ ಏನೇನೋ ಹೇಳುವಂಥ ಮಹಾರಾಷ್ಟ್ರ ಸಮಿತಿಯ ಮಿತ್ರರು ಹೋಗಿ ಸ್ವಲ್ಪ ನೋಡಬೇಕು. ಮಹಾರಾಷ್ಟ್ರದಲ್ಲಿ ಮ ರಾ ಠಿ ಯ ನ್ನು Compulsoryಯಾಗಿ ಮಾಡಿದ್ದಾರೆ. ಆದರೆ ನಾವು ಕನ್ನಡವನ್ನು secondary stageನಲ್ಲಿ ಕೂಡ Compulsory ಮಾಡಿಲ್ಲ.

Sri N. O. SAMAJI (Belgaum II). Spoke in Marathi) —

ಶ್ರೀ ಎಸ್. ಆರ್. ಕಂಠಿ.—ಪ್ರಾಥಮಿಕ ಶಿಕ್ಷಣವನ್ನೂ ಮಾತೃಭಾಷೆಯಲ್ಲಿ ಕಲಿಯುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದೇವೆ. ಅದು ಅಖಿಲ ಭಾರತ ನಿರ್ಣಯವಾಗಿದೆ. ಹಿಂದಿ ಮತ್ತು ಇಂಗ್ಲಿಷನ್ನು compulsory ಮಾಡಿದ್ದೇವೆ. ಕನ್ನಡವನ್ನು compulsory ಮಾಡಿಲ್ಲ. ಆದರೆ Kannada is one of the elective languages ಎಂದರೆ ಸಂಸ್ಕೃತ, ಅಥವಾ ಮಾತೃಭಾಷೆ, ಅಥವಾ Latin, ಹೀಗೆ ಯಾವುದನ್ನಾದರೂ ತೆಗೆದುಕೊಳ್ಳಬಹುದು. ಇಷ್ಟು ತೀವ್ರಗತಿಯಿಂದ ಹೆಜ್ಜೆಯನ್ನು ಬೇರೆ ಯಾವ ರಾಜ್ಯಗಳೂ ಇಟ್ಟಿಲ್ಲವೆನ್ನುವುದನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ವಿಶ್ವವಿದ್ಯಾನಿಲಯದಲ್ಲಿ ಯಾವ ಭಾಷೆ ಇರಬೇಕು ಎನ್ನುವ ವಿಚಾರ ಶ್ರೀಮಾನ್ ಗೋಪಾಲ ಗೌಡರು ಕೇಳಿದರು. ಮಾನ್ಯ ಸದಸ್ಯರು ಮಾಡಿದಂಥ ಭಾಷಣ ನನಗೆ ಬಹಳ ಮಟ್ಟಿಗೆ ಒಪ್ಪಿಗೆ ಇದೆ ಎನ್ನುವುದನ್ನು ಹೇಳುತ್ತಿದ್ದೇನೆ. ಅವರು ಹೇಳುವುದರಲ್ಲಿ ಸ್ವಲ್ಪ ಖಾರಖಾರವಾಗಿ ಹೇಳಿದರೇ ವಿನಾ ಅವರು ಹೇಳಿದ ವಿಚಾರಗಳಿಗೆ ನನ್ನ ಸಹಮತವಿದೆ ಎನ್ನುವುದನ್ನು ನಾನು ವ್ಯಕ್ತಪಡಿಸುತ್ತೇನೆ. ವಿಶ್ವವಿದ್ಯಾನಿಲಯದಲ್ಲಿ ಕನ್ನಡವು ಬೋಧಭಾಷೆಯಾಗಬೇಕೆನ್ನುವ ಮಾತನ್ನು ಹೇಳಿದಾಗ ಸರ್ಕಾರದವರು ಅದನ್ನು ಒಪ್ಪಿಕೊಂಡಿದ್ದಾರೆ. ಆದರೆ ವಿಶ್ವವಿದ್ಯಾನಿಲಯದಲ್ಲಿ ಕನ್ನಡವನ್ನು ಬೋಧಭಾಷೆ ಮಾಡುವ ಪ್ರಶ್ನೆ ನಮ್ಮದಲ್ಲ ವಿಶ್ವವಿದ್ಯಾನಿಲಯದವರಿಗೆ ಸೇರಿದ್ದು. ಅದು ಅಟಾನಮಸ್ ಇದೆ. ಆ ಅಧಿಕಾರವನ್ನು ನಾವು ಅವರಿಗೆ ಬಿಟ್ಟುಕೊಟ್ಟಿದ್ದೇವೆ. Vice-Chancellors' Conferenceನಲ್ಲಿ ಮತ್ತು National Integration Councilನಲ್ಲಿ ಬೋಧಭಾಷೆ ಹಿಂದಿ ಆಗಬೇಕು, ಪ್ರಾದೇಶಿಕ ಭಾಷೆಯಾಗಬೇಕು, ಹಂತ ಹಂತವಾಗಿ ಕಾರ್ಯರೂಪಕ್ಕೆ ಬರಬೇಕು

ಎಂದು ಒಪ್ಪಿಕೊಂಡಿದ್ದಾರೆ. ನಾನೂ ಕೂಡ ಅದನ್ನು ಒಪ್ಪಿಕೊಳ್ಳುತ್ತೇನೆ. ಸರ್ಕಾರದ ಧೋರಣೆಯೂ ಅದೇ ಆಗಿದೆ ಎಂದು ನಾನು ವ್ಯಕ್ತಪಡಿಸುತ್ತೇನೆ.

Pre-primary education ವಿಚಾರವಾಗಿ ಎರಡು ಮಾತು ಹೇಳಿದರು. ಸರ್ಕಾರದವರು ಬಾಲೂವಾಡಿಗಳನ್ನೂ, ನರ್ಸರಿ ಸ್ಕೂಲುಗಳನ್ನೂ ನಡೆಸಬೇಕೆಂದು ಹೇಳಿದರು. ಅದು ಸರ್ಕಾರದ ಕರ್ತವ್ಯವಾಗಿಲ್ಲ. ವಿದ್ವಜ್ಜನಗಳೂ, ಮಹನೀಯರೂ ಮುಂದೆ ಬಂದು ಅವುಗಳನ್ನು ನಡೆಸಬೇಕು ಎಂದು ನಾನು ವಿಜ್ಞಾಪನೆ ಮಾಡಿಕೊಳ್ಳುತ್ತ ಸರ್ಕಾರದವರು ಗ್ರಾಂಟ್ ಕೊಡುವ ವಿಚಾರ ಮಾಡಿದ್ದಾರೆ, ಗ್ರಾಂಟ್ ಕೊಡುತ್ತಾರೆ. ಜನಗಳು ಈ ಬಗ್ಗೆ ಮುಂದೆ ಬರಬೇಕು ಎಂದು ಹೇಳುತ್ತೇನೆ.

ಬೇಸಿಕ್ ಎಜುಕೇಷನ್ ವಿಚಾರವಾಗಿ ಎರಡು-ಮೂರು ಜನರು ಬೇರೆಬೇರೆ ತರಹ ಹೇಳಿದರು. Basic Education ಇರಕೂಡದು ಎಂದು ಶ್ರೀಮಾನ್ ಸುಂಠಣಕರ್ ಅವರು ಹೇಳಿದರು. Basic Education ಕಡ್ಡಾಯ ಮಾಡಿರಿ, ಅದನ್ನು ಭದ್ರಪಡಿಸಿರಿ ಎಂದು ಕೆಲವರು ಹೇಳಿದರು. ಈ ಎರಡೂ ವಿಚಾರಗಳನ್ನೂ ನೋಡಿ ಸರ್ಕಾರದ ಮಟ್ಟಿಗೆ ಹೇಳುವುದಾದರೆ basic education ಜಾಸ್ತಿ ಪ್ರಮಾಣದಲ್ಲಿ ತರಬೇಕೆಂದು ಮಾಡಿದ್ದಾರೆ ಮತ್ತು ಆ ಪ್ರಕಾರವಾಗಿ ತರುತ್ತಿದ್ದಾರೆ. ಇದರಲ್ಲಿ ಎರಡು ತರಹ ಇವೆ. ಒಂದು basic pattern ಮತ್ತು ಇನ್ನೊಂದು 'full basic. Basic patternನಲ್ಲಿ ಯಾವುದಾದರೂ ಒಂದು craft ಕಲಿಸಬೇಕು. ನಮ್ಮ ರಾಜ್ಯದಲ್ಲಿ ಎಲ್ಲ ಶಾಲೆಗಳನ್ನೂ basic pattern ಮಾಡಿದ್ದೀವೆ. ಉತ್ತರ ಕರ್ಣಾಟಕದ ಜಿಲ್ಲೆಗಳಲ್ಲಿ ಮಾತ್ರ full basic ಶಾಲೆಗಳಿವೆ. ಉಳಿದ ಕಡೆ ಮಾಡಿಲ್ಲ. All-India Conferenceನಲ್ಲಿ ನಮ್ಮ ಶಾಲೆಗಳಲ್ಲಿ basic schools ಆಗಬೇಕೆಂದು ನಿರ್ಣಯ ಮಾಡಿದ್ದಾರೆ. ಕೇಂದ್ರ ಸರ್ಕಾರದವರು ಅದೇ ಪ್ರಕಾರದ ಆದೇಶವನ್ನೂ ಕೊಟ್ಟಿರುವ ಕಾರಣ ನಾವು basic pattern ಮಾಡಿದ್ದೇವೆ. ಇನ್ನು ಮುಂದೆ basic ಮಟ್ಟಕ್ಕೆ ಹೆಜ್ಜೆ ಇಡಬೇಕಾಗಿದೆ. ಇದನ್ನು ಮಾಡುವ ಕಾಲಕ್ಕೆ ನಮ್ಮ ಶಾಲೆಗಳಲ್ಲಿ ತರಬೇತಿ ಹೊಂದಿದವರಿಲ್ಲ. ಟ್ರೈನಿಂಗ್ ಕಾಲೇಜುಗಳಲ್ಲಿ ತರಬೇತಿ ಕೊಡುತ್ತಿದ್ದೇವೆ.

ಶ್ರೀಮಾನ್ ಸುಂಠಣಕರ್ ಅವರು ಹೇಳಿದರು, ಒಂದು ತಕಲಿ ಕೊಟ್ಟು ನೂಲುವುದಕ್ಕೆ ಹೇಳಿ, basic pattern ಮಾಡುತ್ತಿದ್ದೀರಿ, basic education ಕೊಡುತ್ತಿದ್ದೀರಿ, ಇದು ಸರಿಯಲ್ಲವೆಂದು ಹೇಳಿದರು. ಅದು ಸರಿಯಲ್ಲ. ನಾವು ನೂಲುವುದು, ನೇಯುವುದು, ವ್ಯವಸಾಯ, ಬಡಗಿತನ, ಇವುಗಳನ್ನೆಲ್ಲಾ ಸೇರಿಸಿದ್ದೇವೆ. ಆ ಪ್ರಕಾರವಾಗಿ ನಡೆಯುತ್ತಿದೆ. ಯಾವುದೇ ಒಂದು ವಿಷಯ ವನ್ನು ಪ್ರಯೋಗಾರ್ಥವಾಗಿ ತೆಗೆದುಕೊಂಡಾಗ failure ಆಯಿತು, ಅಥವಾ ಒಳ್ಳೆಯದಾಯಿತು ಎನ್ನುವುದಕ್ಕೆ ಕಾಲ ಬೇಕಾಗುತ್ತದೆ. ಮಾನ್ಯ ಸದಸ್ಯರು ಕೆಲವು ಕಾಲ ತಡೆಯಬೇಕೆಂದು ಬೇಡಿ ಕೊಳ್ಳುತ್ತಿದ್ದೇನೆ.

ಮಲ್ಟಿ ಪರ್ಪಸ್ ಹೈಸ್ಕೂಲುಗಳು ಸಂಪೂರ್ಣವಾಗಿ failure ಆಗಿವೆ ಎಂದು ಶ್ರೀಮಾನ್ ಸುಂಠಣಕರ್ ಅವರು ಹೇಳಿದರು. ವಿಚಾರ ಹೀಗಿದೆ. ನಮ್ಮ ರಾಜ್ಯದಲ್ಲಿರುವ ಒಂದು ಸಾವಿರ ಹೈಸ್ಕೂಲುಗಳಲ್ಲಿ 61 ಮಾತ್ರ ಮಲ್ಟಿ ಪರ್ಪಸ್ ಹೈಸ್ಕೂಲುಗಳಾಗಿವೆ. ಇವು ಚೆನ್ನಾಗಿ ನಡೆದಿಲ್ಲ ವೆನ್ನುವುದನ್ನು ಒಪ್ಪುವುದಿಲ್ಲ. ಕೆಲವು ಕಡೆ ತೊಂದರೆಗಳಿವೆ. ಶ್ರೀಮತಿ ನಾಗರತ್ನಮ್ಮನವರು ಹೇಳಿದರು, ಚಿಕ್ಕಮಗಳೂರಿನಲ್ಲಿ ಗ್ರೀಸ್ ಹಾಕಿ ಸಲಕರಣೆಗಳನ್ನಿಟ್ಟಿದ್ದೇವೆ ಎಂದು ಹೇಳಿದರು. ಗ್ರೀಸ್ ಹಾಕಿ ಇಟ್ಟಿದ್ದರೆ ಅವು ಸರಿಯಲ್ಲವೆಂದಲ್ಲ. ಗ್ರೀಸ್ ಹಾಕದೆ ಇದ್ದರೆ ಅವು rust ಹಿಡಿಯು ತ್ತವೆ, ಜಂಗ್ ಆಗುವ ಸಂಭವವಿರುತ್ತದೆ. ಗ್ರೀಸ್ ಹಾಕಿರುವುದು ತಪ್ಪಲ್ಲ. ಜಾಗ ಇಲ್ಲದ್ದಕ್ಕೆ ಹಾಗೆ ಮಾಡಿದ್ದೆವು ಈ ವರ್ಷ ಕ್ರಮ ತೆಗೆದುಕೊಂಡು ಕಟ್ಟಡ ಕಟ್ಟಿಸಬೇಕೆಂದು ಮಾಡಿದ್ದೇವೆ. ಜಾಗ ಸಿದ್ಧವಾಗಿದೆ. ಮುಂದಿನ ವರ್ಷ ಅಲ್ಲಿ ಹಾಕುತ್ತೇವೆ. ಹಿಂದೆ ಯಾವುದೋ ಕಾಲದಲ್ಲಿ ಆದದ್ದನ್ನು ನನ್ನ ಕೊರಳಿಗೆ ಕಟ್ಟುತ್ತಿದ್ದಾರೆ. ನಾಲ್ಕು ವರ್ಷದ ಹಿಂದೆ ನಡೆದುದ್ದನ್ನು ಸರಿಪಡಿಸಲು ಕಟ್ಟಡ ಕಟ್ಟಿಸುವ ಪ್ರಯತ್ನ ಮಾಡಿ, ಕಟ್ಟಡ ಕಟ್ಟಿಸಿ ಎಲ್ಲ ಸಿದ್ಧಮಾಡಿದ್ದಕ್ಕೆ ಮಾತ್ರ ಶ್ರೇಯಸ್ಸು ಸಿಕ್ಕಲಿಲ್ಲ, ಗ್ರೀಸ್ ಹಾಕಿ ಇಟ್ಟಿದ್ದಕ್ಕೆ ಮಾತ್ರ ಶ್ರೇಯಸ್ಸು ಸಿಕ್ಕಿತು.

ವಿದ್ಯಾ ಪೀಠಗಳ ವಿಚಾರವಾಗಿ ಶ್ರೀಮಾನ್ ಸುಂಠಣಕರ್ ಅವರು ಏನೇನೋ ಹೇಳಿದರು. ವಿದ್ಯಾಪೀಠಗಳು ಬೇಕಾಗಿರುವುದಿಲ್ಲವೆಂದೂ, ಈಗ ರಾಜ್ಯದಲ್ಲಿ ನಾಲ್ಕು ವಿದ್ಯಾಪೀಠಗಳಿವೆಯೆಂದೂ ಹೇಳಿದರು. ನಮ್ಮ ರಾಜ್ಯದಲ್ಲಿ ಏಳು ವಿದಾಪೀಠಗಳಿವೆ. ಎಂಟನೆಯದು ಮುಂಬೈ ಕರ್ಣಾಟಕದಲ್ಲಿ ಆಗುತ್ತದೆ. ಒಂಬತ್ತನೆಯದನ್ನು ಹೈದರಾಬಾದ್ ಕರ್ಣಾಟಕದಲ್ಲಿ ಮಾಡಬೇಕೆಂದು ಸರ್ಕಾರಕ್ಕೆ ಉದ್ದೇಶವಿದೆ. ಇವುಗಳಿಂದ ಜನರ ಮನೋವೃತ್ತಿ ಮಾರ್ಪಾಡಾಗುತ್ತದೆ. ಹೊಸತರಹದ ಜೀವನ ಮಾಡಲಿಕ್ಕೆ ಶಕ್ಯವಿದೆ, ಹೊಸತರಹ ವ್ಯವಸಾಯವನ್ನು ಮಾಡಲಿಕ್ಕೆ ಶಕ್ಯವಿದೆ ಎನ್ನುವ ಆಲೋಚನೆ ನನಗಿದೆ. ಇದಕ್ಕೆ ಬಹಳ ಖರ್ಚಾಗುತ್ತದೆಂದು ಹೇಳಿದರು. ಖರ್ಚಾಗುತ್ತದೆ. ವಿದ್ಯಾಪೀಠಗಳ

(ಶ್ರೀ ಎಸ್. ಆರ್. ಕಂಠಿ)

curriculum ಬೇರೆ, ಕಲಿಯುವಂಥ ರೀತಿ ಬೇರೆ, ಇರುತ್ತದೆ, ಇದರಿಂದಾಗಿ ಇವುಗಳ ಖರ್ಚು ಬಹಳ ಎಂದು ಒಪ್ಪಿಕೊಳ್ಳುತ್ತೇನೆ. ಇವು ಯಶಸ್ವಿಯಾಗಿ ಕೆಲಸ ಮಾಡಲಿಲ್ಲವೆಂದು ಹೇಳುವುದು ಸರಿಯಲ್ಲವೆಂದು ನನಗನ್ನಿಸುತ್ತದೆ.

ಸೋಷಿಯಲ್ ಎಜುಕೇಷನ್ನಿನ ವಿಚಾರವಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ಗೋಪಾಲ ಗೌಡರು ಹೇಳಿದಂತಹ ವಿಚಾರ ಬಹಳ ಗಹನವಾದುದು. ಅದನ್ನೂ ವಿಚಾರ ಮಾಡುತ್ತಿದ್ದೇವೆ ಎಂದು ಅಷ್ಟು ಹೇಳುತ್ತೇವೆ. ನೂರಕ್ಕೆ ಇಪ್ಪತ್ತೈದರಷ್ಟು ಮಾತ್ರ ಸಾಕ್ಷರತೆ ಇದೆ ಎಂದರೆ ಇದು ಇನ್ನೆಷ್ಟು ವರ್ಷಗಳಾದಮೇಲೆ ನೂರಕ್ಕೆ ನೂರರಷ್ಟು ಹೋಗುತ್ತದೆ ಎನ್ನುವುದರ ಬಗ್ಗೆ ನಾವೂ ಸಹ ವಿಚಾರ ಮಾಡಬೇಕಾಗುತ್ತದೆ. ನಾವು ಇತ್ತೀಚೆಗೆ Education Ministers' Conferenceಗೆ ದೆಹಲಿಗೆ ಹೋಗಿದ್ದಾಗ ಎಂದರೆ ಹೋದವರ್ಷದ ಅಕ್ಟೋಬರು 18 ಮತ್ತು 19ನೇ ತಾರೀಖುಗಳಲ್ಲಿ ಒಂದು ನಿರ್ಣಯ ಮಾಡಲಾಗಿದೆ ಅಲ್ಲಿ ಅವರೂ ಸಹ ಈ ಸೋಷಿಯಲ್ ಎಜುಕೇಷನ್ನಿಗಾಗಿ, ಹೆಚ್ಚು ದುಡ್ಡು ಹಾಕಿ, ಜನಗಳಲ್ಲಿ ಹೆಚ್ಚಿನ ಸಾಕ್ಷರತೆಯನ್ನುಂಟುಮಾಡಬೇಕು ಎಂದು ನಿರ್ಣಯಮಾಡಿದೆ. ಅದರಂತೆ ಕೇಂದ್ರ ಸಚಿವರಾಗಿದ್ದ ಶ್ರೀ ಮಾಲಯವರು ಈ ತಿಂಗಳು 23ನೇ ತಾರೀಖಿನದಿನ ಸೋಷಿಯಲ್ ಎಜುಕೇಷನ್ನಿನ ಒಂದು ಟೀಮ್‌ನವರೊಂದಿಗೆ ಇದನ್ನು ವಿಚಾರ ಮಾಡಲಿಕ್ಕೆ ಬರುವವರಾಗಿದ್ದಾರೆ. ಅವರಲ್ಲಿ ಇವೆಲ್ಲವನ್ನೂ ವಿಚಾರಮಾಡಿ ಯಾವರೀತಿ ಮುಂದೆ ಹೆಜ್ಜೆ ಇಡಬೇಕೆಂದು ನೋಡಬೇಕಾಗಿದೆ. ಹಿಂದೆ ಬ್ರಿಟಿಷರಕಾಲದಲ್ಲಿ ಶೇಕಡ 12 ಮತ್ತು 13 ಸಾಕ್ಷರತೆ ಇದ್ದುದು ಈಗ ಶೇಕಡ 15ರಷ್ಟು ಜಾಸ್ತಿಯಾಗಿದೆ. ಆದಕಾರಣ ಈ illiteracyಯನ್ನು ದೂರ ಮಾಡಬೇಕಾದರೆ ಎಷ್ಟೋ ವರ್ಷಗಳಾಗುತ್ತದೆ ಎಂದು ಅವರೂ ಅಸಮಾಧಾನಪಟ್ಟಿದ್ದಾರೆ. ಇದನ್ನು ಸರಿಯಾಗಿ ವಿಚಾರ ಮಾಡಬೇಕು ಎಂದು ನನಗೂ ಇದೆ. ನಾವು ಯಾವುದೇ ಒಂದು ಕೆಲಸವನ್ನು ಮಾಡಬೇಕಾಗಿದ್ದರೂ ಅದಕ್ಕೆ ತಕ್ಕಂತೆ ಶಿಕ್ಷಣ ಖಾತೆಯಲ್ಲಿ ದುಡ್ಡಿಲ್ಲದೆ ಆ ಕೆಲಸ ಆಗುತ್ತಿಲ್ಲ. ದುಡ್ಡಿಲ್ಲದೆ ಯಾವ ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲ. ಅದರಿಂದ ನಮ್ಮ ದೇಶದಲ್ಲಿ ಸಾಕ್ಷರತೆಯ ಅಭಾವವಿದ್ದರೂ ಹೆಚ್ಚಿಗೆ ಸ್ಕೂಲುಗಳನ್ನು ಮಾಡದೇ ಇರುವುದಕ್ಕೆ ಹಣದ ಅಭಾವವೂ ಒಂದು ಕಾರಣವಾಗಿದೆ. ಅದಕ್ಕಾಗಿ ಹೆಚ್ಚು ದುಡ್ಡನ್ನು ಕೊಟ್ಟರೆ ಇದನ್ನು ಮುಂದುವರಿಸುವುದಕ್ಕೆ ಸಾಧ್ಯವಿದೆ. ಇದಕ್ಕಾಗಿ ಎಲ್ಲರಿಂದಲೂ ಅಷ್ಟು, ಇಷ್ಟು ಬೇಕು ಎಂದು ಹೇಳಿ ಲೆಕ್ಕಮಾಡಿಹಾಕಿ ನೋಡಿದ್ದೇವೆ. ಅದು ಹೇಗೆಂದರೆ, ಹಳ್ಳಿಗಳಲ್ಲಿರುವ ಯಾರಾದರೂ ಒಬ್ಬರಿಂದ ಒಂದು ದೀಪ ಬೇಕಾದರೆ ಕೊಡುವುದಕ್ಕೆ ತೊಂದರೆಯಾಗುವುದಿಲ್ಲ. ಕೊಡುವುದಕ್ಕೆ ಒಂದು ಚಾಪೆ ತಂದುಕೊಡುವುದಕ್ಕೆ ತೊಂದರೆಯಾಗುವುದಿಲ್ಲ. ಹಾಗೇ ಒಂದು ಬೋರ್ಡು ಕೊಡುವುದಕ್ಕೆ ತೊಂದರೆಯಾಗುವುದಿಲ್ಲ. ಇದನ್ನು ಅವರೇ ಮಾಡಬೇಕೆಂದು ಯೋಚನೆ ಮಾಡಿದ್ದೇವೆ ; ಅದರಂತೆ ಸ್ಕೂಲುಗಳಲ್ಲಿರುವ ಮಾಸ್ತರುಗಳು, ಹೈಸ್ಕೂಲು ಟೀಚರುಗಳು, ಎಲ್ಲರೂ ಸೇರಿಕೊಂಡು ಈ ಕೆಲಸ ಮಾಡಬೇಕೆಂದು ಒಂದು ಯೋಜನೆಯನ್ನು ನಾವು ಮಾಡಿದ್ದೇವೆ.

Adult Education Council ವಿಚಾರವಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ರಂಗೇಗೌಡರು ಬಹಳ ಕಟುವಾಗಿ ಟೀಕೆ ಮಾಡಿದರು. ನಾನೂ ಇದನ್ನು ನೋಡಿಸಿದೆ. ಆದರೆ ಅವರು ಇದರಬಗ್ಗೆ ಎಷ್ಟುಮಟ್ಟಿಗೆ ತಿಳಿದುಕೊಂಡಿದ್ದಾರೆ ಅಷ್ಟು ವ್ಯತ್ಯಾಸಗಳು ಇಲ್ಲಿ ಇದ್ದಹಾಗೆ ಕಾಣುವುದಿಲ್ಲ. ಆದರೂ ಇನ್ನೂ ನೋಡಿಸುತ್ತೇವೆ.

ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ನಾನು ಮಾಗಡಿ ತಾಲ್ಲೂಕಿನ ವಿಚಾರದಲ್ಲಿ ಹೇಳಿದೆ. ಅಲ್ಲಿದ್ದ ಒಬ್ಬ ಮಹಿಳಾ ಟೀಚರನ್ನು ಬೆಂಗಳೂರಿಗೆ ವರ್ಗಮಾಡಿ ಅವರ ಶೀಲವನ್ನು ಅಪಹರಣ ಮಾಡಿರುವಬಗ್ಗೆ ಹೇಳಿದೆ.

ಶ್ರೀ ಎಸ್. ಆರ್. ಕಂಠಿ.—ಅಡಲ್ಟ್ ಎಜುಕೇಷನ್ನು ಸ್ಕೀಮು ಹಳೆಯ ಮೈಸೂರಿನ ಭಾಗದಲ್ಲಿ ಮಾತ್ರ ಅನ್ವಯಿಸುವಂತೆ ಇತ್ತು, ಆದರೆ ಈಗ ಇದನ್ನು ಈ ದೇಶದ ಎಲ್ಲಾ ಭಾಗಕ್ಕೂ ಅನ್ವಯಿಸುವ ಬಗ್ಗೆ ವಿಚಾರ ಮಾಡುವುದಕ್ಕಾಗಿ ಈ ತಿಂಗಳ ೨೩ನೇ ತಾರೀಖು ಒಂದು ಮೀಟಿಂಗನ್ನು ಕರೆದಿದ್ದೇವೆ. ಅದರೊಳಗೆ ಯಾವರೀತಿ ಇದನ್ನು entire Stateಗೆ ವಿಸ್ತರಿಸಬೇಕು ಎನ್ನುವ ಮುಖ್ಯ ಉದ್ದೇಶದಿಂದ ಈ ಕಮಿಟಿ ಕರೆದಿದ್ದೇವೆ. ಈ ಕಮಿಟಿಯಾದಮೇಲೆ ಇದಕ್ಕೆ ಒಂದು constitution ಎಂದರೆ ಒಂದು ಘಟಕವನ್ನು ಮಾಡಿ ಎಲ್ಲ ಕಡೆಯಲ್ಲೂ ಅದರಂತೆ ಏರ್ಪಾಡು ಮಾಡಬೇಕೆಂದು ವ್ಯವಸ್ಥೆಮಾಡಿದ್ದೇವೆ. ಸೋಷಿಯಲ್ ಎಜುಕೇಷನ್ನು ಬೋರ್ಡ್ ಎಂದು ಮಾಡಿರುವುದು ಬರಿ ಒಂದು ಅಡ್ವೈಜರಿ ಬೋರ್ಡು. ಅದು ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ಮಾಡಲಾಗಿದೆ. ಹೈಸ್ಕೂಲು ಎಜುಕೇಷನ್ನಿನಲ್ಲಿ, ಕಾಲೇಜು ಎಜುಕೇಷನ್ನಿನಲ್ಲಿ falling in standards ಬಗ್ಗೆ ಕೆಲವರು ಹೇಳಿದ್ದಾರೆ. falling in standards

ಆಗಿದೆ ಎನ್ನುವುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಇದು ಮೈಸೂರು ರಾಜ್ಯವೊಂದಕ್ಕೆ ವಿಚಿತ್ರವಾದುದೇನಲ್ಲ ಎಂದು ತಿಳಿದುಕೊಳ್ಳಬೇಕು. ಎಲ್ಲ ಕಡೆಯೂ ಇಂತಹ ಪರಿಸ್ಥಿತಿ ಉಂಟಾಗಿದೆ. ಇದರಬಗ್ಗೆ ಈಚೆಗೆ ದೆಹಲಿಯಲ್ಲಿ ನಡೆದ ಎಜುಕೇಷನ್ನು ಮಿನಿಸ್ಟರುಗಳ ಕಾನ್‌ಫರೆನ್ಸಿನಲ್ಲಿ ಈ falling in standardsಗೆ ಕಾರಣವೇನು ಎನ್ನುವ ವಿಚಾರವಾಗಿ ಎಲ್ಲರೂ ಬಹಳ ಗಹನವಾಗಿ ವಿಚಾರಮಾಡಿ, ಇದರಲ್ಲಿ Defects ಏನಿವೆ ಎನ್ನುವುದನ್ನೂ ಯೋಚನೆ ಮಾಡುತ್ತಿದ್ದಾರೆ. ಈರೀತಿ ಇಡೀ ರಾಜ್ಯದಲ್ಲಿ falling in standards ಇದೆ ಎಂದು ನೋಡಿದ್ದೇವೆ ಇದಾಗಬಾರದು. ಇದನ್ನು ಸರಿಯಾಗಿ diognise ಮಾಡಿ ಈ ರೀತಿ ಏಕೆ falling in standards ಆಗುತ್ತಿದೆ ಎನ್ನುವುದನ್ನೂ ನೋಡುತ್ತಿದ್ದಾರೆ. ನನಗೆ ತಿಳಿದಮಟ್ಟಿಗೂ ಈ ಸ್ಟಾಂಡರ್ಡು ಬಹಳ ಕಡಿಮೆಯಾಗುತ್ತಿದೆ.

ಇನ್ನು ಶ್ರೀಮಾನ್ ಗೋಪಾಲಗೌಡರು ಕಾಲೇಜು ಎಜುಕೇಷನ್ನಿನ ಬಗ್ಗೆ ಅನೇಕ ಸೂಚನೆಗಳನ್ನು ಕೊಟ್ಟಿದ್ದಾರೆ, ಅವು ಗಮನಾರ್ಹವಾದುದು. ಅವುಗಳನ್ನೆಲ್ಲಾ ನೋಡಿಸುತ್ತೇನೆ.

Linguistic Minorities ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಸುಂಠಣ್‌ಕರ್ ಅವರು ಹೇಳಿದರು. ಲಿಂಗ್ವಿಸ್ಟಿಕ್ ಮೈನಾರಿಟಿಗಾಗಿ ಆದಷ್ಟೂ ಸಹಾಯ ಮಾಡುತ್ತಿದ್ದೇವೆ. ಹಾಗಿದ್ದರೂ ಏನೇನೂಮಾಡಿಲ್ಲ. ಎಂದು ಹೇಳುವುದು ಸರಿಯಲ್ಲ ಎಂದು ನನಗನಿಸುತ್ತದೆ. ನಾವು ಮಾಡಿರುವಂತಹ ಕಾರ್ಯಕ್ರಮಗಳು ತೆಗೆದುಕೊಂಡಿರುವ ನೀತಿ ಮತ್ತು ಮುಂದೆ ಮಾಡುವಂತಹ ಕಾರ್ಯಕ್ರಮಗಳು ಇವೆಲ್ಲವನ್ನೂ ಕೇಂದ್ರದ ಲಿಂಗ್ವಿಸ್ಟಿಕ್ ಮೈನಾರಿಟಿ ಬೋರ್ಡಿನ ಮುಂದೆ ಇಟ್ಟಾಗ ಅವರು ಇದನ್ನು ನೋಡಿ.—

"It is satisfying tone"

ಎಂದು ಹೇಳಿದ್ದಾರೆ. ಆದುದರಿಂದ ಪುನಃ ಈಗ ಇಲ್ಲಿ ಈರೀತಿ ಹೇಳುವುದು ಸರಿ ಎಂದು ಕಾಣಿಸುವುದಿಲ್ಲ. ನಮ್ಮ ರಾಜ್ಯದಲ್ಲಿ ಇನ್ನೂ ಹೆಚ್ಚಿಗೆ ಮಾಡುವುದು ಇದೆ ಎಂದು ಹೇಳಿದರೆ ಅದರಂತೆ ಮಾಡಬಹುದು ಅದಕ್ಕೆ ನನ್ನ ಅಡ್ಡಿಯೇನಿಲ್ಲ. ಆದರೆ ನಾವು ಏನೂ ಮಾಡಿಲ್ಲ ಎಂದು ಅಲ್ಲಿನ ಮರಾಠಿ ಜನರು ಮತ್ತು ಮಹಾರಾಷ್ಟ್ರದ ಏಕೀಕರಣ ಸಮಿತಿಯ ಸದಸ್ಯರು ಮರಾಠಿ ಜನರಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ ಎನ್ನುವಂತಹ ಒಂದು impression create ಮಾಡುವುದು ಸರಿಯಲ್ಲ. ಆದುದರಿಂದ ನಾನು ಈ ಸಮಿತಿಯ ಸದಸ್ಯರನ್ನು ಕೇಳಿಕೊಳ್ಳುವುದು ನಮ್ಮಲ್ಲಿ ಏನು ಲೋಪದೋಷಗಳಿವೆ ಎನ್ನುವುದನ್ನು ಹೇಳಲಿ ಅದನ್ನು ಸರಿಪಡಿಸುವಂತೆ ಮಾಡುತ್ತೇವೆ. ಆದರೆ ಇದನ್ನೇ ಒಂದು ಅಸ್ತ್ರ ಮಾಡಿಕೊಂಡು ನಮ್ಮ ಸೂಚನೆಯನ್ನೇನೂ ಗಣನೆಗೆ ತೆಗೆದುಕೊಳ್ಳಲಿಲ್ಲ ಎಂದು ಹೇಳುವುದು ಸರಿಯಲ್ಲ ಎಂದು ನಾನು ಅವರಿಗೆ ಹೇಳುತ್ತೇನೆ.

Sri N. O. SAMAJI.—(Marathi)

Sri S. R. KANTHI.—(Replied in Marathi)

ಅವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಶ್ರೀಮಾನ್ ಸುನ್ನನಕರ ಅವರು ಬಂದು ನನ್ನನ್ನು ಭೇಟಿ ಮಾಡಿದ್ದಾರೆ. ಅವರಿಗೆ ನಾನು ಇಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ಅದೇನೆಂದರೆ ಅವರಿಗೆ ಏನಾದರೂ ಆಗಬೇಕಾಗಿದ್ದರೆ ಅದನ್ನು ನ್ಯಾಯವಾಗಿ ಮಾಡುವಂತಿದ್ದರೆ ಮಾಡುವುದಕ್ಕೆ ಸಿದ್ಧನಾಗಿದ್ದೇನೆ ಎಂದು. ಕೆಲವರು ಬಂದು ನನ್ನಲ್ಲಿ ಹೇಳಿದ್ದಾರೆ. ಎಲ್ಲಿಯಾದರೂ ಏನಾದರೂ ಅಂಥ ಲೋಪದೋಷಗಳಿದ್ದರೆ ಅದನ್ನು ತಿಳಿಸಿದರೆ ಅದಕ್ಕೆ ಮಾಡಬೇಕಾದುದನ್ನು ಮಾಡಬಹುದು ಎಂದು ಹೇಳಿದ್ದೇನೆ.

Sri N. O. SAMAJI.—(Marathi)

Sri S. R. KANTHI.—(Replied in Marathi)

[*Interruptions*].

ಶ್ರೀ ಎಸ್. ಆರ್. ಕಂಠಿ.—ಕೆಲವೊಂದು ಸಲಹೆಗಳನ್ನು ನನ್ನಲ್ಲಿಗೆ ಬಂದು ಶ್ರೀಮಾನ್ ಸುನ್ನನಕರ್ ಅವರೂ ಮತ್ತು ಶ್ರೀಮಾನ್ ವಿ. ಎಸ್. ಪಾಟೀಲ್‌ರವರೂ ಸಹ ಬಂದು ಕೆಲವು ವಿಚಾರಗಳನ್ನು ಹೇಳಿದ್ದಾರೆ, ಆದರೆ ಮಾನ್ಯ ಸದಸ್ಯರಾದ ಶ್ರೀಮಾನ್ ಸಾಮಜಿಯವರು ಒಂದುಸಲವಾದರೂ ಬಂದು ನನ್ನನ್ನು ಭೇಟಿ ಮಾಡಲಿಲ್ಲ.

[*Interruptions in Marathi*]

ಶ್ರೀ ಎಸ್. ಆರ್. ಕಂಠಿ.—ಶ್ರೀಮತಿ ರತ್ನಮ್ಮ ಮಾಧವರಾವ್ ಅವರು Triple Benefit Schemeನ್ನು ಕಾಲೇಜುಗಳಲ್ಲಿಯೂ ಏಕೆ ತರಬಾರದು ಎಂದು ಹೇಳಿದರು. ಅದು ಸಾಧ್ಯವಾಗದ ವಿಚಾರ ಎನ್ನುವ ಮಾತನ್ನು ಇಲ್ಲಿ ಸ್ಪಷ್ಟಪಡಿಸುತ್ತೇನೆ. ಕಾಲೇಜುಗಳಲ್ಲಿ Triple Benefit Schemeನ್ನು ತರುವುದು ಅಸಾಧ್ಯ ಏಕೆಂದರೆ, ಒಟ್ಟು ನಮ್ಮ ರಾಜ್ಯದಲ್ಲಿ ಈಗ ಎರಡೂ ಯೂನಿವರ್ಸಿಟಿಗಳ ಮಧ್ಯೆ 63 ಕಾಲೇಜುಗಳಿವೆ. ಇದರಲ್ಲಿ 16 ಕಾಲೇಜುಗಳು ಮಾತ್ರ ಸರಕಾರಿ ಕಾಲೇಜುಗಳು. ಆಮೇಲೆ 9 ಇಂಜನೀಯರಿಂಗು ಕಾಲೇಜುಗಳು 5 ಮೆಡಿಕಲ್ ಕಾಲೇಜುಗಳೂ ಇವೆ. ಈ ಪ್ರಕಾರ ಲೆಕ್ಕ ಹಾಕಿದರೆ 63+14=77 ಕಾಲೇಜುಗಳಿವೆ. ನಮ್ಮ ಸರಕಾರಿ ಕಾಲೇಜುಗಳು ಮಾತ್ರ 27 ಇವೆ. ಆದುದರಿಂದ ಈ ಕಾಲೇಜುಗಳು ನಮ್ಮಲ್ಲಿರುವುದು ಒಳ್ಳೆಯದಲ್ಲ. ಎಲ್ಲ Private Sectorsಗಳಲ್ಲಿಯೇ ಹೆಚ್ಚಾಗಿ ಅದರೆ, ಅಂತಹ ಕಾಲೇಜುಗಳಿಗೆ ಸಾಕಷ್ಟು ಸಹಾಯ ಸಲಕರಣೆಗಳನ್ನು ಕೊಡಬಹುದು, ಇದಕ್ಕಾಗಿ ಬೇಕಾಗುವ ಪೂರ್ತಿ ಸಹಾಯವನ್ನು ಸರ್ಕಾರದವರೇ ಮಾಡುತ್ತಾರೆಂದು ಇಟ್ಟುಕೊಳ್ಳಬಾರದು. ಇದನ್ನು Private Agenciesಗಳಿಗೆ ಅಥವಾ ಡಿಸ್ಟ್ರಿಕ್ಟಿನಲ್ಲಿರುವ ಒಂದು ಬೋರ್ಡಿಗೆ ಈ ಕೆಲಸವನ್ನು ವಹಿಸಿದರೆ ಇದರಿಂದ ಜನಕ್ಕೆ ಹೆಚ್ಚಿನ ಅನುಕೂಲವಾಗಬಹುದು ಎಂಬುದು ನನ್ನ ವೈಯಕ್ತಿಕಾಭಿಪ್ರಾಯ. ಇದರಲ್ಲಿ ರಾಜಕೀಯ ಬರುತ್ತೆಂದು ಕೆಲವರು ಹೇಳಿದರು. ನನ್ನ ವೈಯುಕ್ತಿಕವಾದ ಅಭಿಪ್ರಾಯವೂ ಹಾಗೇ ಇದೆ. ನಾನೂಕೂಡ ಹೇಳಿಕೆಗಳನ್ನು ಕೊಡುವ ಕಡೆಗಳಲ್ಲಿ ಇದು ನನ್ನ ವೈಯ್ಯುಕ್ತಿಕ ಅಭಿಪ್ರಾಯ ಎಂದು ಹೇಳಿದ್ದೇನೆ. ಆದರೆ ಸರಕಾರದ ಅಭಿಪ್ರಾಯ ಇದಲ್ಲ.

Sri C. J. MUCKANNAPPA (Sira).—Sir, I rise to a point of order. When the Minister is a Minister all the 24 hours, and when he makes a statement in that capacity, will it not create a sort of impression in the minds of the people that there are conflicting statements from the same person? I want to know when he is a Minister and when he is not a Minister, and when he is making a statement as Minister and when he is not making a statement as Minister.

Sri S. R. KANTHI.—My only reply to him is this: when I sleep, I am not a Minister.

Sri C. J. MUCKANNAPPA.—Sir, my point of order is not disposed of.

Mr. SPEAKER.—It is safely lodged. I will give my ruling. Let the Minister continue the reply and conclude.

Sri S. R. KANTHI.—I just submit that it is not fair. Whenever I have spoken, I have stated that it is my personal view; Government is not considering......

Sri S. M. KRISHNA (Maddur).—Sir, a point of order has been raised and the Chair has reserved the ruling. In connection with the point of order raised by my friend Sri Muckannappa, I would like to take one submission......

Sri S. R. KANTHI.—I am not yielding, Sir.

Sri C. J. MUCKANNAPPA.—Sir, I may bring to your notice that the Hon'ble Fiuance Minister said the other day that once a Minister, he is a Minister all the 24 hours. I want the Hon'ble Speaker to kindly give us protection and guide us along the correct tract. Let not this train be derailed. That is my appeal to the Hon'ble Speaker.

Sri S. R. KANTHI.—I am not yielding, Sir.

Sri C. J. MUCKANNAPPA.—Because you are our guardian Sir, you are there to protect our interests. I do not want the protection of the Education Minister here.

Mr. SPEAKER.—Is the Hon'ble Member raising a new point of order ?

Sri S. M. KRISHNA.—We need some enlightenment from the Education Minister.

Sri C. J. MUCKANNAPPA.—It is people's money we are spending.

Sri S. R. KANTHI.—Once you have said that you are going to give your ruling on the point raised, why this controversy ? I am not here to give protection to anybody. I know the Education Minister also is here under the control and guidance of the Speaker. If anything, I require protection from the Chair, Sir.

Sri S. SIVAPPA.—The Education Minister is always creating confusion by making statements. He has become a controversial figure.

Sri S. R. KANTHI.—Am I a controversial figure, Sir ? What does it matter ?

Mr. SPEAKER.—He is not.

Sri S. R. KANTHI.—It is not a matter which should be treated as lightly as possible. I have always said that I am saying so and so in my personal...capacity this is what the Government has decided and this is what the Government has not decided.

Mr. SPEAKER.—All right, in order to cut short, I will give my ruling. What the Minister for Education said is right and there is no point of order.

ಶ್ರೀ ಎಸ್. ಆರ್. ಕಂಠಿ.—ಆಮೇಲೆ ಹೆಣ್ಣುಮಕ್ಕಳಿಗೆ ಮ್ಯಾಟ್ರಿಕ್ಯುಲೇಷನ್ ಪಾಸಾಗದೆ ಎಂಪ್ಲಾಯಮೆಂಟ ಕೊಡಬಾರದು ಟೀಚರನ್ನಾಗಿ ಮಾಡಬಾರದು ಎಂದು ಶ್ರೀಮಾನ್ ಅಣ್ಣಾರಾವ್ ಗಣಮುಖಿಯವರು ಹೇಳಿದರು. ಇದನ್ನು ಕೂಲಂಕಷವಾಗಿ ಸರಕಾರ ವಿಚಾರ ಮಾಡಿದೆ ಈ ರೀತಿ ಮಾಡಿದ್ದೇ ಆದರೆ ಕೆಲವು ಜಿಲ್ಲೆಗಳಲ್ಲಿ ಲೇಡಿ ಟೀಚರ್ಸ್ ಸಿಕ್ಕುವದಿಲ್ಲ. ಧಾರವಾಡದ ಹೆಣ್ಣುಮಕ್ಕಳ ಶಾಲೆಗಾಗಿ ಕಾರವಾರದಿಂದ ಅರ್ಜಿಗಳು ಬಂದಿದ್ದವು. ಧಾರವಾಡದಿಂದ ಬರಲಿಲ್ಲ. ಈ ರೀತಿ ಮಾಡಿದರೆ ಅವ್ಯವಸ್ಥೆಯಾಗುತ್ತದೆ. ಆ ಕಾಲ ಇನ್ನೂ ಬಂದಿಲ್ಲ. ಪ್ರೈಮರಿ ಸ್ಕೂಲ್ ಟೀಚರ್ ಆಗುವದಕ್ಕೆ ಹೆಣ್ಣುಮಕ್ಕಳು L. S. Certificate ಪಡೆದಿದ್ದರೆ ಸಾಕು ಎಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಬಿ. ಚನ್ನಬೈರೇಗೌಡ (ಹೊಸಕೋಟೆ).—ಸ್ವಾಮಿ, ಡಿ.ಪಿ.ಐ. ಆಫೀಸಿನಲ್ಲಿ ಅವಮಾನಕರವಾದ ಹಗರಣ ನಡೆದ ಬಗ್ಗೆ ನಾನು ವಿವರ ಕೇಳಿದ್ದೆ, ಅದನ್ನು ಹೇಳಲಿಲ್ಲ.

ಶ್ರೀ ಎಸ್. ಆರ್. ಕಂಠಿ.—ಅದು ನನಗೆ ಗೊತ್ತಿಲ್ಲ.

Mr. SPEAKER.—I want to make a general request. Any clarification can come only after the reply is over. No clarification can come in at this stage. I will not permit it. The Hon'ble Minister is entitled to give his reply undisturbed.

ಶ್ರೀ ಎಸ್. ಆರ್. ಕಂಠಿ.—ಬೆಂಗಳೂರು ಯೂನಿವರ್ಸಿಟಿ ವಿಚಾರ ಹೇಳಿದ್ದು ಇದು ದುರ್ದೈವದ ಸಂಗತಿಯಾಗಿದೆ. 19 ಕೋಟಿ ರೂಪಾಯಿ ವಿದ್ಯಾ ಇಲಾಖೆಗೆ ಖರ್ಚು ಮಾಡುವಾಗ್ಗೆ ದೊಡ್ಡ ದೊಡ್ಡ ಕೆಲಸಗಳನ್ನು ಬಿಟ್ಟು ಕೊಟ್ಟು ಸಣ್ಣ ಸಣ್ಣ ಮಾತುಗಳಿಗೆ ಹೆಚ್ಚು ಬೆಲೆ ಕೊಡುತ್ತಿದ್ದಾರೆ. ಇದನ್ನು ಏಕೆ ವಿರೋಧಿಸುತ್ತಾರೋ ತಿಳಿಯದು. ಎರಡು ಕೋಟಿ non-recurring expenditure ಮತ್ತು 300 ಎಕರೆ ಜಾಗ ಬೇಕಾಗುತ್ತದೆಂದು ಹೇಳಿದರು. ಬೆಂಗಳೂರು ಯೂನಿವರ್ಸಿಟಿಯು ಫೆಡರಲ್ ಯೂನಿವರ್ಸಿಟಿಯಾಗುತ್ತದೆ. ಬೆಂಗಳೂರು ನಗರದಲ್ಲಿ 22 ಕಾಲೇಜುಗಳಿವೆ. ಈಗ ಮಾಡುತ್ತಿರುವ ಖರ್ಚಿನ ಲೆಕ್ಕ ಹಾಕಿದರೆ ಎರಡು ಕೋಟಿಯಾಗುತ್ತದೆ. ಯು.ಜಿ.ಸಿ. ಅವರ ಸಹಾಯ ಬೇಕು. ಪ್ರತಿಯೊಬ್ಬನಿಗೆ 500 ರೂಪಾಯಿ ಖರ್ಚು ಬರುತ್ತದೆ. ಈಗಿನ ಲೆಕ್ಕದ ಪ್ರಕಾರ 425 ಕ್ಕಿಂತ ಕಡಿಮೆಯಾಗುವದಿಲ್ಲ. ಕೇವಲ 75 ರೂಪಾಯಿ ಹೆಚ್ಚು ವೆಚ್ಚವಾಗುತ್ತದೆ. ಪ್ರತಿದಿವಸ

(ಶ್ರೀ ಎಸ್. ಆರ್. ಕಂಠಿ)

ಬೆಂಗಳೂರು ನಗರ ಬೆಳೆಯುತ್ತಾ ಇದೆ. ಯೂನಿವರ್ಸಿಟಿ ಮಾಡಿದಾಗ್ಗೆ 500 ರೂಪಾಯಿ ಖರ್ಚು ಮಾಡಬೇಕಾಗುತ್ತದೆಂದು ಹೇಳಬಹುದು. 300 ಎಕರೆ ಜಮೀನು ಬೇಕಾದರೆ, ಇದ್ದ ಜಾಗದಲ್ಲಿ ಮಾಡಿಕೊಳ್ಳಲು ಬರುತ್ತದೆ. ಫೆಡರಲ್ ಯೂನಿವರ್ಸಿಟಿ ಪ್ರಶ್ನೆ ಮಾಡಬಹುದಾಗಿತ್ತು. ನಗರದಲ್ಲಿ ನಾನಾ ಕಡೆ ಕಾಲೇಜುಗಳಿವೆ. ಸೆಂಟ್ರಲ್ ಕಾಲೇಜನ್ನು ನ್ಯೂಕ್ಲಸ್‌ಆಗಿ ಇಟ್ಟುಕೊಂಡು ಮಾಡ ಬಹುದು. ಇದಕ್ಕಾಗಿ ಒಂದು ಕಮಿಟಿ ನೇಮಿಸಿದೆ. ಈ ಕಮಿಟಿಯು ವರದಿ ಬರುತ್ತದೆ. ಈ ಯೂನಿ ವರ್ಸಿಟಿ ರಚನೆಯಿಂದ ಹೆಚ್ಚು ಖರ್ಚು ಆಗುವದಿಲ್ಲ. ಈ ಕಮಿಟಿಯು ಇದಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನು ಪರಿಶೀಲಿಸಿ ವರದಿ ಬಂದಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಆ ಮೇಲೆ 10ನೇ ಕ್ಲಾಸ್ ಬಗ್ಗೆ ಹೇಳುತ್ತಾ ಗ್ರ್ಯಾಂಟ್ ಜೂರಿಸ್‌ಡಿಕ್ಷನನ್ನು ಎಜುಕೇಷನ್ನಿಗೆ ಹಾಕ ಬಾರದೆಂದು ಸಲಹೆ ಮಾಡಿದರು. ಇದರಲ್ಲಿ ನಮಗೆ official information ಇಲ್ಲ. ಅವರು ಹೇಳಿದ ಮಾತನ್ನು ನಾನು ಗಮನದಲ್ಲಿ ಇಟ್ಟುಕೊಂಡಿರುತ್ತೇನೆ.

10–30 A. M.

11ನೇ ಕ್ಲಾಸ್ ಬಗ್ಗೆ ಮಾತನಾಡುತ್ತಾ ಸಿಲಬಸ್ ಮಾಡಿಲ್ಲ ಅಂತ ಹೇಳಿದ್ದಾರೆ. ಅವರಿಗೆ ಎಲ್ಲಾ ಗೊತ್ತು; ನಾನು ಒಂದು ವರ್ಷ ವಿದ್ಯಾಮಂತ್ರಿಯಾಗಿದ್ದರೆ, ಅವರು ನಾಲ್ಕು ವರ್ಷ ಆಗಿ ದ್ದರು; ಆದ್ದರಿಂದ ಎಲ್ಲಿ ಬಾಟಲ್‌ನೆಕ್ ಇದೆ ಎಂದು ಅರಿತಿದ್ದಾರೆ. ಎರಡೂ ಯೂನಿವರ್ಸಿಟಿಗಳಿಗೆ P. U.C. ಯಲ್ಲಿ ಒಂದೇ ಸಿಲಬಸ್ ಇರಲಿ ಅನ್ನುವ ದೃಷ್ಟಿಯಿಂದ, ಇಷ್ಟುದಿವಸ ಈ ಕಾರ್ಯ ಮುಂದೆ ಹೋಗಿದೆ. ಸುದೈವದಿಂದ ಮೈಸೂರು ಯೂನಿವರ್ಸಿಟಿಯವರು ಎರಡು ಯೂನಿವರ್ಸಿಟಿ ಗಳ P. U. C. ಸಿಲಬಸ್ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಒಂದೇ ಸಿಲಬಸ್ ಮಾಡು ವುದಕ್ಕೆ ಶಕ್ಯವಾಗುತ್ತದೆ ಎಂದು ತಿಳಿಯಪಡಿಸುತ್ತೇನೆ.

ಆಂಗ್ಲೋ ಇಂಡಿಯನ್ ಸ್ಕೂಲುಗಳ ಬಗ್ಗೆ ಶ್ರೀ ಡಿ'ಮೆಲ್ಲೊರವರು 2½ಗಂಟೆ ಮಾತನಾಡಿ ದ್ದಾರೆ. ಅವರು ಪ್ರಸ್ತಾಪಿಸಿದ್ದರಲ್ಲಿ ಕೆಲವನ್ನು ಮಾಡುವುದಕ್ಕೆ ಸಾಧ್ಯವಿದೆ. ಕೆಲವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. Constitutionಗೆ ವಿರುದ್ಧವಾಗಿ ಕೆಲವನ್ನು ಮಾಡುವುದಕ್ಕೆ ಸಾಧ್ಯ ವಿಲ್ಲ. ಅವರು ತಿಳಿಸಿದ್ದರಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು ನಾನು ಯಾವಾಗಲೂ ಬಾತ್ ರೂಮಿನಲ್ಲಿರುತ್ತೇನೆ ಅಂತ ಮಾತ ನಾಡುವಾಗ ಹೇಳಿದರು. ಪ್ರಾಮಾಣಿಕವಾಗಿ ಹೇಳುತ್ತೇನೆ: ಜುಲೈ ತಿಂಗಳಿನಿಂದ ನನಗೂ ಆ ಮಾನ್ಯ ಸದಸ್ಯರಿಗೂ ಭೇಟಿ ಇಲ್ಲ. ಆದ್ದರಿಂದ ಜುಲೈನಿಂದಲೂ ಈತನಕ ಬಾತ್‌ರೂಮಿನಲ್ಲಿ ಇರು ತ್ತೇನೆಂದು ಹೇಗೆ ಹೇಳಿದರೋ ಗೊತ್ತಿಲ್ಲ.

ಶ್ರೀ ಎಸ್. ಶಿವಪ್ಪ:—ಜುಲೈಗಿಂತ ಮುಂಚೆ ?

ಶ್ರೀ ಎಸ್. ಆರ್. ಕಂಠಿ.—ಜುಲೈಗಿಂತ ಹಿಂದೆ ನನ್ನ ಹತ್ತಿರ ಬರುತ್ತಾ ಇದ್ದರು, ಆ ಮೇಲೆ ಬರುತ್ತಿಲ್ಲ. ನನಗೂ, ನಮ್ಮ ಮನೆಯವರಿಗೂ ಅವರು ಬಹಳ ಬೇಕಾದವರು; ಈಗ ಸ್ವಲ್ಪ ವ್ಯಾಧಿ ಬಂದಿದೆ. ನನ್ನ ಮೇಲಿನ ಸಿಟ್ಟಿನಿಂದ ನಮ್ಮ ಮನೆಗೆ ಬರುವುದನ್ನೇ ನಿಲ್ಲಿಸಿದ್ದಾರೆ. ನನ್ನ ಹೆಂಡತಿಗೆ ಕೇವಲ ಬೇಕಾದವರಾಗಿದ್ದರೂ ಕೂಡ.

ಈ ಡೆಫ್ ಅಂಡ್ ಡಂಬ್ ಸ್ಕೂಲ್ ಬಗ್ಗೆ ಹೇಳುತ್ತಾ ಯಾರೋ ಒಬ್ಬ ಉತ್ಕೃಷ್ಟ ತರಬೇತಿ ಹೊಂದಿದವರನ್ನು ಇನ್ನು ಎಲ್ಲಿಗೋ ಬೇರೆಕಡೆಗೆ ಹಾಕಿದ್ದಾರೆಂದು ಹೇಳಿದರು. ಈ ರಾಜ್ಯ ಒಂದು ಗೂಡಿ ವಿಶಾಲವಾಗಿ, ಮೈಸೂರು ಆಗುವುದಕ್ಕೆ ಮುಂಚೆ ಅದು ನಡೆದು ಹೋಗಿದೆ: ಅದು ನಡೆ ದಾಗ ನಾನು ಇಲ್ಲಿಗೆ ಬಂದೇ ಇರಲಿಲ್ಲ. ಅದಕ್ಕೆ ನನ್ನ ಬೈಯುವುದಕ್ಕೆ ಹತ್ತಿದ್ದಾರೆ, ನಾನು ಏನು ಹೇಳುವುದು. ಸ್ವಲ್ಪ ಯೋಚನೆ ಮಾಡಿ.

ಶ್ರೀ ವಿ. ಎಂ. ದೇವ್.—ನೀವು ನಾವು ಹೇಳಿದ ಒಳ್ಳೆಯ ಪಾಯಿಂಟುಗಳನ್ನು ಸೆಲೆಕ್ಟ್ ಮಾಡಿ, answer ಮಾಡುವುದು ಬಿಟ್ಟು ಯಾವಯಾವದೋ ಕ್ಷುಲ್ಲಕ ಅಂಶಗಳನ್ನು ಜವಾಬಿಗೆ ಆರಿಸಿದ್ದೀರಿ. ಅದಕ್ಕೇ ಇಷ್ಟು ಸಿಟ್ಟಿನ ವಾತಾವರಣ, ಎಲ್ಲಿಗೋ ದುಡ್ಡು ಕಲೆಕ್ಟ್‌ಮಾಡಿದಿರಿ ಅಂತ ಆರೋಪಣೆ ಮಾಡಿ ದ್ದನ್ನು ಬಿಟ್ಟುಬಿಟ್ಟಿರಿ.

ಶ್ರೀ ಎಸ್. ಆರ್. ಕಂಠಿ.—ನಾನು ಒಳ್ಳೆಯ ಪಾಯಿಂಟುಗಳು ಹೇಳಿದಾಗ ದೇವ್‌ರವರು ಮಾತನಾಡುವುದಿಲ್ಲ. ಮಾನ್ಯ ಸದಸ್ಯರಿಗೆ ವಾಸ್ತವಾಂಶ ಹೇಳಿ ನಿಜಸ್ಥಿತಿ ಕೊಟ್ಟರೆ ಹಣಾಹಣಿಯಿಂದ ಬಡಿದುಕೊಳ್ಳುತ್ತಾರೆ.

ಡಿ. ಪಿ. ಐ. ವಿರುದ್ಧ ವಸ್ತುಸ್ಥಿತಿಗೆ ದೂರವಾದ ಅನೇಕ ಅಹಿತಕರ ಸಂಗತಿಗಳನ್ನು ಹೇಳಿದರು; ಅವು ಸಣ್ಣ ಸಣ್ಣ ಮಾತುಗಳು ; ಅವುಗಳನ್ನೆಲ್ಲಾ ನಾನು ನೋಡಿದ್ದೇನೆ. ಒಂದು ಮಾತ್ರ ನಾನು ಈ ಮಾನ್ಯ ಸದಸ್ಯರಲ್ಲಿ ಬೇಡಿಕೊಳ್ಳುತ್ತಾ ಇದ್ದೇನೆ. ಈ ಮನೆಯಲ್ಲಾಗಲಿ, ಟ್ರೆಷರಿ ಬೆಂಚಿನಲ್ಲಾಗಲಿ ಯಾರೂ ಅವರಿಗೆ ವಿರೋಧವಾದಂಥವರು ಇಲ್ಲ ; ಸುಮ್ಮನೆ ಅವರಿಗೆ ವಿರೋಧಿಗಳು ಇದ್ದಾರೆ ಎಂದು ತಿಳಿದುಕೊಂಡಿದ್ದರೆ ಅದು ತಪ್ಪು. ಯಾವ ಕೆಲಸಗಳನ್ನು ಮಾಡಬೇಕಾದರೂ, ನಿಯಮ ನೀತಿ, rules, regulations ಇರುತ್ತವೆ, ಆ ಪ್ರಕಾರ ಮಾಡಬೇಕಾಗುತ್ತದೆ. ಅದನ್ನು ಗ್ರಹಿಸದೆ ಧತ್ ಅಂದರೆ ಏನು ಮಾಡುವುದು. ನಾನು ಚಾಡಿಹೇಳುವ ಅಭ್ಯಾಸ ಇಲ್ಲವನು ಎಂದು ಅವರು ಹೇಳಿದರು.

ಶ್ರೀ ಎಸ್. ಶಿವಪ್ಪ.—ಇದು ಹೊಸದು. ನಮಗೆ ಗೊತ್ತಿರಲಿಲ್ಲ.

ಶ್ರೀ ಎಸ್. ಆರ್. ಕಂಠಿ.—ನನಗೆ 55 ವರ್ಷವಾಯಿತು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದಕ್ಕೆ ಏನು ಸಂಬಂಧ ?

Mr. SPEAKER.—When the Hon'ble Minister is attacked personally, he is entitled to reply to that.

Sri C. J. MUCKANNAPPA.—We did not dispute the fact that he was 55 years.

ಶ್ರೀ ಎಸ್. ಆರ್. ಕಂಠಿ.—ಇದು ಏನು, running commentary, All-India Radio! 55 ವರ್ಷ ನನಗೆ ಆಗಿದೆ. 30ವರ್ಷಕಾಲ ರಾಜಕೀಯದಲ್ಲಿದ್ದೇನೆ. ಹಳೇಮೈಸೂರಿನ ಜನಕ್ಕೆ ಗೊತ್ತಿಲ್ಲ ; ಉತ್ತರ ಕರ್ಣಾಟಕದಲ್ಲಿ ಇಂಥ ಕೀಳುಮನಸ್ಸಿನಿಂದ ನನ್ನನ್ನು ಯಾರೂ ತಿಳಿದುಕೊಂಡಿಲ್ಲ. ಚಾಡಿಹೇಳುವುದು ನಾನೇ, ಮಾನ್ಯ ಸದಸ್ಯರೇ ಅನ್ನುವುದನ್ನು ರಿಕಾರ್ಡಿನೊಳಗೆ ತಮಗೇ ತೋರಿಸುತ್ತೇನೆ: ಸ್ವತಃ ಅಕ್ಷರಶಃ ಚಾಡಿಇದೆ. ಆದರೆ ಮಾನ್ಯ ಸದಸ್ಯರು, ಹೆಣ್ಣುಮಕ್ಕಳು, ನನ್ನ ದುರ್ದೈವ, 55ನೇ ವರ್ಷದಲ್ಲಿ ನನಗೆ ವಿರೋಧವಾಗಿದ್ದಾರೆ. ನಾನು ಅವರಿಗೆ ವಿರೋಧಿಯಾಗಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—55ನೇ ವರ್ಷದಲ್ಲಿ ವಿರೋಧಿಯಾಗಿರುವುದಕ್ಕೆ ಕಾರಣ ಏನು ? (ನಗು).

ಶ್ರೀ ಎಸ್. ಆರ್. ಕಂಠಿ.—ತಾವೇಹೇಳಿ.

Mr. SPEAKER.— I think the Hon'ble Member says it as a joke.

Sri C. J. MUCKANNAPPA.—It is not a joke, Sir. I seriously meant it. ಇವರ 55ನೇ ವರ್ಷದಲ್ಲಿ ಶ್ರೀಮತಿ ನಾಗರತ್ನಮ್ಮನವರು ಇವರನ್ನು ದ್ವೇಷ ಮಾಡುವುದಕ್ಕೆ ಕಾರಣವೇನು ? (ನಗು).

ಶ್ರೀ ಪಿ. ಎಂ. ದೇವ್.—30 ವರ್ಷ ರಾಜಕೀಯದಲ್ಲಿದ್ದು ಪ್ರಯೋಜನವೇನಾಯಿತು ?

ಶ್ರೀ ಎಸ್. ಆರ್. ಕಂಠಿ.—ಯಾವುದೋ ಒಂದು ವಿಷಯ, ಅವರಿಗೆ ಸಂಬಂಧಪಟ್ಟಂಥ ಹೈಸ್ಕೂಲ್ ವಿಷಯವನ್ನು ನಾನು ತಲೆಗೆ ಕಟ್ಟಿಕೊಂಡಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ವಹಿಸಿಬಿಟ್ಟು ಅವರಿಗೆ "ಆರ್ಡರ್‌ಪಾಸುಮಾಡಿ, ನಿಮ್ಮ ಗವರ್ನ್‌ಮೆಂಟಿನಲ್ಲಿರುವವರೆಗೆ ಶಿರಸಾವಹಿಸಿ ಮಾಡುತ್ತೇವೆ" ಎಂದು ಹೇಳಿದ್ದೇನೆ. ಅವರು ತಿಳಿದುಕೊಂಡಿರುವುದು ತಪ್ಪು. ಯಾವುದೋ ಒಂದು ವಿಷಯಕ್ಕೆ ಹೈಕೋರ್ಟಿಗೆ ಕಾಲಿಡುವ ಪ್ರಸಂಗ ಬರಬಾರದೆಂಬ ದೃಷ್ಟಿಯಿಂದ ಮಾಡುತ್ತಾ ಇದ್ದೇನೆ. ಅವರ ವೈರಿಗಳು ಹೊರಗಡೆ ಇದ್ದಾರೆ. ಅವರನ್ನು ಬಿಟ್ಟು ನನಗೆ ಬೈಯುತ್ತಾ ಇದ್ದಾರೆ. ಯಾರೋ ಒಬ್ಬ ಸ್ವಾಮಿಗಳ ವಿಷಯಕ್ಕೆ ಹೇಳುತ್ತಾ ಇದ್ದಾರೆ, ಹೇಳಿಕೊಳ್ಳಲಿ, ಯಾರೋ ಒಬ್ಬ ಸ್ವಾಮಿಗಳು ಅವರ ಮನಸ್ಸಿನಲ್ಲಿರುತ್ತಾರೆ. ನಾನು ಆ ಸ್ವಾಮಿಗಳು ನಡೆಸುವಂಥಾ ಸಂಸ್ಥೆಗೆ ದುಡ್ಡುಕೊಟ್ಟಿದ್ದೇನಂತೆ. ಅದನ್ನು 1961ನೇ ಸಾಲಿನಲ್ಲಿಯೇ ಕೊಟ್ಟದ್ದಾಗಿದೆ, ಆಗ ನಾನು ಆ "Chair"ನಲ್ಲಿ (Speaker's) ಇದ್ದೆ. 1,75,000 ರೂಪಾಯಿನ್ನು 1961ನೇ ಸಾಲಿನಲ್ಲಿ ಕೊಟ್ಟಿದ್ದಾಗಿದೆ; ನಾನು ಕೊಡಲಿಲ್ಲ: ಆದರೂ ಕೂಡ ನನ್ನನ್ನು ಬೈಯುತ್ತಾರೆ. ಇದು ತೋಳ ಕುರಿಮರಿ ಕಥೆಯಾದಂತೆ ಆಗಿದೆ. "ನಾನು ಕೆಳಗಡೆ ನೀರು ಕುಡಿದೆ" ಎಂದು ಕುರಿ ಅಂದರೂನೂ, ತೋಳ "ನಿಮ್ಮ ಅಪ್ಪ ಕುಡಿದಿದ್ದಿರಬಹುದು" ಎಂದು ಕುರಿಮರಿಯನ್ನು ನುಂಗಿಬಿಟ್ಟಹಾಗೆ. ಶ್ರೀಮತಿ ನಾಗರತ್ನಮ್ಮನವರು ಅವರತಪ್ಪು ತಿಳಿದುಕೊಂಡು ತಮ್ಮ ಆತ್ಮ ಶೋಧನೆ ಮಾಡಿಕೊಳ್ಳಲಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ನಾನು ಆತ್ಮಶೋಧನೆ ಮಾಡಿಕೊಂಡಿದ್ದೇನೆ.

ಶ್ರೀ ಎಸ್. ಆರ್. ಕಂಠಿ.—ಮಾಡಿಕೊಂಡಿಲ್ಲ. ಕಡೆಯದಾಗಿ ನಿನ್ನೆ ಹೇಳಿದೆ ಈ ಡಿಪಾರ್ಟ್‌ಮೆಂಟಿನಲ್ಲಿ ನಾವು ಮುಂದಿನ ವರ್ಷ ಒಂದು ಸಾವಿರ ಶಿಷ್ಯರನ್ನು ನೇಮಿಸುವುದಕ್ಕೆ ಆಗುವುದಿಲ್ಲ ಪ್ರೈಮರಿ ಎಜ್ಯುಕೇಷನನ್ನು Strengthen ಮಾಡಬೇಕಾಗುತ್ತದೆ ಎಂದು. ಅದಕ್ಕೆ ಅನೇಕ ರೀತಿಯಿಂದ ಎಲ್ಲೆಲ್ಲಿ ಮಿತವ್ಯಯ ಮಾಡುವುದಕ್ಕೆ ಸಾಧ್ಯವಿದೆ ಅದನ್ನು ಮಾಡುತ್ತಾ ಇದ್ದೇವೆ. ಇದಕ್ಕೆ ಹೆಚ್ಚಿನ ಶಿಕ್ಷಕರನ್ನು ಹಾಕಲು ಪ್ರಯತ್ನ ಮಾಡಬೇಕೆಂದು ಮಾಡಿದ್ದೇವೆ. ಒಂದು ಮಾತು ಎಂದರೆ ಈಗಿನ ಕಾಲದಲ್ಲಿ ನಾವು ನಮ್ಮ ಶಿಕ್ಷಣ ಖಾತೆಯಲ್ಲಿ ಒಂದು ಯೂನಿಫಾರ್ಮಿಟಿ ಮಾಡಿದ ವಿನಃ ಯಾವುದೂ ಆಗುವುದಿಲ್ಲ. ಎಕಾನಮಿ, ಯೂನಿಫಾರ್ಮಿಟಿ ಶಿಕ್ಷಣಖಾತೆಯಲ್ಲಿ ಮಾಡುವುದು ಅವಶ್ಯಕವಾಗಿದೆ ಮಾಡುತ್ತಾ ಇದ್ದೇವೆ. ಯಾರಕಡೆ ಯಾವಖಾತೆ ಇರುತ್ತದೆ ಅವರ ಕಡೆಯಿಂದ ಆ ಕೆಲಸಮಾಡಿಸಿಕೊಳ್ಳುತ್ತೇವೆ. ಯಾವರೀತಿಯಿಂದ ಕೆಲಸಮಾಡಿಸಿಕೊಳ್ಳಬೇಕೆಂಬುದು ನಮಗೆ ಗೊತ್ತಿದೆ. ಮಾನ್ಯ ಸದಸ್ಯರಿಗೆ ಹೇಳುತ್ತಾ ಇದ್ದೇನೆ, ನೀವು ಅಲ್ಲಿಗೆ ಹೋಗುತ್ತೀರಿ, ಇಲ್ಲದೆ ಬರುತ್ತೀರಿ ಎಂದು ಭೂತ, ದೆವ್ವ ಅಂತ ಕಲ್ಪನೆ ಮಾಡುವುದು ಸರಿಯಲ್ಲ. 4ನೇ ಪಂಚವಾರ್ಷಿಕ ಯೋಜನೆಯನ್ನು ಮಾಡಬೇಕಾಗುತ್ತದೆ. ಇದೇ ತಿಂಗಳ ಕೊನೇ ವಾರದಲ್ಲಿ ದೆಹಲಿಯಿಂದ ಪ್ರವೀಣರು ಬರುತ್ತಾರೆ. ಅವರ ಜೊತೆಯಲ್ಲಿ ಮಾತನಾಡಬೇಕಾಗಿದೆ. ಮಾತನಾಡಿ ಅನೇಕ ವಿಷಯಗಳನ್ನು ಮಾನ್ಯ ಸದಸ್ಯರ ಮುಂದೆ ಜನರ ಮುಂದೆ ಇಡಬೇಕಾಗಿದೆ. ನಮ್ಮ ರಿಸೋರ್ಸೆಸ್ ಎಷ್ಟು ಯಾವರೀತಿ ಡೆವಲಪ್ ಮಾಡಿಕೊಳ್ಳಬೇಕು, ಕೇಂದ್ರ ಸರ್ಕಾರದಿಂದ ಒದಗುವ ಸಹಾಯ ಎಷ್ಟು, ಜನರಲ್ ಪ್ಯಾಟ್ರನ್ ಹೇಗಿರಬೇಕು ಎಂದು ಹೇಳಿ ಅದನ್ನು ಸಹ ಪರಿಶೀಲನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಇವತ್ತು 4ನೇ ಪಂಚವಾರ್ಷಿಕ ಯೋಜನೆ ಅಥವಾ 3ನೇ ಪಂಚವಾರ್ಷಿಕ ಯೋಜನೆ ಇಷ್ಟು ಸುವ್ಯವಸ್ಥಿತವಾಗಿದೆ. 15 ವರ್ಷಕಾಲದ ಒಂದು ರೂಪುರೇಖೆ ಮಾಡುವಂಥ ವಿಚಾರವನ್ನು ಕೇಂದ್ರದಿಂದ ಬರುವಂಥ ಸದಸ್ಯರು ಹೇಳುವವರಿದ್ದಾರೆ. ಅದನ್ನು ಜನರ ಮುಂದೆ ಇಡುತ್ತೇವೆ, ಒಪ್ಪು ತಪ್ಪು ಹೇಳಬೇಕು. ವೈಯಕ್ತಿಕವಾಗಿ ಎಲ್ಲಾದರೂ ಹೇಳಿದಂಥಾ ನಾಲ್ಕು ಮಾತುಗಳು ಕಟುವಾಗಿ ಇರಬಹುದು ಅಥವಾ ಅವುಗಳ ವಿಷಯಕ್ಕೆ ಏನೊಂದು ರಾಜಕೀಯ ರೂಪ ಕೊಡಬಹುದೋ ಅದನ್ನು ಕೊಟ್ಟಿದ್ದೇನೆ. ಕೆಲವು ವಿಷಯಗಳ ಬಗ್ಗೆ ನಾನು ಹೇಳಿರುವುದೆಲ್ಲಾ ನಿಜ ಎಂದು ನಂಬಿದ್ದೇನೆ ಅಷ್ಟು ವಿಶ್ವಾಸ ನನಗೆ ಇದೆ. ಮತ್ತು ಮುಂದಿನ ಸರ್ಕಾರ ಅವನ್ನು ಮಾಡುತ್ತದೆ ಎಂದು ನನಗೆ ನಿಜವಾಗಿಯೂ ವಿಶ್ವಾಸ ಇದೆ.

Demand No. 17.—EDUCATION.

28. *Education.*

Mr. SPEAKER.—The question is :

" That a sum not exceeding Rs. 18,79,15,000 be granted to the Government to defray the charges which will come in course of payment during the financial year for the period ending 31st day of March 1964, in respect of 'Education'."

The motion was adopted.

Demand No. 18.

29. *Medical.*

Sri K. NAGAPPA ALVA (Minister for Health).—I beg to move :

" That a sum not exceeding Rs. 3,53,27,000 be granted to the Government to defray the charges which will come in course of payment during the financial year for the period ending 31st day of March 1964, in respect of 'Medical'.

Mr. SPEAKER.—Motion moved :

"That a sum not exceeding Rs. 3,53,27,000 be granted to the Government to defray the charges which will come in course of payment during the financial year for the period ending 31st day of March, 1964, in respect of 'Medical'."

Sri K. NAGAPPA ALVA.—I beg to move :

"That a sum not exceeding Rs. 3,34,04,000 be granted to the Government to defray the charges which will come in course of payment during the financial year for the period ending 31st day of March 1964, in respect of 'Public Health'."

Mr. SPEAKER.—Motion moved :

"That a sum not exceeding Rs. 3,34,04,000 be granted to the Government to defray the charges which will come in course of payment during the financial year for the period ending 31st day of March 1964, in respect of 'Public Health'."

Mr. SPEAKER.—I think it is better to fix a time limit. Shall we sit till 12-30 P.M. or extend the period ?

Sri S. NIJALINGAPPA (Chief Minister).—We can sit till one o'clock.

Sri C. J. MUCKANNAPPA.—Let us sit till 1-30 P.M. Time given is too short.

Mr. SPEAKER.—I will consider it. Meanwhile, Dr. Gowdaiah will open the debate and will conclude within 20 minutes.

ಶ್ರೀ ಕೆ. ಎಸ್. ಗೌಡಯ್ಯ (ಕೃಷ್ಣರಾಜನಗರ).—ಮಾನ್ಯ ಸಭಾಪತಿಗಳೇ, 1963-64ನೇ ಸಾಲಿನ 18 ಮತ್ತು 19ನೇ ಬೇಡಿಕೆಗಳ ಮೇಲೆ ನಾನು ಚರ್ಚೆಯನ್ನು ಪ್ರಾರಂಭ ಮಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಪ್ರಪ್ರಥಮವಾಗಿ ತಮಗೆ ವಂದಿಸುತ್ತೇನೆ.

[MR. CHAIRMAN (SRI GHOUSE MOHIUDDIN) in the Chair]

ಆರೋಗ್ಯ ಎಂಬುದು ಬಹಳ ಮುಖ್ಯವಾದದ್ದೆಂಬುದು ಎಲ್ಲರಿಗೂ ತಿಳಿದಂಥ ವಿಷಯ. ಜನರ ಆರೋಗ್ಯ ರಾಷ್ಟ್ರದ ಪ್ರಗತಿಗೆ ತಳಹದಿ ಎಂಬುದನ್ನು ಎಲ್ಲರೂ ಮನಗಂಡಿದ್ದಾರೆ. ಸ್ವಾಮಿ, ಆರೋಗ್ಯ ಎಂದರೆ ಏನು ಎಂಬುದನ್ನು ಸವಿಷ್ಟೀಕರಣ ಮಾಡುವುದು ಕಷ್ಟವಾದ ವಿಷಯ. ಕೆಲವರ ಭಾವನೆ ಇರಬಹುದು ಒಬ್ಬ ವ್ಯಕ್ತಿಗೆ ಯಾವ ರೋಗರುಜಿನ ಇಲ್ಲದೇ ಇದ್ದರೆ ಆತ ಆರೋಗ್ಯ ವಂತ ಎಂದು. ಆದರೆ ಅಷ್ಟೇ ಅಲ್ಲ ನಾವಿನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳಬೇಕಾಗುತ್ತದೆ. ಆರೋಗ್ಯವಂತರೆನ್ನುವವರು ಯಾರು ಎಂದರೆ ಒಬ್ಬ ಮನುಷ್ಯನ ದೇಹ ಮತ್ತು ಮನಸ್ಸು ಸಮರಸ ವಾಗಿ ಹೊಂದಿಕೊಂಡಿರಬೇಕು, ಸುತ್ತಮುತ್ತಿನ ಭೌತಿಕ ಮತ್ತು ಸಾಮಾಜಿಕ ವಾತಾವರಣಕ್ಕೆ ಹೊಂದಿಕೊಂಡು ಸಮರಸವಾಗಿ ಈ ಎರಡು ಕೆಲಸ ಮಾಡಬೇಕು. ಸಮರಸವಾಗಿ ಕೆಲಸ ಮಾಡು ವಾಗ ಆ ಮನುಷ್ಯ ತನ್ನ ಜೀವನದಲ್ಲಿ ಬಹಳ ಸಂತೋಷದಿಂದ ಒಂದು ಉತ್ತಮ ಶ್ರೇಣಿಯಲ್ಲಿ ಜೀವನ ನಡೆಸಬೇಕು ಮತ್ತು ಆತನ ಉತ್ಪಾದನಾ ಶಕ್ತಿ ಏನಿದ್ದೆ, ಕೆಲಸ ಮಾಡುವ ಶಕ್ತಿ ಏನಿದೆ ಅದು ಒಂದು ಶ್ರೇಷ್ಠ ದರ್ಜೆಗೆ ಏರಬೇಕು. ಇದನ್ನೆಲ್ಲಾ ಸೇರಿಸಿ ಹೇಳಿದರೆ ಒಬ್ಬ ಮನುಷ್ಯ ಆರೋಗ್ಯವಂತ ಎಂಬುದಾಗಿ ಹೇಳಬಹುದು. ಅದನ್ನು ಇಂಗ್ಲೀಷ್‌ನಲ್ಲಿ positive health ಎಂದು ಹೇಳುತ್ತಾರೆ. ಹೀಗೆ ಆರೋಗ್ಯವೇ ದೇಶದ ಭಾಗ್ಯ ಎಂದು ನಾನು ಹೇಳಿದ ಮೇಲೆ ಈ ಆರೋಗ್ಯವನ್ನು ಕಾಪಾಡಲು ಬೇಕಾದಂಥ ಅವಶ್ಯಕವಾದ ವಸ್ತುಗಳು ಯಾವುವು ಎನ್ನುವುದನ್ನು ಒಂದೆರಡು ಮಾತಿನಲ್ಲಿ ಹೇಳ ಬೇಕೆಂದು ಇದ್ದೇನೆ. ಭೌತಿಕವಾದವು ಕೆಲವು. ಪೌಷ್ಟಿಕ ಆಹಾರ, ಪರಿಶುದ್ಧವಾದ ನೀರು,

(ಶ್ರೀ ಕೆ. ಎಸ್. ಗೌಡಯ್ಯ)

ಗಾಳಿ, ಬೆಳಕು, ಒಳ್ಳೆಯ ವಾಸಸ್ಥಳ ಮತ್ತು ಸುತ್ತಮುತ್ತಿನ ಪ್ರದೇಶಗಳು ಸ್ವಚ್ಛತೆಯಿಂದ
ಇರುವುದು, ಮಲ ಮೂತ್ರ ಮುಂತಾದ ಕಶ್ಮಲಗಳನ್ನು ಸಾಗಿಸಲು ಇರುವ ಸಾಧನಗಳು ಮತ್ತು
ಜನತೆಗೆ ಇರತಕ್ಕಂಥ ಬಟ್ಟೆ, ಬರೆ ಮತ್ತು ರೋಗ ಬಂದಾಗ ಅದನ್ನು ತಡೆಗಟ್ಟಲು ಮತ್ತು ಚಿಕಿತ್ಸೆ
ನಡೆಸಲು ಬೇಕಾದ ಔಷಧಿಗಳು. ಭಾವನಾತ್ಮಕವಾದ ವಸ್ತುಗಳ ವಿಷಯವಾಗಿ ಒಂದೆರಡು
ಮಾತು ಹೇಳುವುದಾದರೆ ಸ್ವಾಮಿ, ಇದು ಅವಶ್ಯಕವೇ ಎಂದು ಕೆಲವರು ಪ್ರಶ್ನಿಸಬಹುದು. ಆದರೆ
ಈಗಿನ ಕಾಲದಲ್ಲಿ ಈಗ ಜನ ಸಾಮಾನ್ಯದಲ್ಲಿರತಕ್ಕ ಈ ರೋಗಗಳು ಏನಿವೆ. ರಕ್ತದ ಒತ್ತಡ,
ಡಯಾಬಿಟೀಸ್ ಮತ್ತು ಮಾನಸಿಕ ರೋಗಗಳು ಬರದೇ ಇರಬೇಕಾದರೆ ಮುಂದೆ ನಾನು ಏನು
ವಿಷಯಗಳನ್ನು ಹೇಳುತ್ತೇನೆ ಅವು ಅವಶ್ಯಕ ಎಂದು ತಮ್ಮ ಮುಂದೆ ಹೇಳಲು ಬಯ
ಸುತ್ತೇನೆ. ಅದೇನೆಂದರೆ ಒಬ್ಬ ವ್ಯಕ್ತಿ ನಡೆಸತಕ್ಕ ಒಂದು ನಿರಾಡಂಬರ, ಸರಳ ಮತ್ತು ಸ್ವಚ್ಛ
ಜೀವನ, ಒಂದು ಇತಿಮಿತಿಯೊಳಗೆ ಆತ ಸಲ್ಲಿಸತಕ್ಕ ದೇಹ ಶ್ರಮ. ಮಾನವೀಯತೆ, ದಯೆ, ಕರುಣೆ,
ಅನುಕಂಪ ಮತ್ತು ನಿಸ್ವಾರ್ಥತೆ. ಮತ್ತು ಮನುಷ್ಯನಲ್ಲಿರತಕ್ಕ ಸೇವಾ ಮನೋಭಾವ. ಅದ
ರಂತೆಯೇ ಮನುಷ್ಯನಿಗಿರತಕ್ಕ ಮಾನಸಿಕ ನೆಮ್ಮದಿ ಮತ್ತು ಸಂತೃಪ್ತಿ. ಇವೂ ಕೂಡ ಮುಖ್ಯ
ವಾದದ್ದು. ಇದರ ಜೊತೆಗೆ ಮನುಷ್ಯನಿಗಿರುವ ಸತ್ಯಾನ್ವೇಷಣೆಯಾದರೋ ಬಹಳ ಮುಖ್ಯವಾದದ್ದು.
ಈ ಸತ್ಯಾನ್ವೇಷಣೆ ಎನ್ನುವುದು ಪ್ರತಿಯೊಬ್ಬ ಮನುಷ್ಯನಲ್ಲೂ ರಕ್ತಗತವಾಗಿದ್ದು ಅದರಿಂದ ದೇಶಕ್ಕೆ
ಬಹಳ ಪ್ರಯೋಜನವಿದೆ. ಇದರಿಂದ ನಮ್ಮ ಆರೋಗ್ಯ ವಿಚಾರದಲ್ಲಿ ಸಂಶೋಧನೆಗಳನ್ನು ಮಾಡು
ವುದಕ್ಕೂ ಅವುಗಳನ್ನು ಮುಂದುವರಿಸಿಕೊಂಡು ಹೋಗುವುದಕ್ಕೂ ಬಹಳ ಉಪಯೋಗವಾಗುತ್ತದೆ.
ಇದರಿಂದ ಜನರಲ್ಲಿ ಒಂದು ಹೆಚ್ಚಿನ ಸಹಾನುಭೂತಿ ಬೆಳೆಯುತ್ತದೆ, ಜನರು ಹೆಚ್ಚಿನ ತತ್ವಪರ
ರಾಗುತ್ತಾರೆ. ಇದರಿಂದ ಜನರಲ್ಲಿ ಯಾವಾಗಲೂ ಒಂದು ಹೊಸ ವಿಷಯವನ್ನು ಕಂಡುಹಿಡಿಯಲೇ
ಬೇಕು ಎನ್ನತಕ್ಕ ಉತ್ಸಾಹ, ಸಹನೆ, ಧೈರ್ಯ, ಸ್ಥೈರ್ಯಗಳು ಇರಲು ಇದು ಇರಲೇಬೇಕು.
ಇವಿಷ್ಟೂ ಈ ಭೌತಿಕವಾದ ಭಾವನಾತ್ಮಗಳನ್ನು ಬೆಳಸಲು ಇರಲೇಬೇಕು ಎಂತ ಹೇಳಿದಮೇಲೆ
ಇವುಗಳನ್ನು ಒದಗಿಸಿಕೊಡತಕ್ಕವರು ಯಾರು ಎಂತ ಕೇಳಬಹುದು. ಇವುಗಳನ್ನು ಒದಗಿಸಿ
ಕೊಳ್ಳತಕ್ಕ ಕಾರ್ಯದಲ್ಲಿ ಎಲ್ಲರೂ ಪಾತ್ರವಹಿಸಲೇ ಬೇಕು. ಅಂದರೆ ಸಾಮಾನ್ಯ ಜನರೂ, ಈ ದಿವಸ
ಔಷಧಿಗಳನ್ನು ಒದಗಿಸುತ್ತಿರುವ ಜನರೂ, ಈ ಆರೋಗ್ಯ ಸಂಸ್ಥೆಗಳನ್ನು ಬೆಳಸತಕ್ಕ ಜನರೂ—ಹೀಗೆ
ಪ್ರತಿಯೊಬ್ಬರೂ ಇದರಲ್ಲಿ ಭಾಗವಹಿಸಬೇಕೆಂತ ಹೇಳಬಹುದು. ಆದರೆ ಹಾಗೆ ಮಾಡದೆ ಇಷ್ಟೆಲ್ಲ
ವನ್ನೂ ಈ ಒಂದು ವೈದ್ಯ ಇಲಾಖೆಯ ಜನರೇ ಒದಗಿಸಿಕೊಡಬೇಕೆಂದರೆ ಇದು ಖಂಡಿತ ಸಾಧ್ಯ
ವಿಲ್ಲದ ಮಾತು. ಒಟ್ಟಿನಲ್ಲಿ ಹೇಳುವುದಾದರೆ ಇದಕ್ಕಾಗಿ ಇಡೀ ದೇಶವೇ ದುಡಿಯಬೇಕು—ಪ್ರತಿ
ಯೊಬ್ಬ ವ್ಯಕ್ತಿ, ಸಮಾಜ, ರಾಜಕಾರಣಿ, ವ್ಯಾಪಾರಗಾರ, ವ್ಯವಸಾಯಗಾರ, ಆಡಳಿತಗಾರ,
ಇನ್ನಿತರ ಸಮಾಜ ಧುರೀಣರು, ಮಠಾಧಿಪತಿಗಳು-ಹೀಗೆ ಎಲ್ಲ ತರಹೆಯ ಜನರೂ ಇದರಲ್ಲಿ ಭಾಗ
ವಹಿಸಬೇಕಾಗಿದೆ. ಆಗ ಯಾವ ಯಾವ ಜನರು ಅರ್ಥಿಕ ನೈಪುಣ್ಯತೆಯನ್ನು ಬಯಸುತ್ತಾರೋ
ಯಾವ ಯಾವ ಜನ ಆರೋಗ್ಯ ನಿಯಮ ಪಾಲನೆಯನ್ನು ಬಯಸುತ್ತಾರೋ ಅಂಥವರೆಲ್ಲರಿಗೂ
ಇದರಿಂದ ತುಂಬ ಸಹಾಯವಾಗುತ್ತದೆ ಎಂದು ಹೇಳುತ್ತೇನೆ. ಹೀಗೆ ಎಲ್ಲರೂ ಕೂಡಿ ಒಗ್ಗಟ್ಟಿನಿಂದ,
ಒಂದು ಸೇವಾ ಮನೋಭಾವನೆಯಿಂದ, ಒಂದು ಹೊಂದಾವಣಿಕೆಯಿಂದ ಕೆಲಸ ಮಾಡಿದರೂ
ಕೂಡ, ಆಗಲೂ ಇದರಲ್ಲಿ ಕೆಲವು ಲೋಪದೋಷಗಳು ಕಂಡುಬಂದೇ ಬರುತ್ತವೆ. ಆದರೆ ಇದು
ಅನಿವಾರ್ಯವೆಂದು ಹೇಳುತ್ತೇನೆ. ಹೀಗೆಯೇ ಹಿಂದಿನಿಂದಲೂ ದೇಶದಲ್ಲಿ ಕೆಲವು ರೋಗರುಜಿನಗಳು
ಇದ್ದೇ ಇರುತ್ತವೆ. ಅವೂ ಕೂಡ ಅನಿವಾರ್ಯವೇ. ಅವುಗಳ ಬಗ್ಗೆ ನಾವು ಏನು ಕಾರ್ಯಕ್ರಮ
ಕೈಗೊಳ್ಳಬೇಕು ಎಂಬುದೇ ಈಗ ನಮ್ಮ ಮುಂದಿರತಕ್ಕ ಪ್ರಶ್ನೆ. ಇದರಲ್ಲಿ ಮೊದಲನೆಯದು ರೋಗ
ಹರಡದಂತೆ ಅವುಗಳನ್ನು ತಡೆಗಟ್ಟುವುದು. Prevention is better than cure ಅಂದ ಹಾಗೆ
ರೋಗಗಳು ತಲೆದೋರಿದ ಕೂಡಲೆ ತಕ್ಕ ಚಿಕಿತ್ಸೆಗಳನ್ನು ನಡೆಸುವುದು—ಇನ್ನೊಂದು ಹೀಗೆ ಜೊತೆ
ಯಲ್ಲೇ ಈ ಎರಡೂ ಕಾರ್ಯಕ್ರಮಗಳನ್ನು ಕೈ ಕೊಳ್ಳಬೇಕು.

ಸ್ವಾಮಿ, ದೇಶದಲ್ಲಿರತಕ್ಕ ಈಗಿನ ಸಂದಿಗ್ಧ ಪರಿಸ್ಥಿತಿಯಲ್ಲಿ ನಮ್ಮ ಆರೋಗ್ಯವನ್ನು ಕಾಪಾಡಿ
ಕೊಳ್ಳುವುದು ಬಹಳ ಮುಖ್ಯವಾದದ್ದು. ಆದುದರಿಂದ ಈ ಆರೋಗ್ಯ ಭಾಗ್ಯವನ್ನು ಜನರು
ಕಾಪಾಡಿಕೊಳ್ಳತಕ್ಕ ಬಗ್ಗೆ ಮುಖ್ಯ ಕಾರ್ಯಕ್ರಮಗಳೇನಿವೆ ಅವುಗಳ ಕಡೆಗೆ ಇಡೀ ದೇಶದ ಜನತೆಯ
ಮನಸ್ಸನ್ನು ಆಕರ್ಷಣೆ ಮಾಡತಕ್ಕ ವಿಷಯಗಳು ಕೆಲವು ಇರುತ್ತವೆ. ಅವುಗಳೇನೆಂಬುದನ್ನು
ನಾನೀಗ ಸೂಚಿಸ ಬಯಸುತ್ತೇನೆ. ಇದಕ್ಕೆ ಮಾರ್ಗದರ್ಶನ ನೀಡಿರತಕ್ಕ ಕೆಲವು ಸಮಿತಿಯ ವರದಿ
ಗಳಿವೆ. ಅವುಗಳನ್ನು ಈ ಸಂಧರ್ಭದಲ್ಲಿ ನಾವು ಜ್ಞಾಪಕ ಮಾಡಿಕೊಳ್ಳದೆ ಇದ್ದಲ್ಲಿ ನಾವು ಆ ಸಮಿತಿ
ಗಳಿಗೆ ನಮ್ಮ ಗೌರವವನ್ನು ತೋರಿಸಿದಹಾಗೆ ಆಗುವುದಿಲ್ಲ. ಅಂಥ ಸಮಿತಿಗಳು ಯಾವುವೆಂದರೆ—

ಒಂದು ಬೋರ್‌ಸಮಿತಿಯವರ ವರದಿ. ಮತ್ತೊಂದು ಡಾಕ್ಟರ್ ಲಕ್ಷ್ಮಣಸ್ವಾಮಿಯವರ ನೇತೃತ್ವದಲ್ಲಿ ನೇಮಿಸಲಾಗಿದ್ದ ಹೆಲ್ತ್ ಅಂಡ್ ಸ್ಯಾನಿಟೆರಿ ಪ್ಲಾನಿಂಗ್ ಸಮಿತಿಯವರ ವರದಿ, ಮತ್ತು ಮೂರನೆಯದಾಗಿ ಯೂನಿವರ್ಸಿಟಿ ಮೆಡಿಕಲ್ ಎಜ್ಯುಕೇಷನ್ ಸಮಿತಿಯವರ ವರದಿ. ಹೀಗೆ ನೇಮಿಸಲಾಗಿದ್ದ ಆ ಮೂರು ಸಮಿತಿಗಳೂ ವೈದ್ಯಕೀಯ ಹಾಗು ಜನಾರೋಗ್ಯ ಸಂಸ್ಥೆಗಳು ಯಾವ ರೀತಿ ಅವು ಬೆಳೆಯಬೇಕು, ಯಾವ ರೀತಿ ಅವು ಕೆಲಸ ಕಾರ್ಯಗಳನ್ನು ಮಾಡಬೇಕು ಎನ್ನತಕ್ಕ ಬಗ್ಗೆ ಆ ಸಮಿತಿಯವರು ಮಾರ್ಗದರ್ಶನ ಮಾಡಿಕೊಟ್ಟಿದ್ದಾರೆ. ಆ ಮಾರ್ಗದರ್ಶನದಲ್ಲಿ ಕೆಲಕೆಲವು ಬಾಬುಗಳನ್ನು ಈಗಾಗಲೇ ಕೇಂದ್ರ ಸರ್ಕಾರ ಹಾಗೂ ರಾಜ್ಯಸರ್ಕಾರಗಳು ಕಾರ್ಯಗತ ಮಾಡಿವೆ. ಆದರೆ ಮುಂದಿನ್ನೂ ಮಾಡಬೇಕಾದುದು ಅಗಾಧವಾಗಿವೆ. ಆದರೆ ಈ ವರೆಗೆ ಮಾಡಿರತಕ್ಕ ಅಥವಾ ಕೈ ಗೊಂಡಿರತಕ್ಕ ಕೆಲವು ಕಾರ್ಯಕ್ರಮಗಳಲ್ಲಿ ಕೆಲವು ಲೋಪದೋಷಗಳಿವೆಯೆಂದು ನಾನೀಗ ಹೇಳಬೇಕಾಗಿದೆ. ಆ ಮಹನೀಯರು ಒಟ್ಟಿನಲ್ಲಿ ಸೂಚಿಸಿರತಕ್ಕ ಸಲಹೆಗಳಲ್ಲಿ ಪ್ರಾಮುಖ್ಯವಾಗಿ ಹೆಚ್ಚಿನ ಗಮನ ಸೆಳೆಯುತಕ್ಕಂಥ ಸೂಚನೆಗಳ್ಯಾವುವೆಂದರೆ ಹೊಸ ಹೊಸ ಔಷಧಿಗಳ ಸಂಶೋಧನೆ, ಹೆಚ್ಚು ಮೆಡಿಕಲ್ ಕಾಲೇಜುಗಳ ಸ್ಥಾಪನೆ, ಗ್ರಾಮಾಂತರ ಪ್ರದೇಶಗಳಲ್ಲಿ ಹೇಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಬೇಕು, ಹಾಗೂ ಅಲ್ಲಿ ಹೇಗೆ ಕುಟುಂಬ ರಕ್ಷಣೆ ಜಾರಿಗೆ ತರಬೇಕು, ಶಾಲಾ ಮಕ್ಕಳ ಆರೋಗ್ಯ ರಕ್ಷಣೆ ಇತ್ಯಾದಿ ಬಾಬುಗಳು. ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ಜನಾರೋಗ್ಯದ ವಿಚಾರದಲ್ಲಿ ಇನ್ನೊಂದು ಒಳ್ಳೆಯ ಏರ್ಪಾಡನ್ನು ಮಾಡಿದ್ದಾರೆ. ಅದನ್ನು ಹೆಚ್ಚು ಪ್ರಚಾರದಲ್ಲಿ ತರಬೇಕಾಗಿದೆ. ಜನರ ಆರೋಗ್ಯವು ಉತ್ತಮ ರೀತಿಯಲ್ಲಿರಬೇಕಾದರೆ ಅದಕ್ಕೆ ಮೂಲ, ಒಳ್ಳೆಯ ನ್ಯೂಟ್ರಿಷನ್ ಇರತಕ್ಕ ಉತ್ತಮ ಆಹಾರಬೇಕು. ಈ ವಿಚಾರವನ್ನು ಜನರಿಗೆ ಹೆಚ್ಚು ಹೆಚ್ಚು ಪ್ರಚಾರ ಮಾಡಲು ಒಂದು ಯೋಜನೆಯನ್ನೀಗ ಕೈ ಗೊಂಡಿದ್ದಾರೆ. ಈಗ ನಾನು ಈ ಪ್ರತಿಯೊಂದು ವಿಷಯದಲ್ಲೂ ಹೆಚ್ಚಿನ ಪರಿಶೀಲನೆ ಮಾಡಲು ಪ್ರಯತ್ನಿಸುತ್ತೇನೆ. ಆದರೆ ಈ ಕೆಲವು ವಿಷಯಗಳ ಬಗ್ಗೆ ನನ್ನ ಮಾನ್ಯ ಸ್ನೇಹಿತರನೇಕರು ಖರ್ಚಿನ ಖೋತಾ ಸೂಚನೆಗಳನ್ನು ಮಂಡಿಸಿದ್ದಾರೆ. ಆ ಖೋತಾ ಸೂಚನೆಗಳ ಒಂದು ವಿಹಂಗಮ ದೃಷ್ಟಿಯನ್ನೂ ಕೂಡ ನಾನೀಗ ಸರ್ಕಾರದವರ ಮುಂದಿಡಲು ಪ್ರಯತ್ನ ಮಾಡುತ್ತಿರುವುದರಿಂದ ಆ ನನ್ನ ಸ್ನೇಹಿತರ ಕೆಲಸವನ್ನು ನಾನೇ ಒಂದು ರೀತಿಯಲ್ಲಿ ನಿರ್ವಹಿಸಿದ ಹಾಗೆ ಅಗುತ್ತದೆ. ವೈದ್ಯಕೀಯ ಕಾಲೇಜುಗಳನ್ನು ಹೆಚ್ಚು ಹೆಚ್ಚಾಗಿ ಸ್ಥಾಪನೆ ಮಾಡುವುದು, ವೈದ್ಯಕೀಯ ಶಿಬ್ಬಂದಿಯನ್ನು ಹೆಚ್ಚುಮಾಡುವುದು, ಶಾರೀರಕ ಚಿಕಿತ್ಸೆ ಹಾಗೂ ರೀಹ್ಯಾಬಿಲಿಟೇಷನ್ನಿಗೆ ಸಂಬಂಧಪಟ್ಟ ವಿಭಾಗಗಳನ್ನು ಅಭಿವೃದ್ಧಿಗೊಳಿಸುವುದು, ಮತ್ತು ಇವುಗಳಿಗೆ ಹೆಚ್ಚು ಸೌಲಭ್ಯಗಳನ್ನು ನೀಡುವುದು, ದ್ಯಂತವೈದ ವಿಭಾಗಗಳಲ್ಲಿರತಕ್ಕ ವೈದ್ಯಕೀಯ ಅಧಿಕಾರಿಗಳ ಸಂಬಳ ಸಾರಿಗೆಗಳನ್ನು ಇತರ ವೈದ್ಯಕೀಯ ಅಧಿಕಾರಿಗಳ ಮಟ್ಟಕ್ಕೆ ತಂದು ಅದನ್ನು ಸರಿಪಡಿಸಬೇಕು ಎಂತ ಕೇಳಿದ್ದಾರೆ. ಹೀಗೆ ಆಯುರ್ವೇದ ಕಾಲೇಜುಗಳಿಗೆ ಹೆಚ್ಚಿನ ಗಮನ ಕೊಡಬೇಕು. ಸಾಕಷ್ಟು ಸಂಖ್ಯೆಯ ವೈದ್ಯರಿಗೂ-ದಾದಿಯರಿಗೂ ತರಪೇತು ಕೊಡತಕ್ಕ ಕಾರ್ಯಕ್ಕೆ ಹೆಚ್ಚು ಗಮನ ಕೊಡಬೇಕು, ಜಿಲ್ಲಾ ಕೇಂದ್ರಗಳಲ್ಲಿರುವ ಆಸ್ಪತ್ರೆಗಳಿಗೆ ವಿಶೇಷ ತಜ್ಞರನ್ನು ಹೆಚ್ಚು ಹೆಚ್ಚಾಗಿ ನೇಮಿಸಬೇಕು, ಅಲ್ಲಿಗೆ ಹೆಚ್ಚು ಔಷಧಿಗಳನ್ನು ಸರಬರಾಯಿ ಮಾಡಬೇಕು, ಹೋಮಿಯೋಪತಿಕ್ ಅಸ್ಪತ್ರೆಗಳಿಗೆ ಹೆಚ್ಚು ಗಮನ ಕೊಡಬೇಕು ಎಂತ ಕೇಳಿದ್ದಾರೆ. ಮಲೆನಾಡಿಗೆ ಒಂದು ಮೆಡಿಕಲ್ ಕಾಲೇಜನ್ನು ಕೊಡಬೇಕೆಂದು ಶಿವಮೊಗ್ಗದವರು ಕೇಳಿ ಕೊಂಡಿದ್ದಾರೆ. ಹೀಗೆ ಎಲ್ಲೆಲ್ಲಿಯೂ ವೈದ್ಯಕೀಯ ಶಿಕ್ಷಣ ಶಾಲೆಗಳನ್ನೂ, ಆಸ್ಪತ್ರೆಗಳನ್ನೂ, ವೈದ್ಯಕೀಯ ಶಿಬ್ಬಂದಿಯನ್ನೂ ಹೆಚ್ಚಿಸುವುದಲ್ಲದೆ ಹೆಚ್ಚು ಹೆಚ್ಚು ಔಷಧಿಯನ್ನೂ ಒದಗಿಸಬೇಕೆಂದು ಕೇಳುತ್ತಿದ್ದಾರೆ. ಹೀಗೆ ಇನ್ನೂ ಈ ಜನಾರೋಗ್ಯ ರಕ್ಷಣೆ ಖಾತೆಯ ಖೋತಾ ಸೂಚನೆಗಳಲ್ಲಿ ಜಾಡಮಾಲಿಗಳ ಪರಿಸ್ಥಿತಿಯನ್ನು ಉತ್ತಮಗೊಳಿಸುವುದು, ಅಂಟುರೋಗಗಳನ್ನು ತಡೆಗಟ್ಟುವುದು, ಕುಟುಂಬ ಯೋಜನೆಯನ್ನು ಹೆಚ್ಚು ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಹರಡುವುದು, ಖೋಟಾ ಔಷಧಿಗಳ ತಯಾರಿಕೆ ಹಾಗೂ ಮಾರಾಟವನ್ನು ಜರೂರಾಗಿ ತಡೆಗಟ್ಟಬೇಕು ಎಂಬ ಅನೇಕ ಸೂಚನೆಗಳನ್ನಿತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸಬೇಕು—ಶಿಬ್ಬಂದಿ ಅಭಾವವನ್ನು ನೀಗಬೇಕು ಎಂತ ಹೀಗೆಲ್ಲಾ ಕೇಳಿಕೊಂಡಿದ್ದಾರೆ.

ಬಹುಶಃ ಮುಖ್ಯವಾದ ವಿಷಯ ಕುಡಿಯುವ ನೀರಿನ ಬಾವಿಗಳು, ಶುದ್ಧವಾದ ಕುಡಿಯುವ ನೀರು ಸಿಕ್ಕುವ ಹಾಗೆ ಮಾಡಬೇಕೆಂಬುದಾಗಿ ಸೂಚಿಸಿದ್ದಾರೆ. ಅವುಗಳನ್ನು ನಾನು ಅವರ ಪರವಾಗಿ ತಮ್ಮ ಮುಂದೆ ಇಟ್ಟಿದ್ದೇನೆ.

11-00 A.M.

Rural Health Service—ಗ್ರಾಮಾಂತರ ಪ್ರದೇಶಗಳ ಆರೋಗ್ಯ ರಕ್ಷಣೆ ಯಾವ ರೀತಿ ನಡೆಯಬೇಕು, ಇದರಲ್ಲಿರುವ ಲೋಪ ದೋಷಗಳೇನು ಎಂಬ ವಿಷಯವಾಗಿ ಕೆಲವು ಮಾತುಗಳನ್ನು

(ಶ್ರೀ ಕೆ. ಎಸ್. ಗೌಡಯ್ಯ)

ಹೇಳುತ್ತೇನೆ. ನಮ್ಮ ರಾಜಕಾರಣಿಗಳು, ಹೇಳುತ್ತಾರೆ ಇಲ್ಲಿ ಡಾಕ್ಟರುಗಳ ಅಭಾವವಿರುವುದರಿಂದ ನಾವು ಹೆಚ್ಚಾಗಿ ಗಮನ ಕೊಡಲಿಕ್ಕೆ ಆಗಲಿಲ್ಲವೆನ್ನುವ ವಾದವನ್ನು ಹೂಡುತ್ತಾರೆ. ಡಾಕ್ಟರು ಗಳಿದ್ದರೂ ಕೂಡ ಹಳ್ಳಿಗಾಡು ಪ್ರದೇಶಗಳಿಗೆ ಹೋಗಿ ಕೆಲಸ ಮಾಡಲು ಒಪ್ಪುತ್ತಿಲ್ಲ; ಅದಕ್ಕೆ ಕಾರಣ ಅವರಲ್ಲಿರುವ ದುರಾಸೆ, ಅವರಲ್ಲಿ ಸೇವಾ ಮನೋಭಾವವಿಲ್ಲದಿರುವುದು ಎಂಬುದಾಗಿ ವೈದ್ಯರುಗಳ ಮೇಲೆ ಆರೋಪ ಮಾಡುತ್ತಾರೆ, ನಮ್ಮ ರಾಜಕಾರಣಿಗಳು. ವೈದ್ಯರ ಮೇಲೆ ಈ ರೀತಿ ಆರೋಪಣೆ ಮಾಡುವಾಗ ನಾವು ನಮ್ಮ ಆತ್ಮ ಸಂಶೋಧನೆಯನ್ನು ಪ್ರತಿಯೊಬ್ಬರೂ ಮಾಡಿಕೊಳ್ಳಬೇಕು. ನಮ್ಮಲ್ಲಿ ಆ ತರಹ ದುರಾಶೆ ಇಲ್ಲವೆ, ಆ ತರಹ ಸೇವಾ ಮನೋಭಾವ ವಿದೆಯೇ ಎಂಬುದನ್ನು ನಾವು ಯೋಚನೆ ಮಾಡಿಕೊಳ್ಳಬೇಕು. ವೈದ್ಯರಾಗುವುದಕ್ಕೆ ಅವರು ಎಷ್ಟು ವರ್ಷಕಾಲ ಓದಬೇಕು, ಒಬ್ಬ ಪದವೀಧರನಾಗಲು ಎಷ್ಟು ವರ್ಷ ಕಾಲವ್ಯಯ ಮಾಡಬೇಕು, ಎಷ್ಟು ಹಣ ಖರ್ಚು ಮಾಡಬೇಕು, ಎಷ್ಟು ಸಾಲ ಮಾಡಿರಬೇಕು, ತನ್ನ ಆಸ್ತಿ ಪಾಸ್ತಿಗಳನ್ನು ಮಾರಿಕೊಂಡಿರಬೇಕು ಅಥವಾ ಎಷ್ಟು ಜನರ ಕೈಕಾಲು ಹಿಡಿದು ಧನರೂಪವಾದ ಸಹಾಯವನ್ನು ಪಡೆದಿರಬೇಕು ? ಇಂಥವರ ಮೇಲೆ ಈ ತರಹ ಆರೋಪಣೆಗಳನ್ನು ಮಾಡುವುದು ಅಷ್ಟು ಸರಿಯಲ್ಲ. ಅವರಲ್ಲಿ ಏನಾದರೂ ದೋಷಗಳಿದ್ದರೆ ಅವು ಜನ ಸಾಮಾನ್ಯರಿಗೆ ಇರತಕ್ಕ ದೋಷಗಳೇ ಹೊರತು, ಅವರಲ್ಲಿ ಮಾತ್ರವಿದ್ದು ಇನ್ನು ಯಾರ ಲ್ಲಿಯೂ ಇಲ್ಲದೇ ಅವರಲ್ಲಿಯೇ ಕೇಂದ್ರೀಕೃತವಾಗಿರುವುದಿಲ್ಲವೆಂದು ನಾನು ನನ್ನ ವೃತ್ತಿ ಬಾಂಧವರ ಪರವಾಗಿ ಹೇಳಲು ಬಯಸುತ್ತೇನೆ.

ಪದವೀಧರರಾದ ವೈದ್ಯರು ತಕ್ಷಣವೇ ಹಳ್ಳಿಗಳಿಗೆ ಹೋಗಿ ಅಲ್ಲಿ ಐದು ವರ್ಷಕಾಲ ಕೆಲಸ ಮಾಡಬೇಕು ಎಂದು ಕೆಲವರು ಹೇಳುತ್ತಾರೆ. ಅದು ಹಳ್ಳಿಗಾಡಿನವರಿಗೆ ಅಪಚಾರ ಮಾಡಿದ ಹಾಗೆ ಆಗುತ್ತದೆ. ಏಕೆಂದರೆ ಪದವೀಧರನಾದ ತಕ್ಷಣ ಏನೂ ಅನುಭವವಿಲ್ಲದೆ, ಹಿರಿಯ ವೈದ್ಯರುಗಳ ಅನುಭವವೇನಿದೆ ಅದನ್ನು ತೆಗೆದುಕೊಳ್ಳದೆ ನೇರವಾಗಿ ಅವರನ್ನು ಹಳ್ಳಿಗಳಿಗೆ ಕಳಿಸಿದರೆ ಹಳ್ಳಿಯ ಜನಗಳಿಗೆ ಅಪಚಾರ ಮಾಡಿದಹಾಗೆ ಆಗುತ್ತದೆ. ನನ್ನ ಅನುಭವದಲ್ಲಿ ಕೂಡ ನಾನು ಪದವೀಧರನಾದ ಮೇಲೆ ತಕ್ಷಣ ಒಂದು intravenous injection ಕೊಡಲು ಎಷ್ಟೋ ಕಷ್ಟವಾಗುತ್ತಿತ್ತು. ಅಂಥಾ ದ್ದರಲ್ಲಿ ಅವರನ್ನು ತಕ್ಷಣ ಹಳ್ಳಿಗಾಡಿಗೆ ಕಳಿಸಿದರೆ ಅಲ್ಲಿನ ಜನಗಳಿಗೆ ತೊಂದರೆ ಕೊಟ್ಟಹಾಗೆ ಆಗುತ್ತದೆ. ಪಟ್ಟಣದವರಿಗೆ ಒಂದು ತರಹ ಹಳ್ಳಿಗಾಡಿನವರಿಗೆ ಒಂದು ತರಹ ನೀತಿ ಸರಿಯಲ್ಲ. ಮೂರು ನಾಲ್ಕು ವರ್ಷ ಅನುಭವ ಪಡೆದ ಮೇಲೆ ಎಲ್ಲರನ್ನೂ ಕಡ್ಡಾಯವಾಗಿ ಹಳ್ಳಿಗಾಡಿಗೆ ಕಳಿಸಬೇಕು ಎನ್ನುವ ವಾದ ಹೇಳುತ್ತಾರೆ. ಆದರೆ ಹಾಗೆ ಮಾಡಬೇಡಿ. ನಮ್ಮ ಪ್ರಜಾಪ್ರಭುತ್ವ ಲಕ್ಷಣದ ಪ್ರಕಾರ ಕಡ್ಡಾಯವಾಗಿ ಮಾಡುವುದು ಸರಿಯೇ ಎಂದು ಕೇಳುತ್ತೇನೆ. ಯಾರು ಹಳ್ಳಿಗಾಡಿಗೆ ಹೋಗಲು ಇಚ್ಛೆ ಪಡುತ್ತಾರೆಯೋ ಅಂಥವರನ್ನು ಅಲ್ಲಿಗೆ ಕಳಿಸಬೇಕೇ ಹೊರತು ಎಲ್ಲರನ್ನ ಹಳ್ಳಿಗಾಡಿಗೆ ಹೋಗಿ ಜನರಿಗೆ ಚಿಕಿತ್ಸೆ ನಡೆಸಿ ಎಂದು ಹೇಳುವುದು ಅನ್ಯಾಯವೆಂದು ನಾನು ಹೇಳುತ್ತೇನೆ. ಏಕೆಂದರೆ ಎಷ್ಟೋ ಜನ ಪದವೀಧರರಿಗೆ ವೈದ್ಯಕೀಯ ವಿಷಯಗಳಲ್ಲಿ ಅಥವಾ ಉಳಿದ ವಿಷಯಗಳಲ್ಲಿ ಹೆಚ್ಚು ಪರಿಣತರಾಗುವ ಆಸೆ ಇರುತ್ತದೆ, ಆ ತರಹ ಶಕ್ತಿ ಕೂಡ ಅವರಲ್ಲಿರುತ್ತದೆ. ಅಂಥವರನ್ನು ಹಳ್ಳಿ ಗಳಿಗೆ ಕಳುಹಿಸಿದರೆ ಅವರ ಶಕ್ತಿಯನ್ನು ವಿನಾಕಾರಣವಾಗಿ ಕುಂಠಿತ ಮಾಡಿದ ಹಾಗೆ ಆಗುತ್ತದೆ. ಆದಕ್ಕೋಸ್ಕರ ನನ್ನ ಸಲಹೆ ಏನೆಂದರೆ ಹಳ್ಳಿಗಾಡುಗಳಿಗೆ ವೈದ್ಯರುಗಳನ್ನು ಆಕರ್ಷಿಸಬೇಕಾದರೆ ಯಾರು ಬೇರೆ ವಿಷಯಗಳಲ್ಲಿ ಹೆಚ್ಚು ತಜ್ಞತೆಯನ್ನು ಪಡೆಯುವುದಕ್ಕೆ ಇಷ್ಟಪಡದೆ ಇರುತ್ತಾರೆ ಅಂಥವರಿಗೆ ಹಳ್ಳಿಗಾಡಿನಲ್ಲಿ ಹೆಚ್ಚು ವೇತನಗಳ ರೀತಿಯಲ್ಲಿ ಮನೆಗಳನ್ನು ಕಟ್ಟಿಸಿಕೊಡುವ ರೀತಿಯಲ್ಲಿ ಒಳ್ಳೆಯ ವಾತಾವರಣ ಕಲ್ಪಿಸುವ ರೀತಿಯಲ್ಲಿ, ಮತ್ತು ಅಲ್ಲಿನ ಆಸ್ಪತ್ರೆಗಳಲ್ಲಿ ಹೆಚ್ಚು ರೋಗಗಳನ್ನು ಕಂಡುಹಿಡಿದು ಜನರಿಗೆ ಚಿಕಿತ್ಸೆ ಮಾಡಲು ಔಷಧ, ಉಪಕರಣಗಳು, laboratory equipment ಇದನ್ನೆಲ್ಲ ಒದಗಿಸಿ ಕೊಡುವುದರ ಮುಖಾಂತರ ವೈದ್ಯರನ್ನು ಹಳ್ಳಿಗಾಡು ಪ್ರದೇಶಗಳಿಗೆ ಆಕರ್ಷಿಸ ಬಹುದು. ಕಡ್ಡಾಯ ಮಾಡುವುದು ಸರಿಯಲ್ಲ. ಅವರು ಪದವೀಧರರಾದ ಕೂಡಲೇ ಹಳ್ಳಿಗಳಿಗೆ ಕಳಿಸುವುದೂ ಸರಿಯಲ್ಲವೆಂದು ನಾನು ಹೇಳುತ್ತೇನೆ.

Licentiate course ಈಗ ನಮ್ಮಲ್ಲಿ ತೆಗೆದುಬಿಟ್ಟಿದ್ದಾರೆ. ನಿಜವಾಗಿಯೂ ಇದು ಅಭಿನಂದ ನೀಯವಾದ ವಿಷಯ. ದೇಶದಲ್ಲಿ ಪುನಃ licentiate course ಪ್ರಾರಂಭ ಮಾಡಬಾರದಾಗಿತ್ತು ಎಂದು ಅದಕ್ಕೆ ವಿರೋಧವಿತ್ತು. ಆದರೆ ಇದ್ದ ಎರಡು ಮೆಡಿಕಲ್ ಸ್ಕೂಲುಗಳನ್ನು ತೆಗೆದಮೇಲೆ ಒಂದೇ ಒಂದು ಮೆಡಿಕಲ್ ಕಾಲೇಜ್ ಪ್ರಾರಂಭ ಮಾಡಿದ್ದಾರೆ. ಶಿವಮೊಗ್ಗದಲ್ಲಿ ಮೆಡಿಕಲ್ ಸ್ಕೂಲನ್ನು ಸ್ಥಾಪನೆ ಮಾಡಿದ್ದು ಅದನ್ನು ತೆಗೆದುಹಾಕಿದ್ದಾರೆ. ಶಿವಮೊಗ್ಗದವರೂ ಕಾಲೇಜನ್ನು ಕೇಳುತ್ತಿದ್ದಾರೆ. ಇನ್ನೂ ಸ್ವಲ್ಪ ಹಣವನ್ನೊದಗಿಸಿಕೊಂಡು ಶಿವಮೊಗ್ಗದಲ್ಲಿ ಒಂದು ಕಾಲೇಜನ್ನು

ತೆರೆದರೆ ನಮ್ಮ ಡಾಕ್ಟರುಗಳ ಅಭಾವವನ್ನು ತಪ್ಪಿಸುವುದಲ್ಲದೆ ಆ ಭಾಗದ ಜನಗಳಿಗೆ ಉತ್ಸಾಹ ಕೂಡ ಬರುವ ಹಾಗೆ ಆಗುತ್ತದೆಂದು ಹೇಳುತ್ತೇನೆ.

Nutrition ಬಗ್ಗೆ ಹೆಚ್ಚು ಗಮನ ಕೊಡಬೇಕು. ಅದರಲ್ಲಿಯೂ ವ್ಯವಸಾಯಗಾರರು ಮತ್ತು ವ್ಯವಸಾಯ ಇಲಾಖೆಯವರು ಹೆಚ್ಚು ಸಹಾಯ ಮಾಡಬೇಕಾಗುತ್ತದೆ. ಅವರು ಹೆಚ್ಚು ಆಹಾರ ಬೆಳೆಯುವಂಥಾದನ್ನೇ ಗಮನದಲ್ಲಿಟ್ಟುಕೊಳ್ಳದೆ ತಾವು ಬೆಳೆಯುವ ಆಹಾರದಲ್ಲಿ ಪೌಷ್ಟಿಕವಾದ ವಸ್ತುಗಳು ಇವೆಯೇ ಇಲ್ಲವೇ ಎಂಬುದನ್ನು ವಿಚಾರ ಮಾಡಬೇಕು. ಸಾಮಾನ್ಯ ಜನರು ಆ ಆಹಾರ ಪದಾರ್ಥಗಳನ್ನು ಉಪಯೋಗಿಸುವುದರಿಂದ ಅದರಲ್ಲಿ ಪೌಷ್ಟಿಕಾಂಶವಿದೆಯೇ ಇಲ್ಲವೇ ಎಂಬುದನ್ನು ಯೋಚನೆ ಮಾಡಿ, ಹೆಚ್ಚು ಬೆಳೆ ಬೆಳೆಯನ್ನು ಕೊಡುವಂಥ ಮತ್ತು ಪೌಷ್ಟಿಕಾಂಶದಿಂದ ಕೂಡಿರುವಂಥ ತಳಿಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಪ್ರಯತ್ನ ಮಾಡಬೇಕು.

ಸಂಶೋಧನೆಯ ವಿಚಾರವಾಗಿ ಹೇಳುವುದಕ್ಕೆ ಹೋದರೆ ನಮ್ಮ ದೇಶದಲ್ಲಿ ಅದರ ಅನುಭವ ಎಷ್ಟಿದೆ ಎಂದರೆ ನಮಗೆ ಆಶ್ಚರ್ಯವಾಗುತ್ತದೆ. ನಮ್ಮ ಜನಗಳಲ್ಲಿ ಕೆಲವು ಕಡೆ ಸಂಶೋಧನೆಗೆ ಅವಕಾಶವೇ ಇಲ್ಲ, ಕೆಲವು ಕಡೆ ಉಪಕರಣಗಳಿದ್ದರೆ, ಅವುಗಳನ್ನು ಸರಿಯಾಗಿ ಉಪಯೋಗಿಸುತ್ತಿಲ್ಲ. ಮುಖ್ಯವಾಗಿ ಪ್ರತಿಯೊಬ್ಬ ವೈದ್ಯನಿಗೆ, ಹೆಚ್ಚಿಗೆ ತಜ್ಞತೆಯನ್ನು ಪಡೆದಂಥ ವೈದ್ಯನಿಗೆ ಇದನ್ನೆಲ್ಲ ಒದಗಿಸಿ ವಾರ್ಡ್ ಪಕ್ಕದಲ್ಲಿಯೇ ಒಂದು ಸಂಶೋಧನಾಗಾರ (research annexe) ಎಂದು ಏನು ಹೇಳುತ್ತಾರೆ ಅದನ್ನು ಕೊಟ್ಟು Pathologist, Bio-chemist, Laboratory Assistant ಇವರೆಲ್ಲರೂ ಆತನ ನೇತೃತ್ವದಲ್ಲಿ ಕೆಲಸ ಮಾಡುವ ಹಾಗೆ ಮಾಡಿದರೆ ಆ ವೈದ್ಯನು ಅಲ್ಲಿ ಸಿಕ್ಕುವ chemical material ಉಪಯೋಗಿಸಿಕೊಂಡು ಹೊಸ ವಿಷಯಗಳನ್ನು ಕಂಡುಹಿಡಿಯುವುದಕ್ಕೆ ಅವಕಾಶವಾಗುತ್ತದೆ.

ಜನರಲ್ ಪ್ರಾಕ್ಟೀಷನರುಗಳು ಕೂಡ ತಮ್ಮ ಕಣ್ಣು ತೆರೆದು ನೋಡಿ, ಕೇವಲ ರಕ್ಷಣೆಗೆ ಔಷಧಿಯನ್ನು ಕೊಟ್ಟು ಕಳಿಸಬೇಕು ಎನ್ನುವ ಮನೋಭಾವವಿಲ್ಲದೆ, ಅವರಿಗೆ ಬರುವ ಖಾಯಿಲೆಗಳನ್ನು ಸಂಶೋಧನಾ ದೃಷ್ಟಿಯಿಂದ ನೋಡಿದರೆ ಅವರೂ ಕೂಡ ಸಂಶೋಧನೆಗೆ ನೆರವಾಗಬಲ್ಲರು.

ವಿಶ್ವ ವಿದ್ಯಾನಿಲಯದಲ್ಲಿ ನಮ್ಮ ಪದವೀಧರರಿಗೆ ಮಾನ್ಯತೆಯ ವಿಧಾನವೇನು ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. Indian Medical Council ನವರು ಬಂದು ಹೋದರು. ಅವರು ಬಂದು ಹೋದಮೇಲೆ ಏನಾಯಿತು, ಎನ್ನುವುದು ನಮಗೆ ಗೊತ್ತಾಗಲಿಲ್ಲ. ಮತ್ತೆ ಅವರು ಕಾಲೇಜುಗಳಲ್ಲಿ ಒದಗಿಸತಕ್ಕ ಎಲ್ಲ ವಿಷಯಗಳು, ಉಪಕರಣಗಳು ಇವಕ್ಕೆಲ್ಲ ಅವರು ಒಪ್ಪಿಗೆಯನ್ನು ಕೊಟ್ಟಿದ್ದಾರೆಯೇ ಎಂದು ಕೇಳುತ್ತೇನೆ.

Physio Therapy ಪಾಸ್ ಮಾಡಿಕೊಂಡು ಬಂದವರಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಏನು ಅನುಕೂಲಗಳನ್ನು ಕಲ್ಪಿಸಿ ಕೊಟ್ಟಿದ್ದೀರಿ ? ಪದವೀಧರರಿಗೆ ಮಾನ್ಯತೆ ಕೊಡಬೇಕಾದರೆ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ಮೈಸೂರು ಸಂಸ್ಥಾನಕ್ಕೆ ಈ ತರಹ ನಿರ್ಬಂಧ ಮಾಡಬಹುದು. ಅಲ್ಲಿ ಒಂದು ಡಿಪ್ಲೊಮ ಕೋರ್ಸ್ ತೆಗೆಯಲು ಅವಕಾಶ ಕೊಡಬೇಕೆಂದು ಏನಾದರೂ ನಿರ್ಬಂಧವಿದೆ. ಅದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂಬುದಾಗಿ ಕೇಳುತ್ತೇನೆ.

ನಮ್ಮ ವಿಕ್ಟೋರಿಯಾ ಹಾಸ್ಪಿಟಲ್ಲನ್ನು ಮುಂದಕ್ಕೆ ತರುವಂತೆ ಡಿಸ್ಟ್ರಿಕ್ಟುಗಳಲ್ಲಿರುವ ಹಾಸ್ಪಿಟಲ್ಲುಗಳನ್ನು ಮುಂದಕ್ಕೆ ಬರುವ ಹಾಗೆ ಮಾಡಬೇಕು. ತಾಲ್ಲೂಕು ಹಾಸ್ಪಿಟಲ್ಲುಗಳನ್ನು ಚೆನ್ನಾಗಿರುವಂತೆ ಮಾಡಬೇಕು.

ಇಂಡಿಯಾ ದೇಶದ ವೈದ್ಯ ಪದ್ಧತಿಯ ಬಗ್ಗೆ ಒಂದೆರಡು ಮಾತನ್ನು ಹೇಳಿ ನನ್ನ ಮಾತನ್ನ ಮುಗಿಸುತ್ತೇನೆ.

ನಮ್ಮಲ್ಲಿ ಪಾಶ್ಚಾತ್ಯ ವೈದ್ಯ ಪದ್ಧತಿಗಳೇ ಅಲ್ಲದೆ, ಆಯುರ್ವೇದ, ಯುನಾನಿ ಅಲೋಪತಿ, ಹೋಮಿಯೋಪತಿ ಇವುಗಳೆಲ್ಲ ಇವೆ. ಇದಕ್ಕೆ ಸರಕಾರದವರು ಗಮನ ಕೊಡುತ್ತಿದ್ದಾರೆ. ಇವು ಸರಕಾರದ ಮನ್ನಣೆ ಪಡೆದ ಉಚಿತವಾದ ವೈದ್ಯ ಪದ್ಧತಿಗಳಾಗಿವೆ. ಇದು ಜನ ಸಾಮಾನ್ಯರಲ್ಲಿ ಹರಡಿ ಸರಕಾರದ ಮಾನ್ಯತೆ ಪಡೆಯದಿದ್ದರೂ ನೂರರಲ್ಲಿ ಎಂಭತ್ತು ಭಾಗದಷ್ಟು ಜನರಲ್ಲಿ ಇವು ಹರಡಿವೆ ಎನ್ನುವುದನ್ನು ಈ ಮಾನ್ಯ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಅದಕ್ಕಾಗಿ ಮಾನ್ಯ ಮಂತ್ರಿಗಳು ಈಗಲಾದರೂ ಇದಕ್ಕೆ ಗಮನ ಕೊಡುವುದು ಮುಖ್ಯವೆಂದು ನಾನು ತಿಳಿದು ಕೊಂಡಿದ್ದೇನೆ.

ನಮ್ಮ ದೇಶದಲ್ಲಿ Magic ಮಾಯ, ಮಾಟ ಇವುಗಳಿಂದ ಎಷ್ಟೋ ರೋಗ ವಾಸಿ ಮಾಡುವಂತಹ ಜನರಿದ್ದಾರೆ. ಒಬ್ಬ ವ್ಯಕ್ತಿಯಾದ ವೈದ್ಯಕೀಯ ಸಂಸ್ಥೆಯಲ್ಲೂ ತರಬೇತಿ ಹೊಂದದಿದ್ದಾಗೂ ಏನೋ ಒಂದು ಕಾಯಿಲೆಗೆ ಔಷಧಿ ಎಂದು ಕೊಡುತ್ತಾನೆ, ಹಾವು ಕಚ್ಚಿದವರಿಗೆ, ಇಸಬು

(ಶ್ರೀ ಕೆ. ಎಸ್. ಗೌಡಯ್ಯ)

ಬಂದವರಿಗೆ ಔಷಧಿ ಕೊಡುತ್ತಾನೆ, ಆದರೆ ಅದರಿಂದ ಏನಾದರೂ ಹೆಚ್ಚು ಕಡಿಮೆಯಾದರೆ ಆದನ್ನು ಸರಿಪಡಿಸುವುದಕ್ಕೆ ಬರುವುದಿಲ್ಲ. ಈ ತರಹ ಕೆಲವು ಔಷಧಿಗಳನ್ನು ಕೊಡತಕ್ಕ ವೈದ್ಯರುಗಳಿದ್ದಾರೆ. ಇದರಿಂದ ಏನಾದರೂ ಒಳ್ಳೆಯದಾಗುತ್ತದೆಯೇ ಎಂದು ನೋಡಬೇಕು. ನಮ್ಮ ಹಳ್ಳಿಗಳಲ್ಲಿ ಇಕ್ಕುಮದ್ದು ಎಂದರೆ ಗೋಸುಂಬೆ ಪ್ರಾಣಿಯನ್ನುಪಯೋಗಿಸಿ ಒಂದು ಮದ್ದನ್ನು ತಯಾರಿಸುತ್ತಾರೆ. ತಮಗೆ ಯಾರಾದರೂ ಬೇಡದವರಿದ್ದರೆ ಅಂತಹವರಿಗೆ ಊಟದಲ್ಲಿ ಆ ಇಕ್ಕ ಮದ್ದನ್ನು ಬೆರಸಿ ಹಾಕುತ್ತಾರೆ. ಇದರಿಂದ ಆ ಮನುಷ್ಯ ಬೇಗ ಸಾಯುವಂತೆ ಮಾಡುವುದಕ್ಕಾಗುವುದಿಲ್ಲ. ಆದಾಗ್ಯೂ, ಇದು ನಿಧಾನವಾಗಿ ಆರುತಿಂಗಳು, ಒಂದುವರ್ಷ, ಎರಡು ವರ್ಷಗಳ ಕಾಲ ಕಾಯಿಲೆಯಲ್ಲಿ ನರಳಿಸಿ ನಿಧಾನವಾಗಿ ಸಾವು ಬರುವಂತೆ ಮಾಡಲು ಅದೊಂದು ಮಾರ್ಗವಾಗಿರುತ್ತೆ. ಬಹಳವಾಗಿ ಅನೇಕ ಹಳ್ಳಿಗಳಲ್ಲಿ ಈ ರೀತಿಯಿದೆ. ನಮ್ಮ ಕಡೆ ಒಂದು ಹಳ್ಳಿಯಲ್ಲಿ ಈ ಇಕ್ಕುಮದ್ದನ್ನು ಉಪಯೋಗಿಸುತ್ತಿದ್ದಾರೆ. ಈಗಿರುವ ಕೆಲವಾರು ವೈದ್ಯ ಪದ್ಧತಿಗಳನ್ನೆಲ್ಲಾ ಕ್ರೋಢೀಕರಿಸಿ ಒಂದು ಸಮನ್ವಯ ಮಾಡಿ ರಾಷ್ಟ್ರೀಯ ವೈದ್ಯ ಪದ್ಧತಿಯಂತೆ ಜಾರಿಗೆ ತರಬೇಕೆಂದು ಸಲಹೆ ಮಾಡುತ್ತೇನೆ. ರಾಷ್ಟ್ರೀಯ ವೈದ್ಯ ಪದ್ಧತಿಯಲ್ಲಿ, ಅಲೋಪತ್ತಿ, ಹೋಮಿಯೋಪತ್ತಿ, ಆಯುರ್ವೇದ ಹಾಗೂ ಯುನಾನಿ ಹೀಗೆ ಇರುವ ಎಲ್ಲ ವೈದ್ಯ ಪದ್ಧತಿಗಳನ್ನು ಅದಷ್ಟು ಸೇರಿಸಿ ವೈದ್ಯ ಪದ್ಧತಿಯನ್ನು ಜಾರಿಗೆ ತಂದು ಇದನ್ನೇ ಶಿಕ್ಷಣ ಪದ್ಧತಿಯಲ್ಲೂ ಚೆನ್ನಾಗಿ ಅಳವಡಿಸಿ ಜನತೆಗೆ ಆ ಸೌಲಭ್ಯಗಳು ದೊರೆಯುವಂತೆ ಅನುಕೂಲ ಮಾಡಿಕೊಡಬೇಕು. ನಮ್ಮ ಜನರ ಆರೋಗ್ಯ ಉತ್ತಮ ವಾಗುವುದಲ್ಲದೆ ಅದನ್ನು ಅಭಿವೃದ್ಧಿ ಯಾಗುವಂತೆ ಪ್ರಯತ್ನಗಳನ್ನು ಮಾಡಬೇಕು ಎಂದು ಇಷ್ಟು ಹೇಳಿ ನಾನು ಮಾತನಾಡಲು ಇಷ್ಟು ಅವಕಾಶ ಮಾಡಿಕೊಟ್ಟುದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳು.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಮಾನ್ಯ ಸಭಾಧ್ಯಕ್ಷರೇ,

ನಮ್ಮ ಮುಂದಿಟ್ಟಿರುವ ಮೆಡಿಕಲ್ ಮತ್ತು ಹೆಲ್ತ್ ಬೇಡಿಕೆಗಳನ್ನು ಅನುಮೋದಿಸುತ್ತ ಕೆಲವು ಸಲಹೆಗಳನ್ನು ಕೊಡಬೇಕೆಂದು ನಿಂತಿದ್ದೇನೆ.

ಈ ಎರಡು ಬೇಡಿಕೆಗಳಿಗಾಗಿ ಬಡ್ಜೆಟ್ಟಿನಲ್ಲಿ ಕೊಟ್ಟಿರುವ ಹಣ ಸುಮಾರು ಆರು ಕೋಟಿಯಷ್ಟು ಇದ್ದರೂ ಎಲ್ಲ ಕೆಲಸಗಳನ್ನು ಮಾಡಲು ಈ ಮೊಬಲಗು ಸಾಲುತ್ತೋ ಇಲ್ಲವೋ ಎನ್ನುವ ಅನುಮಾನ ನನಗೆ ಇದೆ. ಮತ್ತು ಅದೇ ಯೋಚನೆಯಾಗಿದೆ. ಈ ಹಣದಲ್ಲಿ ಏನೇನು ಕಾರ್ಯಕ್ರಮ ಹಾಕಿಕೊಳ್ಳ ಬಹುದು ಮತ್ತು ನಾವು ಏನನ್ನು ಕೇಳಬಹುದು ಎಂಬುದು ಹೊಳೆಯುತ್ತಿಲ್ಲ ಬಹುಶಃ ನಿಮ್ಮ ಆರೋಗ್ಯವನ್ನು ನೀವೇ ನೋಡಿಕೊಂಡು ಹೋಗಿ ಎಂಬ ಭಾವನೆಯಿಂದಲೊ ಏನೋ ಈ ರೀತಿ ಇಲ್ಲಿ ಒದಗಿಸಿರುವ ಹಣ ಕಡಿಮೆ ಯಾಗಿರುತ್ತದೆಯೋ ಏನೋ ಎಂದು ನನಗೆ ಯೋಚನೆಯಾಗಿದೆ. ಕೆಲವು ಮಾನ್ಯ ಸದಸ್ಯರು ಈಗಾಗಲೇ ಮಾತನಾಡುತ್ತ ಹೇಳಿದ ಹಾಗೇ ಮೈಸೂರು ಯೂನಿವರ್ಸಿಟಿಯವರು ಕೊಡತಕ್ಕ ಎಂ. ಬಿ. ಬಿ. ಎಸ್. ಡಿಗ್ರಿಯನ್ನು ಆಲ್ ಇಂಡಿಯಾ ಮೆಡಿಕಲ್ ಕೌನ್ಸಿಲ್ಲಿನವರು ಯಾವಾಗ ರೆಕ್‌ಗ್ನೈಜ್ ಮಾಡುತ್ತಾರೆ ಎಂದು ಹೋದಬಾರಿ ನಾನೊಂದು ಪ್ರಶ್ನೆಯನ್ನು ಕೇಳಿದ್ದಕ್ಕೆ ಉತ್ತರವಾಗಿ ಬೇಗ ರೆಕ್‌ಗ್ನೈಜ್ ಆಗುತ್ತದೆ ಎಂಬುದಾಗಿ ಉತ್ತರಕೊಟ್ಟಿದ್ದರು. ಅದು ಹತ್ತಿರಕ್ಕೆ ಬಂದಿದೆಯೋ ? ಅಥವಾ ಈ ವರ್ಷದಲ್ಲಾದರೂ ಬರುತ್ತದೆಯೊ. ಈಗ ಡಾಕ್ಟರುಗಳಿಲ್ಲ ಎಂದು ಹೇಳುತ್ತಿದ್ದೀರಿ ಡಾಕ್ಟರುಗಳ ಅಭಾವವಿದೆ ಎನ್ನುವ ಈ ಸಮಯದಲ್ಲಿ ನಿವೃತ್ತಿ ಹೊಂದಿದ ಡಾಕ್ಟರುಗಳನ್ನೇಕೆ ನೀವು ರೀಅಪಾಯಿಂಟು ಮಾಡಿಕೊಳ್ಳಬಾರದು ? ಹೀಗೆ ಮಾಡಿದರೆ ಡಾಕ್ಟರುಗಳ ಅಭಾವವೂ ಕಡಿಮೆ ಯಾಗುತ್ತದೆ. ಬೇಕಾದಷ್ಟು ಡಾಕ್ಟರುಗಳೂ ಸಿಕ್ಕಿದ ಹಾಗಾಗುತ್ತದೆ. ಆಸ್ಪತ್ರೆಗಳಲ್ಲಿರುವ ಡಾಕ್ಟರುಗಳಿಗೆ ಪ್ರತಿಯೊಬ್ಬ ಸರ್ಜನ್ಸ್‌ರವರಿಗೂ ಒಂದೊಂದು ಫೋನನ್ನು ಪ್ರತ್ಯೇಕವಾಗಿ ಅವರಿಗೆ ಕೊಡಬೇಕು. ಯಾರು ಯಾರಿಗೋ ಚಿಲ್ಲರೆ ವ್ಯಾಪಾರಿಗಳಿಗೆಲ್ಲಾ ಈಗ ಫೋನುಗಳನ್ನು ಕೊಡುತ್ತಿರುವಾಗ ಈ ಸರ್ಜನ್ಸ್‌ಗಳಿಗೆ ಕೊಡಲು ಫೋನುಗಳಿಲ್ಲವೇ. ಸರ್ಜನ್ಸ್‌ಗಳಿಗೆ ಫೋನು ಅವಶ್ಯವಾಗಿರಬೇಕು. ಯಾರೋ ಸರ್ಜನ್ಸ್‌ಗಳು ಬೇಕೆಂದು ಕಳವಳದಿಂದ ಫೋನು ಮಾಡಿದರೆ ಅವರು ಸಮಯಕ್ಕೆ ಸರಿಯಾಗಿ ಫೋನಿನಲ್ಲಿ ಸಿಗದೇಹೋದರೆ, ನಿಧಾನವಾಗಿ ಈ ಸರ್ಜನ್ನುಗಳು ಬರುವವೇಳೆಗೆ ರೋಗಿ ಕೈಲಾಸವಾಗಸಿಯಾಗುತ್ತಾನೆ. ಆದುದರಿಂದ ಆಸ್ಪತ್ರೆಗಳಲ್ಲಿರುವ ಪ್ರತಿಯೊಬ್ಬ ಸರ್ಜನ್‌ಗಳಿಗೂ ಫೋನನ್ನು ಕೊಡಬೇಕೆಂದು ನಾನಿಲ್ಲಿ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಇನ್ನು ಲೇಡಿ ಡಾಕ್ಟರುಗಳಲ್ಲಿ ಕೆಲವರಿಗೆ ಅವರ ಪ್ರಮೋಷನ್ನಿನ ಬಗ್ಗೆ ಅನ್ಯಾಯವಾಗಿದೆ ಎಂದು ಕೇಳುತ್ತೇನೆ. ಇದರ ಬಗ್ಗೆ ಸರಿಯೇ ತಪ್ಪೇ ಎನ್ನುವುದನ್ನು ಪರಿಶೀಲನೆ ಮಾಡಿ ಈ ಲೇಡಿ

ಡಾಕ್ಟರುಗಳಿಗಿರುವ ಅಸಮಾಧಾನವನ್ನು ಹೋಗಲಾಡಿಸುವಂತೆ ನಾನು ಸರಕಾರದಲ್ಲಿ ವಿನಂತಿ ಮಾಡುತ್ತೇನೆ.

ಆರೋಗ್ಯದ ಇಲಾಖೆಯಲ್ಲಿ ಅಧಿಕಾರಿಗಳಲ್ಲೇ ಪಕ್ಷಪಾತ ಇರಬಾರದು ಇದರಿಂದ ಆಡಳಿತ ಕೆಟ್ಟು ಹೋಗುತ್ತದೆ. ದಕ್ಷರಾದ, ಅನುಭವವಿರುವಂತಹವರನ್ನು ಇಲ್ಲಿ ಅಧಿಕಾರಿಗಳಾಗಿ ಕೆಲಸ ಮಾಡಲು ನೇಮಿಸಿದರೆ ಅನುಕೂಲ ವಾಗುತ್ತದೆ. ಆ ರೀತಿ ಮಾಡುತ್ತಾರೆಂದು ಆಶಿಸುತ್ತೇನೆ.

ಮಹಿಳಾ ಡಾಕ್ಟರುಗಳೇ ಇಲ್ಲ ಎನ್ನುವಾಗ ಎಲ್ಲೋ ಒಂದುಕಡೆ ಒಬ್ಬ ಮಹಿಳಾ ಡಾಕ್ಟರವರಿದ್ದ ಭಾಗದಲ್ಲಿ ಅದೃಷ್ಟವಶಾತ್ ಈಗ ಅವರು ಸೂಪರಿಂಟೆಂಡೆಂಟರಾಗಿದ್ದಾರೆ. ಹಾಗೆ ಆಗುವುದೇ ಕಷ್ಟ. ಅಂತಹುದರಲ್ಲ ಅಲ್ಲಿಗೆ ಅವರ ತಲೆಯಮೇಲೆ ಒಬ್ಬ ಮಹನೀಯರನ್ನು ಹಾಕುತ್ತೀರಲ್ಲ ಯಾಕೆ ? ಆ ಮಹನೀಯರು ಮತ್ತು ಆ ಮಹಿಳೆ ಇಬ್ಬರೂ ಹೊಂದಿಕೊಂಡು ಕೆಲಸ ಮಾಡಿದರೆ ಸರಿ ಇಲ್ಲವಾದರೆ ಅಲ್ಲಿ ಉಂಟಾಗುವ ತಲೆನೋವು ನಿಮಗೆ ಬರುತ್ತದೆ.

ಇನ್ನು ಕುಟುಂಬ ಯೋಜನೆ ಇದು ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ ಎಂದು ನನ್ನ ಅನುಭವಕ್ಕೆ ಬಂದಿದೆ. ಇದನ್ನು ದೀರ್ಘವಾಗಿ ಪುನಃ ಪರಿಶೀಲನೆ ಮಾಡುವುದು ಅಗತ್ಯ ಎಂದ ನಾನು ಸಲಹೆ ಮಾಡುತ್ತೇನೆ.

ಈಸಾರಿ ಬಡ್ಜೆಟ್ಟು ಪುಸ್ತಕವನ್ನು ನೋಡಿದೊಡನೆ ಆ ಪುಸ್ತಕವನ್ನು ಚೆನ್ನಾಗಿ ತಿರುವಿಹಾಕಿದರೆ ನಮ್ಮ ಹಳ್ಳಿಗಳ ಕಡೆಗೆ ಏನೇನು ದೊರಕಿದೆ ಎನ್ನುವುದು ತಿಳಿಯುತ್ತೆ ಎಂದು ನೋಡಿದೆ. ನಮ್ಮ ಮಲೆನಾಡು ಭಾಗವಾದ ಶಿವಮೊಗ್ಗ ತಾಲ್ಲೂಕಿನ ಹಾರನಹಳ್ಳಿ ಹೋಬಳಿಯಲ್ಲಿ ಒಟ್ಟು ಸುಮಾರು 26,000 ಪ್ರಜಾ ಸಂಖ್ಯೆಇದೆ, ಇಲ್ಲಿ ಪ್ರೈವೇಟು ಡಾಕ್ಟರೊಬ್ಬರು, ಒಬ್ಬರು ಪಂಡಿತರು ಇದ್ದಾರೆ, ಇಂತಹ ಒಂದು ಜಾಗಕ್ಕೆ ಒಂದು ಆಸ್ಪತ್ರೆಯನ್ನು ಕಟ್ಟಿಸಿಕೊಡಬೇಕೆಂದು ಕೇಳಿದ್ದೆ. ಸರಕಾರ ಯಾವಾಗಲೂ ಉತ್ತರಕೊಡುವಂತೆ ಇದನ್ನು ಪರಿಶೀಲನೆ ಮಾಡುತ್ತೇವೆಂದು ಒಂದು ಭರವಸೆ ಕೊಟ್ಟಿದ್ದರು. ಇದರ ಬಗ್ಗೆ ಬಡ್ಜೆಟು ಪುಸ್ತಕವನ್ನು ನೋಡಿದಾಗ ಎಲ್ಲಿಯೂ ಏನೂ ಕಾಣಿಸಲಿಲ್ಲ. ಇದನ್ನು ಈ ವರ್ಷವಾದರೂ ಕೊಡುವುದಕ್ಕೆ ಮನಸ್ಸು ಮಾಡುತ್ತೀರಾ ? ಅಲ್ಲಿರುವವರು ಏನು ಹಣ ಕೊಡಬೇಕೆಂದು ಇಟ್ಟಿದ್ದೀರೋ ಅದನ್ನು ಕೊಡಲು ಸಿದ್ಧರಾಗಿದ್ದಾರೆ.

ಮೆಡಿಕಲ್ ಕಾಲೇಜಿನ ಬಗ್ಗೆ ಮಾನ್ಯ ಸದಸ್ಯರು ಈಗಾಗಲೇ ಹೇಳಿದರು ಶಿವಮೊಗ್ಗಕ್ಕೆ ಒಂದು ಮೆಡಿಕಲ್ ಕಾಲೇಜುಬೇಕೆಂದು ಮಾನ್ಯ ಸದಸ್ಯರಾದ ಶ್ರೀಮಾನ್ ದೇವೇಂದ್ರಪ್ಪನವರು ನಾನೂ ಕೇಳುತ್ತಲೇ ಇರುತ್ತೇನೆ. ದಯಮಾಡಿ ಈಗಲಾದರೂ ಒಂದು ಮೆಡಿಕಲ್ ಕಾಲೇಜನ್ನು ಶಿವಮೊಗ್ಗಕ್ಕೆ ಕೊಡಿ ಎಂದು ಪ್ರಾರ್ಥಿಸುತ್ತೇವೆ. ಜಾಗ್ರತೆ ಕೊಡಬಹುದು ಎಂದು ನಾನು ಆಶಿಸುತ್ತೇನೆ.

ಶಿವಮೊಗ್ಗದಲ್ಲಿ Tropical School of Medicine ಎನುವುದನ್ನು ಏಕೆ ಸ್ಥಾಪನೆಮಾಡ ಬಾರದು ? ಅಲ್ಲಿ ಎಲ್ಲ ಅನುಕೂಲವೂ ಇದೆ, ಹೆಲ್ತ್ ಲ್ಯಾಬೊರೇಟರಿ ಇದೆ. ತಾವೇ ಈಚೆಗೆ ಅದನ್ನು ಇಲ್ಲಿಗೆ ಬಂದು Open ಮಾಡಿದಿರಿ ಅಷ್ಟೆ ಅಲ್ಲ ಚೆನ್ನಾಗಿರುವ ಒಂದು ಒಳ್ಳೆಯ ಆಸ್ಪತ್ರೆ ಇದೆ. ಅಲ್ಲದೆ ಹಿಂದೆ ಮೆಡಿಕಲ್ ಕಾಲೇಜಿಗಾಗಿ ಇಟ್ಟಿದ್ದ 500 ಎಕರೆಯಷ್ಟು ಜಮೀನು ಹಾಗೆ ಇದೆ. ಇದನ್ನು ತಾವು ಪರಿಶೀಲನೆ ಮಾಡಬೇಕು ಎಂದು ತಮ್ಮಲ್ಲಿ ನನ್ನ ವಿನಂತಿ.

ಇನ್ನು ಪ್ರತಿಯೊಂದು ಡಿಸ್ಟ್ರಿಕ್ಟು ಹಾಸ್ಪಿಟಲ್‌ಗಳಿರುವ ಎಲ್ಲ ಕಡೆಗಳಲ್ಲಿಯೂ M.R.C.P.M.D. ಆಗಿರುವ physicians ಗಳು ಬೇಕು ಹಾಗೂ E.N.T. Specialists, Dental Surgeons, ಸ್ಪೆಷಲಿಸ್ಟುಗಳು ಬೇಕು. ಹೀಗಿರುವ ಡಾಕ್ಟರುಗಳನ್ನು ಹಾಕಿದರೆ ನಗರಗಳ ಆಸ್ಪತ್ರೆಗಳಿಗೆ ಹೊರಗಿನಿಂದ ಬರುವವರ ಧಾಳಿ ಕಡಿಮೆಯಾಗುತ್ತದೆ. ಹಳ್ಳಿಯ ಬಡರೈತರಿಗೂ ಅನುಕೂಲ ವಾಗುತ್ತದೆ ಮತ್ತು ಅವರಿಗೂ ತುಂಬಾ ಅನುಕೂಲವಾಗುತ್ತದೆ.

ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ, ನಮ್ಮ ರಾಜ್ಯದಲ್ಲಿ ಯಾವ ಒಂದು ಸಂಶೋಧನೆಯೂ ರೋಗಗಳ ಬಗ್ಗೆ ನಡೆಯುತ್ತಿಲ್ಲ. ಇಷ್ಟೆಲ್ಲಾ ಅನುಕೂಲಗಳಿರುವಾಗ ತಾವು ಇದನ್ನೇಕೆ ಮಾಡಬಾರದು ? ಇದನ್ನು ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಮೆಡಿಕಲ್ ಮತ್ತು ಹೆಲ್ತ್ ಎರಡನ್ನು ಸೇರಿಸಿ ಒಂದೇ ಸಂಸ್ಥೆಮಾಡಿ ಒಬ್ಬರೇ ಡೈರೆಕ್ಟರನ್ನು ಮಾಡುವುದರ ಬಗ್ಗೆ ಏನಾಯಿತು.

ಮೆಡಿಕಲ್ ಕಾಲೇಜುಗಳಲ್ಲಿ ಹುಡುಗರನ್ನೇ ಪಾಠ ಹೇಳಲು ಕಳುಹಿಸುತ್ತಿದ್ದಾರೆ. ಇದಕ್ಕೆ ಬದಲಾಗಿ ಇಲ್ಲಿಗೆ ಅನುಭವಸ್ಥರಾದ ಡಾಕ್ಟರುಗಳನ್ನು ಹಾಕಬೇಕೆಂದು ನಾನು ಹೇಳುತ್ತೇನೆ. ಹುಡುಗರನ್ನೇ ಇಲ್ಲಿಗೆ ಹಾಕಿದರೆ ಸರಿಯಾಗುವುದಿಲ್ಲ. ಹುಡುಗರು ಗುರುಗಳು ಒಂದೇ ವಯಸ್ಸಿನವರಾದರೆ, ಏನು ಪ್ರಯೋಜನ ವಾಗುತ್ತದೆ ? ಹುಡುಗರನ್ನು ಹಾಕಿದರೆ ಅದು ಬರೀ ಹುಡುಗಾಟವಾಗುತ್ತದೆ. ಅಲ್ಲದೆ M.B.B.S. ಪಾಸುಮಾಡಿದ ತಕ್ಷಣ ಇವರನ್ನು ಟೀಚರಾಗಿ ಹಾಕಿದರೆ ಸರಿಯೇ ? ದೇಶದ ಜನತೆಯ ಆರೋಗ್ಯದ ಆಧಾರಸ್ತಂಭಗಳೆನಿಸಿದ ಇವರು ಸರಿಯಾದ ಪರಿವೇತ್ತರಾಗಿರಬೇಡವೇ ? ಇಲ್ಲಿ ಅನುಭವಸ್ಥ ಡಾಕ್ಟರುಗಳನ್ನು ಹಾಕುವುದೊಳ್ಳೆಯದು.

(ಶ್ರೀಮತಿ ರತ್ನಮ್ಮ ಮಾಧವರಾವ್)

ಬೆಂಗಳೂರು ನಗರದಲ್ಲಿಯ ಆಸ್ಪತ್ರೆಯ ಬಗ್ಗೆ ಎರಡು ಮಾತು ಹೇಳಲಿಚ್ಛಿಸುತ್ತೇನೆ. ವಿಕ್ಟೋರಿಯಾ ಮತ್ತು ವಾಣಿವಿಲಾಸ ಆಸ್ಪತ್ರೆಗಳಲ್ಲಿ ವಿಜಿಟರ್ಸ್ ಬೋರ್ಡನ್ನು ಇನ್ನೂ ಯಾಕೆ ಮಾಡಿಲ್ಲ? ಇದರಲ್ಲಿ ಇರುವ ತೊಂದರೆ ಏನು? ಹೊರಗಡೆಯಿಂದ ಬರುವ ರೋಗಿಗಳಿಗೆ ನೇರವಾಗಿ ಡಾಕ್ಟರರನ್ನು ನೋಡುವದಕ್ಕಾಗುವುದಿಲ್ಲ. ಡಾಕ್ಟರರು ಸಿಕ್ಕುವುದಿಲ್ಲ. ಯಾರ ಮುಖಾಂತರ ವಾದರೂ ಡಾಕ್ಟರರನ್ನು ನೋಡಬೇಕಾಗುತ್ತದೆ. ವಿಜಿಟರ್ಸ್ ಇದ್ದರೆ ಅವರ ಮುಖಾಂತರವಾದರೂ ಡಾಕ್ಟರರನ್ನು ನೋಡಬಹುದು. ಇದನ್ನು ಜಾಗ್ರತೆ ಮಾಡಬೇಕೆಂದು ಸೂಚಿಸುತ್ತೇನೆ.

ಆಸ್ಪತ್ರೆಗಳಲ್ಲಿ ಔಷಧಿ ಇಂಜೆಕ್ಷನ್ಸ್ ಸಿಕ್ಕದೆ ಡ್ರಗ್ಸ್ ಕಳ್ಳಸಂತೆಯಲ್ಲಿ ವ್ಯಾಪಾರವಾಗುತ್ತಿವೆ. ಒದಗಿದ ಔಷಧಿ ಇಂಜೆಕ್ಷನ್ ಎಲ್ಲಿ ಹೋಗುತ್ತವೆ, ಹೇಗೆ ಹೋಗುತ್ತವೆ, ರೋಗಿಗಳಿಗೆ ಏಕೆ ಸಿಕ್ಕುವುದಿಲ್ಲ ಎನ್ನುವುದನ್ನು ತನಿಖೆ ಮಾಡಬೇಕಾದುದು ಅಗತ್ಯ.

ಈಗ ಆಸ್ಪತ್ರೆಗಳಲ್ಲಿ ತೊಂದರೆ ಜಾಸ್ತಿಯಾಗಿದೆ. ನಾನು ಇಲ್ಲಿಗೆ ಬಂದ ಮೇಲೆ ನನ್ನ ಸ್ನೇಹಿತೆಯೊಬ್ಬರು ಅನಾರೋಗ್ಯದಿಂದ ವಾಣೀವಿಲಾಸ ಆಸ್ಪತ್ರೆಯಲ್ಲಿದ್ದವರನ್ನು ನೋಡಬೇಕಾಗಿ ಬಂತು. ನಾನು ಅಲ್ಲಿಗೆ ಹೋಗಿದ್ದೆ. ಆಗ ನನಗೆ ಅಲ್ಲಿಯ ಕಷ್ಟ ಪರಿಸ್ಥಿತಿಯ ಅರಿವಾಯಿತು. 4 ಜನ ಸೀರಿಯಸ್ ಆದ ಪೇಷಂಟ್ಸ ಇದ್ದರು. ಇಬ್ಬರು ನರ್ಸಗಳು ಒಬ್ಬ ಡಾಕ್ಟರು ಇದ್ದರು. ಆಗ್ಯೆ ಸುಮಾರು ರಾತ್ರಿ ಒಂಬತ್ತು ಗಂಟೆಯಾಗಿತ್ತು ಈ ಮೂರು ಜನ ಏನು ಮಾಡುವುದಕ್ಕಾಗುತ್ತದೆ? ಡಾಕ್ಟರರು ಕಣ್ಣು ಕಣ್ಣು ಬಿಡಬೇಕು ಅಷ್ಟೇ. ಏನಾದರು ಹೆಚ್ಚು ಕಡಿಮೆಯಾದರೆ ಅವರ ಗತಿಯೇನು! ನಮ್ಮಂಥವರೇ ಬಂದು ನಿಮ್ಮಲ್ಲಿ ಡಾಕ್ಟರರ ಮೇಲೆ ಕಂಪ್ಲೇಟ್ ಮಾಡುತ್ತೇವೆ. ಅಲ್ಲಿ ನಾವು ಕಣ್ಣಾರೆ ನೋಡಿದರೆ ಆ ಡಾಕ್ಟರರು ಪರಿಸ್ಥಿತಿ ಏನು ಎಂದು ಅನ್ನಿಸುತ್ತದೆ. ಈಗ ಆಸ್ಪತ್ರೆಗಳಲ್ಲಿ ನರ್ಸಸ್ ಅಭಾವ ಬಹಳವಾಗಿದೆ. ಅದರಲ್ಲಿಯೆ ವಾಣಿವಿಲಾಸ ಆಸ್ಪತ್ರೆಯಂಥ ಮಹಿಳೆಯರ ಆಸ್ಪತ್ರೆಯಲ್ಲಿ ಹೆಚ್ಚಾಗಿ ಡಾಕ್ಟರ್ ನರ್ಸಸ್ ಇರಬೇಕು. ನರ್ಸಸ್ ಟ್ರೇನಿಂಗ್ ಸೆಂಟರ್ ಈ ಊರಿನಲ್ಲಿ ಇದ್ದುದನ್ನು ಅಬಾಲಿಷ್ ಮಾಡಲು ಕಾರಣವೇನು? ಮೊದಲು ಇಂಥ ಟ್ರೇನಿಂಗ್ ಸೆಂಟರ್ ಪ್ರಾರಂಭಿಸುವುದೇ ಕಷ್ಟ. ಇರುವಂಥಾದ್ದನ್ನು ಅಬಾಲಿಷ್ ಮಾಡಿದ್ದು ಏಕೆ? ಇದರ ಪರಿಣಾಮವಾಗಿ ನರ್ಸಸ್ ಅಭಾವ ಜಾಸ್ತಿಯಾಗಿದೆ. ಚಾಮರಾಜ ಪೇಟೆಯಲ್ಲಿ ನರ್ಸಸ್‌ಗೆ ಅಂತಾ ಕೆಲವು ಮನೆಗಳನ್ನು ಕಟ್ಟಿಸಿದ್ದೀರಿ. ಅವುಗಳನ್ನು ಯಾವಾಗ ಕಟ್ಟಿದ್ದು? ಎಷ್ಟು ದಿನಗಳಿಂದ ಖಾಲಿಯಾಗಿದೆ? ಇದರಿಂದ ಎಷ್ಟು ನಷ್ಟವಾಯಿತು? ಅಲ್ಲಿರಲು ನರ್ಸಸ್ ಒಪ್ಪಿದ್ದಾರೆಯೆ? ಆ ಮನೆಗಳಿಗಾಗಿ ಆಗಿರುವ ಖರ್ಚು ಎಷ್ಟು? ಈ ವಿವರ ದಯವಿಟ್ಟು ತಿಳಿಸಬೇಕು. ಆಸ್ಪತ್ರೆಗಳಲ್ಲಿ ಡಾಕ್ಟರುಗಳ ನರ್ಸುಗಳ ಸೌಕರ್ಯ ಒದಗಿಸದಿದ್ದಲ್ಲಿ ಆಸ್ಪತ್ರೆಗಳ ಬಗ್ಗೆ ದೂರು ತುಂಬಾ ಜಾಸ್ತಿಯಾಗುತ್ತದೆ. ಇದರಿಂದ ಜನತೆಗೆ ತುಂಬಾ ಅನ್ಯಾಯ ಮಾಡಿದಂತಾಗುತ್ತದೆ.

ವಾಣಿವಿಲಾಸ ಆಸ್ಪತ್ರೆಯಲ್ಲಿ ಇನ್ನೊಂದು ವಿಚಿತ್ರ ಪದ್ಧತಿಯಿದೆ. ಅದನ್ನು ಹೇಳುವುದು ಮರೆತಿದ್ದೆ. ಅದು ಅಂದರೆ ಯೂನಿಟ್ ಸಿಸ್ಟಮ್ ಈ ಯೂನಿಟ್ ಸಿಸ್ಟಮ್ ಮಾಡಿ ಎಷ್ಟು ದಿನವಾಯಿತು? ಇದರಿಂದ ಯಾವ ಅನುಕೂಲವಿಲ್ಲ. ಒಂದು ಯೂನಿಟ್ಟಿಗೆ ಒಬ್ಬ ಪೇಶಂಟ್ ಸೇರಿಸಿದ ಮೇಲೆ ಅದೇ ಯೂನಿಟ್ಟಿನ ಡಾಕ್ಟರ್ ಬಂದು ನೋಡಬೇಕು. ಪ್ರಾಣ ಹೋಗುವ ಸಮಯ ಬಂದರೂ ಇನ್ನೊಬ್ಬ ಡಾಕ್ಟರ್ ಬಂದು ನೋಡುವುದಿಲ್ಲ.

[MR. SPEAKER in the Chair.]

A B C D ಅಂತಾ ಯೂನಿಟ್ಟುಗಳಿವೆ. ಇದನ್ನು ನೀವು ಮಾಡಿದ್ದಿರಾ? ಅಥವಾ ಸರಕಾರ ಮಾಡಿದೆಯೆ? ಅವರೇ ಮಾಡಿಕೊಂಡಿದ್ದಾರೆಯೆ? ಇದನ್ನು ಯಾರು ಮಾಡಿದರು ತಿಳಿಸಬೇಕು. ಇದರಿಂದ ರೋಗಿಗಳ ಕೊರತೆಯಾಗುತ್ತಿದೆಯಲ್ಲ! ನಾವು ರೋಗಿಗಳನ್ನು ಆಸ್ಪತ್ರೆಗೆ ಯಾಕೆ ಸೇರಿಸಬೇಕು? ಹಿಂದಕ್ಕೆ ಈ ಸಿಸ್ಟಮ್ ಇರಲಿಲ್ಲ. ದಯವಿಟ್ಟು ಈ ಯೂನಿಟ್ ಸಿಸ್ಟಂನ್ನು ತೆಗೆದು ಹಾಕಬೇಕು. ಮಂತ್ರಿಗಳ ಮನೆಯವರು ಕೂಡ ಆಸ್ಪತ್ರೆಗೆ ಹೋಗಿದ್ದಾರೆ ಇದು ಅವರಿಗೆ ಗೊತ್ತಿದೆ. ಹಿಂದಕ್ಕೆ ಯಾವ ಕೆಸ್ ಆದರೂ RMO ಆಗಿದ್ದವರು ನೋಡಲೇ ಬೇಕಾಗಿತ್ತು. ದಯಮಾಡಿ ಈ ಯೂನಿಟ್ ಸಿಸ್ಟಂನ್ನು ವಜಾಮಾಡಿ. ಇದಕ್ಕೆ ಸರಿಯಾದ ವಿವರ ಮಾನ್ಯಮಂತ್ರಿಗಳು ಉತ್ತರದಲ್ಲಿ ಕೊಡಬೇಕು.

ಈ ವರ್ಷ MD course ಇಲ್ಲಿ ತೆಗೆದಿರುವದಕ್ಕಾಗಿ ನಾನು ಅಭಿನಂದಿಸುತ್ತೇನೆ.

ಇತ್ತೀಚೆಗೆ ಲೇಡಿ ಡಾಕ್ಟರರ ಅವಶ್ಯಕತೆ ಹೆಚ್ಚಿದೆ. ಆದರೆ ಲೇಡಿ ಡಾಕ್ಟರವರ ಅಭಾವ ಬಹಳ ವಾಗಿದೆ. ಮೆಡಿಕಲ್ ಕಾಲೇಜಿನಲ್ಲಿ ಲೇಡಿ ಡಾಕ್ಟರರಿಗೆ ಹೆಚ್ಚು ಸೀಟು ಕೊಡಬೇಕು. ಲೇಡಿ ಡಾಕ್ಟರರ ಪ್ರವೇಶದ ಬಗ್ಗೆ ಆಗುವ ಅನ್ಯಾಯ ಪರಿಶೀಲಿಸಬೇಕು.

ಗ್ರಾಮಾಂತರ ಪ್ರದೇಶಗಳಲ್ಲಿ ಆಸ್ಪತ್ರೆ ಹೆಲ್ತ್ ಯುನಿಟ್ ಇವುಗಳ ಕಡೆ ಹೆಚ್ಚು ಗಮನ ಕೊಡ ಬೇಕಾದುದು ಅಗತ್ಯ. ಅವಶ್ಯಕವಾದ ಔಷಧಿ ಸಾಮಾಗ್ರಿಗಳನ್ನು ಒದಗಿಸಿ ಕೊಡಬೇಕು. ಮಲೆ ನಾಡು ಹಳ್ಳಿಗಳ ಪ್ರದೇಶ. ಕೇಳುವುದು ತುಂಬಾ ಇದೆ. ಹಳ್ಳಿಗಳ ಕಡೆ ಬಹಳ ಬೇಕಾಗಿವೆ. ಒಟ್ಟಿಗೆ ಕೇಳಿದರೆ ಎಲ್ಲಿ ಕೊಡುತ್ತೀರಿ? ಆದ್ದರಿಂದ ಒಂದೊಂದಾಗಿ ಕೇಳಬೇಕಾಗಿದೆ. ಮಾನ್ಯ ಆರೋಗ್ಯ ಮಂತ್ರಿಗಳು ಸಹನೆಯಿಂದ ಕೂಡಿದ ಶಾಂತ ಮೂರ್ತಿಯವರಾಗಿದ್ದಾರೆ. ಮಲೆನಾಡಿನ ಕಡೆ ಹೆಚ್ಚು ಗಮನ ಕೊಟ್ಟು ನಮ್ಮ ಹಾರನಹಳ್ಳಿಗೆ ಬಂದು ಆಸ್ಪತ್ರೆ ಕೊಡಬೇಕೆಂದು ಕೇಳಿಕೊಳ್ಳು ತ್ತೇನೆ ಈ ಬೇಡಿಕೆಗೆ ನನ್ನ ಸಂಪೂರ್ಣ ಬೆಂಬಲ ಕೊಟ್ಟು ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸು ತ್ತೇನೆ. ಇಷ್ಟು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

Mr. SPEAKER.—May I know how much time the Minister would require to reply?

Sri K. NAGAPPA ALVA.—About one hour and fifteen minutes, Sir.

Mr. SPEAKER.—I suggest that the debate may go on till One o'clock today and the Hon'ble Minister will reply on Monday. Will it suit the Minister and the House?

Sri K. NAGAPPA ALVA.—Yes, Sir.

Mr. SPEAKER.—Yes; now the debate will continue.

ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರೀಬಿದನೂರು).—ಮಾನ್ಯ ಸಭಾಪತಿಗಳೇ, ನಮ್ಮ ಜನತೆಗೆ ಬೇಕಾದುದು ಆರೋಗ್ಯ ಸಂಪತ್ತು. ಆರೋಗ್ಯದಂಥ ವಸ್ತು ಯಾವುದು ಇಲ್ಲ. ಆರೋಗ್ಯವಂತ ರಾಗುವುದಕ್ಕೆ ಪುಷ್ಟಿಕರವಾದ ಆಹಾರ ಬೇಕಾಗುತ್ತದೆ. ನಮ್ಮ ಬದುಕು ಸುಖವಾಗಿ ಸಂತೋಷ ವಾಗಿ ಆಗಬೇಕಾದರೆ ಆರೋಗ್ಯ ಭಾಗ್ಯ ಬೇಕು. ಈ ಸೌಲಭ್ಯ ನಮ್ಮ ದೇಶದಲ್ಲಿಲ್ಲ. ಹೊಟ್ಟೆಗೆ ಸರಿಯಾದ ಆಹಾರವಿಲ್ಲದೆ ಹೆಚ್ಚು ಶ್ರಮಪಟ್ಟು ದುಡಿಯುವದರಿಂದ ಅನೇಕರು ಕಾಹಿಲೆ ಬೀಳುತ್ತಾರೆ ಎನ್ನುವದನ್ನು ಆಸ್ಪತ್ರೆಗಳಲ್ಲಿ ನಾನು ನೋಡಿದ್ದೇನೆ. ಹಳ್ಳಿಗಳಲ್ಲಿ ಕಾಹಿಲೆ ಜಾಸ್ತಿಯಾಗುತ್ತಾ ಇದೆ. ಆಸ್ಪತ್ರೆಗಳಲ್ಲಿ ಸೌಲಭ್ಯ ಕಡಿಮೆ. ನಮ್ಮ ತಾಲ್ಲೂಕಿನಲ್ಲಿ ಹೆಸರಿಗೆ ನಾಲ್ಕೈದು ಆಸ್ಪತ್ರೆಗಳಿವೆ. ಆದರೆ ಅಲ್ಲಿ ಡಾಕ್ಟರರು ಇಲ್ಲ. ಒಂದು ಹಳ್ಳಿಯಿಂದ 8-10 ಮೈಲಿ ನಡೆದುಕೊಂಡು ಆಸ್ಪತ್ರೆಗೆ ಹೋಗಬೇಕಾಗುತ್ತದೆ. ಅಲ್ಲಿಗೆ ಹೋದರು ಸಹ ಸರಿಯಾದ ಔಷಧಿ ಇರುವದಿಲ್ಲ. ಆಸ್ಪತ್ರೆಯಿಂದ ಇಂಡೆಂಟ್ ಮಾಡಿದರು ಕಾಲಕ್ಕೆ ಸರಿಯಾಗಿ ಔಷಧಿ ಬರುವದಿಲ್ಲ. ಔಷಧಿ ಬರಲು ತಡವಾಗುತ್ತದೆ. ಆದುದರಿಂದ ಇಂಡೆಂಟ್ ಮಾಡಿ ತಕ್ಷಣ ಔಷಧಿಗಳನ್ನು ಕಳಿಹಿಸಿ ಕೊಡಬೇಕು. ಕಡಿಮೆ ಔಷಧಿ ಕಳಿಸುವುದರಿಂದ, ಸರಿಯಾದ ಚಿಕಿತ್ಸೆ ನಡೆಯುವುದಿಲ್ಲ ಇದನ್ನು ಸರಿಪಡಿಸಬೇಕು.

ಇನ್ನು ಹಳ್ಳಿಗಾಡಿನ ಪ್ರದೇಶದಲ್ಲಿ ಚಿಕಿತ್ಸೆ ನಡೆಸಲು ಒಂದು ತಾಲ್ಲೂಕಿನಲ್ಲಿ ಒಂದು ಸಣ್ಣ ಎಕ್ಸರೆ ಯಂತ್ರ ಇಡುವ ವ್ಯವಸ್ಥೆ ಮಾಡಬೇಕು. ಇದಲ್ಲದೆ ಮೈನರ್ ಆಪರೇಷನ್ನಿಗಾಗಿ 10-20 ಮೈಲಿ ದೂರ ಹೋಗಬೇಕಾಗುತ್ತದೆ. ಇಲ್ಲದೆ ಬೆಂಗಳೂರಿಗೆ ಬರಬೇಕಾಗುತ್ತದೆ. ಆದುದರಿಂದ ಈ ತೊಂದರೆ ತಪ್ಪಿಸಲು ಸಣ್ಣ ಸಣ್ಣ ಆಪರೇಷನ್ ಮಾಡಲು ಅದಕ್ಕೆ ಬೇಕಾಗುವ ಸಲಕರಣೆಗಳನ್ನು ಒದಗಿಸಿ ಅನುಕೂಲ ಮಾಡಿಕೊಡಬೇಕು. ಅನೇಕ ಕಡೆ ಆಪರೇಷನ್ ಮಾಡುವುದಕ್ಕೆ ಡಾಕ್ಟರರ ಅಭಾವವಿರುತ್ತದೆ. ಮೆಡಿಕಲ್ ಕಾಲೇಜಿನಿಂದ ಪಾಸಾದ ತಕ್ಷಣ ಎರಡು ವರ್ಷ ಟ್ರೈನಿಂಗ್ ಪಡೆದರೆ ರೋಗಿಗೆ ಸರಿಯಾಗಿ ಔಷಧಿ ಕೊಡುತ್ತಾರೆ. ಅನುಭವಸ್ಥ ಡಾಕ್ಟರರನ್ನು ನೇಮಕ ಮಾಡ ಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯ. ಆಸ್ಪತ್ರೆಗಳನ್ನು ಪ್ರಾರಂಭಿಸುವುದಕ್ಕೆ ಅನೇಕರು ಡೊನೇಷನ್ಸ್ ಕೊಡುತ್ತಾರೆ. ಒಂದು ವಾರ್ಡ ಕಟ್ಟಿಸಲು ನಮ್ಮ ತಾಲ್ಲೂಕಿನವರೊಬ್ಬರು 5000 ರೂಪಾಯಿ ಡೋನೇಷನ್ ಕೊಟ್ಟಿದ್ದಾರೆ. ಆದರೆ ಸರಕಾರದವರು ಈ ಬಗ್ಗೆ ಮುತವರ್ಜಿ ವಹಿಸಿಲ್ಲ. ಅದಕ್ಕೆ ಏನೇನು ಬೇಕೋ ಅದನ್ನು ಕೊಟ್ಟು ವಾರ್ಡ ಕಟ್ಟಿಸಿ ಕೊಡಬೇಕು. ನಮ್ಮ ತಾಲ್ಲೂಕಿನವರೊಬ್ಬರು ಬೆಂಗಳೂರಿನಲ್ಲಿ ಆಸ್ಪತ್ರೆಗಾಗಿ 30 ಸಾವಿರ ರೂಪಾಯಿ ಕೊಟ್ಟಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಒಂದು ಕಣ್ಣಾಸ್ಪತ್ರೆ ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದನ್ನು ಮಾನ್ಯ ಮಂತ್ರಿಗಳು ನೋಡಬೇಕು. ಈ ವಿಚಾರದಲ್ಲಿ ಅವರಿಗೆ ಒಂದು ಅರ್ಜಿ ಕೊಡಲು ಯೋಚಿಸುತ್ತೇವೆ, ಜಾಗ್ರತೆ ಆಸ್ಪತ್ರೆ ಪ್ರಾರಂಭ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಶ್ರೀ ಆರ್. ಎನ್. ಲಕ್ಷ್ಮೀಪತಿ)

ಸಾಮಾನ್ಯವಾಗಿ ಹಳ್ಳಿಗಳಿಗೆ ಆಸ್ಪತ್ರೆಯೆಂದರೆ ಪ್ರತಿಯೊಂದು ಹೋಬಳಿ ಹೆಡ್‌ಕ್ವಾರ್ಟರ್ಸಿನಲ್ಲಿ ಮಾಡಬೇಕೆಂಬ ಪ್ಲಾನ್ ಇಟ್ಟುಕೊಂಡಿದ್ದಾರೆ. ಹಳ್ಳಿಯಲ್ಲಿರುವ ರೋಗಿ ಗವರ್ನ್‌ಮೆಂಟ್ ಆಸ್ಪತ್ರೆಯ ಔಟ್-ಪೇಷಂಟ್ ಡಿಪಾರ್ಟ್‌ಮೆಂಟಿಗೆ ಹೋಗಬೇಕಾದರೆ ಈಗ ಎಂಟು ಹತ್ತು ಮೈಲಿ ನಡೆದು ಹೋಗುತ್ತಾನೆ. ರೋಗ ಬಂದಿರತಕ್ಕವನಿಗೆ ನಡೆಯುವುದಕ್ಕೆ ಶಕ್ತಿ ಇರುವುದಿಲ್ಲ. ಆದ್ದರಿಂದ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದು ಮೊಬೈಲ್ ವ್ಯಾನ್ ಇಡಬೇಕು. ಪ್ರತಿಯೊಂದು ಊರಿಗೆ ಅಥವ ಒಂದೆರಡು ಊರು ಸೇರಿಸಿ, ಒಂದು, ಒಂದುವರೆ ಮೈಲಿಗಳಿಗೆ ಒಂದು ನಿರ್ದಿಷ್ಟವಾದ ಸ್ಥಳ ಏರ್ಪಡಿಸಿ, ಅಲ್ಲಿಗೆ ರೋಗಿಗಳು ಬರುವಂತೆ ಮಾಡಿ, ಡಾಕ್ಟರ್ ಹೋಗಲು ಸಾಧ್ಯವಿಲ್ಲದಂಥ ಮನೆಯಲ್ಲಿರುವ ರೋಗಿಗಳನ್ನು ಡಾಕ್ಟರಿರುವಕಡೆಗೆ ವ್ಯಾನಿನಲ್ಲಿ ಕರೆದುಕೊಂಡು ಹೋಗಿ, ಅವರಿಗೆ ವೈದ್ಯಕೀಯ ಚಿಕಿತ್ಸೆ ಸಿಗುವ ಹಾಗೆ ಮಾಡಿ ಕೊಡಬೇಕು.

11-30 A.M.

ಈಗ ಡಾಕ್ಟರುಗಳಿಗೆ ಹೆಚ್ಚಿನ ಸಂಬಳ ಕೊಡದೆ ಇರುವುದರಿಂದ ಆಸ್ಪತ್ರೆಗೆ ಬರುವ ರೋಗಿಗಳಿಗೆ ಸರಿಯಾದ ಚಿಕಿತ್ಸೆ ದೊರೆಯುವುದಿಲ್ಲ. ತಮಗೆ ದುಡ್ಡು ಎಲ್ಲಿಂದ ಬರುತ್ತದೆಯೋ ಆಕಡೆ ಜಾಸ್ತಿ ಗಮನ ಕೊಡುತ್ತಾರೆ. ಅಂದರೆ private practiceಗೆ ಹೆಚ್ಚು ಮುತುವರ್ಜಿ ವಹಿಸುತ್ತಾರೆ. ತಮಗೆ ಅನುಕೂಲವಾಗುವ ದೃಷ್ಟಿಯಿಂದ ರೋಗಿಗಳನ್ನು ನೋಡಿಕೊಳ್ಳುತ್ತಾರೆ. ಈ ಮನೋಭಾವವನ್ನು ಡಾಕ್ಟರುಗಳಲ್ಲಿ ತಪ್ಪಿಸಬೇಕು. ಮಾನವ ಜನ್ಮ ಎತ್ತಿರುವುದು ಮನುಷ್ಯನ ಸೇವೆಗೆ, ಈ ಒಂದು ಸೇವೆ ಮಾಡುವ ಅವಕಾಶ ಹೆಚ್ಚಾಗಿ ಇರುವುದು ಡಾಕ್ಟರುಗಳಿಗೆ. ಇಂಥ ಒಂದು ಉತ್ಕೃಷ್ಟವಾದ ಸೇವೆ ಮಾಡುವ ಅವಕಾಶ ಇನ್ನಾವವ್ಯಕ್ತಿಗೂ ಸಿಗುವುದಿಲ್ಲ ಎಂದು ಅವರು ತಿಳಿದುಕೊಳ್ಳಬೇಕು. ಪ್ರತಿಯೊಂದು ರೋಗಗ್ರಸ್ತ ಜೀವಿಗೂ ಚಿಕಿತ್ಸೆ ಮಾಡಿ ಆರೋಗ್ಯವನ್ನು ಗುಣಪಡಿಸುವ ಒಂದು ವೈದ್ಯಕೀಯ ಶಕ್ತಿಯನ್ನು ಡಾಕ್ಟರುಗಳಿಗೆ ದೇವರು ಕೊಟ್ಟಿದ್ದಾನೆ. ಮಾನವ ಸೇವೆ ಮಾಡುವುದಕ್ಕೆ ಇರುವ ಈ ಉತ್ಕೃಷ್ಟ ಸದವಕಾಶವನ್ನು ಪ್ರತಿಯೊಬ್ಬ ಡಾಕ್ಟರೂ ಉಪಯೋಗಿಸಿಕೊಂಡು ತನ್ನ ಆತ್ಮ ಕಲ್ಯಾಣಕ್ಕೆ ಪ್ರಯತ್ನ ಮಾಡಬೇಕು. ಡಾಕ್ಟರುಗಳಿಗಾದರೂ ಪ್ರತಿಯೊಬ್ಬ ರೋಗಿಗು ಜಾಸ್ತಿಗಮನ ಕೊಡುವುದು ಕಷ್ಟ! ರೋಗಿಗಳು ಅಷ್ಟು ದೊಡ್ಡ ಪ್ರಮಾಣದಲ್ಲಿ ಬರುತ್ತಾರೆ, ಆಸ್ಪತ್ರೆಗಳಿಗೆ. ವಿಕ್ಟೋರಿಯ ಮತ್ತು ಬೌರಿಂಗ್ ಆಸ್ಪತ್ರೆಗಳಲ್ಲಿ ರೋಗಿಗಳ ದೊಡ್ಡ ಕ್ಯೂ ಇರುತ್ತದೆ. ಐನೂರು ಆರುನೂರು ಜನ ಇರುತ್ತಾರೆ. ಒಬ್ಬೊಬ್ಬ ಪೇಷಂಟಿಗೆ ಒಂದು ನಿಮಿಷದಂತೆ ಲೆಕ್ಕಾ ಹಾಕಿದರೆ, ದಿನವೆಲ್ಲಾ ನೋಡಿದರೂ ಡಾಕ್ಟರುಗಳು ಅವರನ್ನು ನೋಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ದೊಡ್ಡ ದೊಡ್ಡ ಆಸ್ಪತ್ರೆಗಳನ್ನು ಜಾಸ್ತಿ ಮಾಡಬೇಕು. ಪ್ರತಿಯೊಂದು ತಾಲ್ಲೂಕಿನಲ್ಲಿಯೂ minor operation ಗೆ ಮತ್ತು X-ray ಗೆ ಏರ್ಪಾಡು ಮಾಡಿ, ಮೊಬೈಲ್ ವ್ಯಾನ್ ಕೊಟ್ಟ ಪಕ್ಷದಲ್ಲಿ ಹೆಚ್ಚಿನ ಜನಗಳಿಗೆ ಅನುಕೂಲವಾಗುತ್ತದೆ! ನೇರವಾಗಿ ತಮ್ಮ ಮನೆ ಹತ್ತಿರದಲ್ಲಿಯೇ ವೈದ್ಯಕೀಯ ಸೌಲಭ್ಯ ಸಿಗುತ್ತದೆ.

ಸ್ವಲ್ಪ ದಿವಸಗಳ ಹಿಂದೆ Medical ಮತ್ತು Health Department ಗಳು merge ಆಗುತ್ತವೆ ಎಂದು ಪೇಪರಿನಲ್ಲಿ ಓದಿದ್ದೆ. Health Department ನಲ್ಲಿ ಇರುವವರಿಗೆ ನಿರುತ್ಸಾಹ ಇದೆ; ಅವರು ಆ ಇಲಾಖೆಯಲ್ಲಿರುವವರಿಗೆ ಜನ ಸಂಪರ್ಕವಿಲ್ಲದೆ ವ್ಯಾಕ್ಸಿನ್ ಇನ್‌ಸ್ಟಿಟ್ಯೂಟ್ ಮುಂತಾದ ಕಡೆ ಕೆಲಸ ಮಾಡಬೇಕಾಗುತ್ತದೆ; ಅಲ್ಲಿ ಆಸ್ಪತ್ರೆ ಸಂಪರ್ಕವಿಲ್ಲವಲ್ಲಾ ಎಂದು ಆ ಇಲಾಖೆಗೆ ಬರುವುದಕ್ಕೆ ಹಿಂದೇಟು ಹಾಕುತ್ತಾರೆ. ಅಲ್ಲಿಯೇ ಇದ್ದರೆ ವೈದ್ಯಕೀಯ ಜ್ಞಾನವನ್ನು ಮರೆಯುವ ಸಂಭವವೂ ಇದೆಯೆಂದು ಹೇಳುತ್ತಾರೆ. ಆಸ್ಪತ್ರೆ ಸಿಗುವುದು Health Department ಗೆ ಬರುವುದಿಲ್ಲ. ಆದ್ದರಿಂದ Health ಮತ್ತು Medical Department ಗಳನ್ನು merge ಮಾಡಿ, ಡಾಕ್ಟರುಗಳನ್ನು ಒಂದು ಮೂರು ವರ್ಷ ಆಸ್ಪತ್ರೆಯಲ್ಲಿದ್ದರೆ, ಇನ್ನು ಮೂರು ವರ್ಷ ವ್ಯಾಕ್ಸಿನ್ ಇನ್‌ಸ್ಟಿಟ್ಯೂಟಿಗೆ ಹಾಕಿ. ಇದಕ್ಕೆ ಅವರೂ ಸಂತೋಷದಿಂದ ಒಪ್ಪಿಕೊಳ್ಳುತ್ತಾರೆ. ಬರೀ ಹೆಲ್ತ್ ಇಲಾಖೆಯಲ್ಲಿಟ್ಟರೆ ಮೆಡಿಕಲ್ ಗಂಧವೇ ಹೋಗುವ ಸಂಭವವಿದೆಯೆಂದು ಹೇಳುತ್ತಾರೆ. ಆದ್ದರಿಂದ ಈ ಎರಡು ಇಲಾಖೆಗಳನ್ನೂ ಆದಷ್ಟು ಜಾಗ್ರತೆ ಒಂದು ಮಾಡಬೇಕು.

ಈ Condensed M.B.B.S. Courseಗೆ ಹಿಂದಿನ ಸಾರಿ 40-50 ಜನ ಡಾಕ್ಟರುಗಳು ದುಡ್ಡು ಕೊಟ್ಟಿದ್ದಾರೆ. ಅದಕ್ಕೆ ಕಳುಹಿಸುವುದನ್ನು ನಿಲ್ಲಿಸಿಬಿಟ್ಟಿದ್ದಾರೆ. ದಯವಿಟ್ಟು Condensed Course ಗೆ ಸಾಧ್ಯವಾದಷ್ಟು ಜನವನ್ನು ಕಳುಹಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

†ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಮಾನ್ಯ ಸಭಾಪತಿಗಳೇ, ಆಗಲೆ ಹಿಂದೆ ಮಾತನಾಡಿದ ನನ್ನ ಸ್ನೇಹಿತರಾದ ಶ್ರೀವರ್ಮಾ ಗೌಡರು ಮತ್ತು ಇತರರು ವೈದ್ಯಕೀಯ ಮತ್ತು ಜನಾರೋಗ್ಯ ಇಲಾಖೆಗಳ ವಿಷಯದಲ್ಲಿ ರಚನಾತ್ಮಕವಾದ ಮತ್ತು ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಶ್ರೀಮತಿ ರತ್ನಮ್ಮ ಮಾಧವರಾವ್‌ರವರು ಮಾತನಾಡುತ್ತಾ ವೈದ್ಯಕೀಯ ಮತ್ತು ಜನಾರೋಗ್ಯ ಇಲಾಖೆಯ ಅಧಿಕಾರಿಗಳಲ್ಲಿ ಅಷ್ಟೊಂದು ಸಮರಸ್ಯವಿಲ್ಲ, ಪೈಪೋಟಿ ಮತ್ತು ಒಂದು ವಿದವಾದಂಥ ಈರ್ಷೆ ಸ್ವಭಾವವಿದೆ, ಇದು ಇರಬಾರದು ಎಂದು ಹೇಳಿ, ಒಂದು ಸಲಹೆ ಕೊಟ್ಟರು. ಅನೇಕ ಕಡೆ ಈ ಎರಡು ಇಲಾಖೆಗಳು ಪ್ರತ್ಯೇಕವಾಗಿ ಕೆಲಸ ಮಾಡಬೇಕಾಗಿದೆ. ಈ ಎರಡು ಇಲಾಖೆಗಳನ್ನೂ ಒಂದುಗೂಡಿಸಿ ಸರಿಮಾಡತಕ್ಕಂಥ ವಿಚಾರದಲ್ಲಿ ವಿಮರ್ಶೆ ನಡೆದು, ಭೋರ್ ಕಮಿಟಿಯವರು ಮತ್ತು ಇತರ ತಜ್ಞರೂ ಕೂಡ ಈ ಎರಡು ಇಲಾಖೆಗಳನ್ನೂ ಕೂಡ ಒಂದು ಮಾಡತಕ್ಕಂಥದ್ದು ಸರಿ, ಈ Curative ಮತ್ತು Preventive medicine ಗಳನ್ನು ಪ್ರತ್ಯೇಕವಾಗಿ ಇಡದೆ, ಎರಡನ್ನೂ integrate ಮಾಡತಕ್ಕಂಥಾದ್ದು ನ್ಯಾಯವಾದುದು, ಅಲ್ಲದೇನೆ There is considerable developing of functions and duplication of staff ಈ ಎರಡು ಡಿಪಾರ್ಟ್‌ಮೆಂಟಿನಲ್ಲಿಯೂ ಇದೆ, ಇದನ್ನು ಕಡಿಮೆ ಮಾಡಬೇಕೆಂದು ಹೇಳಿದ್ದಾರೆ.

Mr. SPEAKER.—It is before or after the emergency ?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಮುಂಚೆ ಇದು ಪ್ರತ್ಯೇಕವಾಗಿ ಇರುವುದರಿಂದ ಎರಡರಲ್ಲಿಯೂ ಕೂಡ ಕೆಲಸಕಾರ್ಯಗಳು overlap ಆಗುತ್ತಿವೆ, ಹೆಚ್ಚಿನ ವೆಚ್ಚವಾಗುತ್ತಿದೆ, ಮಿತವ್ಯಯ ದೃಷ್ಟಿಯಿಂದ ಎರಡು ಇಲಾಖೆಗಳನ್ನು ಒಂದುಗೂಡಿಸತಕ್ಕಂಥದ್ದು ನ್ಯಾಯವಾದುದು ಅಂತ ಹೇಳಿ ಭೋರ್ ಕಮಿಟಿಯವರು ಅಭಿಪ್ರಾಯ ಪಟ್ಟಿದ್ದಾರೆ. ಈಗ ನನಗೆ ತಿಳಿದದ್ದರಲ್ಲಿ ನಮ್ಮ ಸರ್ಕಾರದವರು ಈ ಎರಡು ಇಲಾಖೆಗಳನ್ನೂ ಕೂಡ ಒಂದುಗೂಡಿಸಬೇಕು ಎಂಬತಕ್ಕಂಥಾದ್ದನ್ನು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ಈ ಪ್ರಶ್ನೆ ಬಹಳ ದಿವಸಗಳಿಂದ ಇದ್ದರೂ ಕೂಡ ಇದನ್ನು ಜಾರಿಗೆ ಕೊಡುವುದರಲ್ಲಿ ಬಹಳ ವಿಳಂಬವಾಗಿದೆ. ಈ ಎರಡು ಇಲಾಖೆಗಳನ್ನು ಒಂದುಗೂಡಿಸಿ, ಜಿಲ್ಲಾ ಮಟ್ಟದಲ್ಲಿಯೂ ಮತ್ತು ಸಂಸ್ಥಾನದ ಮಟ್ಟದಲ್ಲೂ ಕೂಡ, ಒಂದೇ ಅಧಿಕಾರಿ ಕೆಳಗೆ ವೈದ್ಯಕೀಯ ಮತ್ತು ಜನಾರೋಗ್ಯದ ಕೆಲಸಕಾರ್ಯಗಳು ನಡೆಯತಕ್ಕಂಥಾದ್ದು ಅತ್ಯಗತ್ಯ. ಏನ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆಯೋ ಅದನ್ನು ಕಾಲ ವಿಳಂಬ ಮಾಡದೇನೇ ಬೇಗ ಜಾರಿಗೆ ಕೊಡತಕ್ಕಂಥಾದ್ದು ಅತ್ಯವಶ್ಯಕವಾಗಿದೆ.

ಈ ಇಲಾಖೆಗಳ ವಿಚಾರದಲ್ಲಿ ಮಾತನಾಡಬೇಕಾದ ಇನ್ನೊಂದು ಪ್ರಾಮುಖ್ಯವಾದ ವಿಷಯ ಅಂದರೆ, ಡಾಕ್ಟರುಗಳ ಅಭಾವ. ನಮ್ಮ ಸಂಸ್ಥಾನದಲ್ಲಿ ಅನೇಕ ಆಸ್ಪತ್ರೆಗಳಿವೆ ಆದಾಗ್ಯೂ ಆಸ್ಪತ್ರೆಗಳ ಅವಶ್ಯಕತೆ ಇನ್ನೂ ಬಹಳವಿದೆ. ಅದರಲ್ಲಿಯೂ ಗ್ರಾಮಾಂತರ ಪ್ರದೇಶಗಳಲ್ಲಿ ತತ್ರಾಪಿ ಮಲೆನಾಡು ಪ್ರದೇಶಗಳಲ್ಲಿ ಆಸ್ಪತ್ರೆಗಳ ಅವಶ್ಯಕತೆ ಬಹಳವಿದೆ. ಆದರೆ ಈಗ ಇರತಕ್ಕಂಥ ಅನೇಕ ಆಸ್ಪತ್ರೆಗಳಲ್ಲಿ ಡಾಕ್ಟರುಗಳೇ ಇಲ್ಲ. ನಾನು ಹಿಂದೆ ಇದೇ ಸಭೆಯಲ್ಲಿ ಕೇಳಿದ ಪ್ರಶ್ನೆಗೆ ಸುಮಾರು 300 ಡಾಕ್ಟರುಗಳು ಹೆಚ್ಚಾಗಿ ಇರಬೇಕಾಗಿದ್ದು, ಸಾಲದಾಗಿದೆ ಎಂದು ಹೇಳಿದರೂ ಅನೇಕ ಆಸ್ಪತ್ರೆಗಳಿಗೆ ಡಾಕ್ಟರುಗಳಿಲ್ಲ. ಅದರಲ್ಲಿಯೂ ಲೇಡಿ ಡಾಕ್ಟರುಗಳ ಅಭಾವವನ್ನೋ ಹೇಳುವುದಕ್ಕೆ ತೀರದು. ಆಸ್ಪತ್ರೆಗಳು ಹೀಗಾಗಿ ವರ್ಷಾನುಗಟ್ಟಲೆ, ಅನೇಕ ಆಸ್ಪತ್ರೆಗಳಲ್ಲಿ ಎರಡು ಮೂರು ವರ್ಷವಾದರೂ ಡಾಕ್ಟರುಗಳಿಲ್ಲ. ಆದ್ದರಿಂದ ಆಸ್ಪತ್ರೆಗಳಿದ್ದರೂ ಕೂಡ ಅವುಗಳ ಪ್ರಯೋಜನ ಜನಗಳಿಗೆ ದೊರೆಯುತ್ತಾ ಇಲ್ಲ. ಯಾವ ತಾಲ್ಲೂಕಿಗೇ ಹೋಗಿ, ವೇಕೆನ್ಸಿ ಹಾಗೇ ಖಾಲಿಯಿರುತ್ತದೆ, ತುಂಬಿಯೇ ಇರುವುದಿಲ್ಲ. ಈ ರೀತಿ ಯಾವ ಇಲಾಖೆಯಲ್ಲಿಯೂ ಇಲ್ಲ. ಆರೋಗ್ಯ ಮತ್ತು ಜನಾರೋಗ್ಯ ಇಲಾಖೆಗಳಲ್ಲಿ ಮಾತ್ರ ಇದೊಂದು ವೈಶಿಷ್ಟ್ಯವಾಗಿದೆಯೆಂದು ನನಗನಿಸುತ್ತದೆ. ಡಾಕ್ಟರುಗಳು ಪ್ರತಿ ವರ್ಷವೂ ಕೂಡ ಹೊಸದಾಗಿ ಬರುತ್ತಿದ್ದಾರೆ, ವಿದ್ಯಾಥಿಗಳು ಪಾಸ್ ಮಾಡುತ್ತಾ ಇದ್ದಾರೆ. ನೂರಕ್ಕಿಂತಲೂ ಹೆಚ್ಚಿಗೆ ವಿದ್ಯಾರ್ಥಿಗಳು ಪ್ರತಿ ವರ್ಷವೂ ಪಾಸ್ ಮಾಡಿಕೊಂಡು ಡಾಕ್ಟರುಗಳಾಗುತ್ತಿದ್ದಾರೆ. ಹಾಗಿದ್ದರೂ ಕೂಡ ಇರತಕ್ಕಂಥ ಆಸ್ಪತ್ರೆಗಳಿಗೆ ಡಾಕ್ಟರುಗಳು ಹೋಗದೆ ಇರುವುದಕ್ಕೆ ಏನು ಕಾರಣ ಎಂಬುದನ್ನು ಇಲಾಖೆಯವರು ಆಲೋಚನೆ ಮಾಡಿ, ಈ ನ್ಯೂನತೆಯನ್ನು ಬಗೆಹರಿಸುವುದಕ್ಕೆ ಇಲ್ಲಿಯವರೆಗೂ ಜಯಶೀಲರಾಗದಿರುವುದು ಬಹಳ ವಿಷಾದ. ದೂರು ಬಹಳ ವರ್ಷಗಳಿಂದಲೂ ಕೂಡ ಇದ್ದೇ ಇವೆ ; ಇದನ್ನು ಬಗೆಹರಿಸುವುದಕ್ಕೆ ನಮ್ಮ ಸರ್ಕಾರದವರಿಂದ ಸಾಧ್ಯವಾಗಿಲ್ಲ.

ಇದಕ್ಕೆ ಕಾರಣ ನನಗೆ ಅನಿಸುತ್ತದೆ ಮೊದಲನೆಯದಾಗಿ ನೆರೆ ಪ್ರಾಂತ್ಯಗಳಿಗಿಂತಲೂ ನಮ್ಮ ಪ್ರಾಂತ್ಯದಲ್ಲಿ ಡಾಕ್ಟರುಗಳಿಗೆ ಕೊಡುತ್ತಾ ಇರತಕ್ಕ ಸಂಬಳ ಕಡಿಮೆ ಎಂಬ ಒಂದು ದೂರು ಒಂದು ಕಾರಣವಾಗಿರಬೇಕು ಎಂದು. ಎರಡನೆಯದಾಗಿ ಅವರು ನೌಕರಿಗೆ ಸೇರಿಕೊಳ್ಳುವುದಕ್ಕೆ-ಡಾಕ್ಟರ್

(ಶ್ರೀ ಜಿ. ಎ. ತಿಮ್ಮಪ್ಪಗೌಡ)

ಕೆಲಸ ಮಾಡುವುದಕ್ಕೆ ಸಾಕಾದಷ್ಟು ಆಕರ್ಷಣೆ ಇಲ್ಲ. ಪಾಸ್ ಮಾಡಿದ ಮೇಲೆ ಕೆಲವರನ್ನು ಲೋಕಲ್ ಕ್ಯಾಂಡಿಡೇಟ್ಸ್ ಅಂತ ತೆಗೆದುಕೊಳ್ಳುತ್ತಾ ಇದ್ದೀರಿ. ನಾನು ಕೇಳಿದ್ದೇನೆ, ಮಾನ್ಯ ಮಂತ್ರಿಗಳ ಗಮನಕ್ಕೂ ಕೂಡ ತಂದಿದ್ದೇನೆ. ಡಾಕ್ಟರುಗಳ ಅಭಾವ ಇಷ್ಟೊಂದು ಇರುವಾಗ ಲೋಕಲ್ ಕ್ಯಾಂಡಿಡೇಟ್ಸ್ ಅಂತ ತೆಗೆದುಕೊಂಡ ಮೇಲೆ ಮೂರು ನಾಲ್ಕು ವರ್ಷ ಆದರೂ ಕೂಡ ಅವರನ್ನು ಕನ್‌ಫರ್ಮ್ ಮಾಡಿಲ್ಲ. ಅವರ ಸರ್ವಿಸ್ ಏನು, ಅವರ ಪ್ರವೋಷನ್ ಏನು, ಅವರ ಗ್ರೇಡ್ ಏನು ವಗೈರೆ ವಿಚಾರಗಳನ್ನು ನಮ್ಮ ಸಂಸ್ಥಾನದಲ್ಲಿ ತೀರ್ಮಾನವಾಗಿಲ್ಲ ಎಂದು ಕೇಳಿದ್ದೇನೆ. ಇಂಥಾ ಸನ್ನಿವೇಶ ನೆರೆ ಪ್ರಾಂತ್ಯದಲ್ಲಿ ಎಲ್ಲಿಯೂ ಇಲ್ಲ. ಇದರಿಂದ ಏನಾಗುತ್ತದೆ ಡಾಕ್ಟರುಗಳಿಗೆ ತಮ್ಮ ಸರ್ವಿಸ್ ಗ್ರೇಡು ಸಂಬಳ ಸಾರಿಗೆ ಇವು ಯಾವುದು ಸ್ಪಷ್ಟವಾಗಿ ಗೊತ್ತಾಗದೇ ಇರುವಾಗ, ಖಚಿತವಾದ ನೌಕರಿ ನಂಬಿಕೆ ಅವರಿಗೆ ಹುಟ್ಟದೇ ಇರುವಾಗ 3 4 ವರ್ಷವಾದರೂ ಇಂಥಾ ಅನಿಶ್ಚಿತ ಸ್ಥಿತಿಯಲ್ಲಿ ಅನುಕೂಲವಾಗಿರತಕ್ಕ ಯಾವ ಡಾಕ್ಟರು ತಾನೇ ನಮ್ಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯ ಎಂಬುದನ್ನು ತಾವು ಇಲ್ಲಿಯವರೆಗೂ ತಿಳಿದುಕೊಂಡು ಅದಕ್ಕೆ ಸರಿಯಾದಂಥ ವ್ಯವಸ್ಥೆ ಮಾಡದೇ ಇರುವುದು ಈ ಒಂದು ನ್ಯೂನತೆಗೆ ಮೂಲ ಕಾರಣವಾಗಿದೆ. ಈಗ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸ ಮಾಡುತ್ತಾ ಇದ್ದವರು ಅನೇಕರು ನಮ್ಮ ಆಸ್ಪತ್ರೆಗಳನ್ನು ಬಿಟ್ಟು ಬೇರೆ ಕಡೆ ಸೇರಿದ್ದಾರೆ, ಮತ್ತು ಹೆಚ್ಚಿನ ವ್ಯಾಸಂಗಕ್ಕೆ ಬೇರೆ ಕಡೆಗೆ ಹೋಗಿದ್ದಾರೆ ಎಂದು ಕೇಳಿದ್ದೇನೆ. ಇಲ್ಲಿ ಕನ್‌ಫರ್ಮ್ ಮಾಡುತ್ತಿಲ್ಲ. ಆ ಕಡೆ ಪಿ. ಎಸ್. ಸಿ. ಅವರು ರೆಕ್ರೂಟ್ ಮಾಡಿಕೊಂಡಿಲ್ಲ. ಡಾಕ್ಟರುಗಳ ಅವಶ್ಯಕತೆ ಎಲ್ಲಾ ಕಡೆ ಇರುವಾಗ, ಅವರಿಗೆ ಪ್ರೈವೇಟ್ ಪ್ರಾಕ್ಟೀಸ್ ಮಾಡುವುದಕ್ಕೆ ಅನುಕೂಲವಿರುವಾಗ, ಬೇರೆ ಪ್ರಾಂತ್ಯಗಳಲ್ಲಿ ಅವರಿಗೆ ಡಿಮ್ಯಾಂಡ್ ಇರುವಾಗ ನಮ್ಮ ಸಂಸ್ಥಾನದಲ್ಲೇ ಅವರು ಕೆಲಸ ಮಾಡಿಕೊಂಡಿರಬೇಕೆಂದರೆ ಯಾವ ರೀತಿ ನಿರೀಕ್ಷೆ ಮಾಡಬಹುದೆಂಬ ವಿಷಯವನ್ನು ಕೂಡ ತಾವು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಅವರ ಸರ್ವೀಸ್‌ನ್ನು ಗಣನೆಗೆ ತೆಗೆದುಕೊಡು ಅವರಿಗೆ ತಕ್ಕ ಗ್ರೇಡು ವಗೈರೆ ಕೊಡುವುದು ಉತ್ತಮ ಎಂದು ಹೇಳುತ್ತೇನೆ.

ಇದರ ಜೊತೆಗೆ ಡಾಕ್ಟರುಗಳು ಹಳ್ಳಿಗಾಡುಗಳಿಗೆ ಹೋಗ ವುದಿಲ್ಲ. ಯಾರನ್ನು ಕೇಳಿದರೂ ಮೈಸೂರು, ಬೆಂಗಳೂರಿನಂತಹ ದೊಡ್ಡ ದೊಡ್ಡ ಪಟ್ಟಣಗಳಲ್ಲಿರತಕ್ಕ ಆಸ್ಪತ್ರೆಗಳನ್ನೇ ಕೇಳುತ್ತಾರೆ. ಹಳ್ಳಿಗಳಲ್ಲಿ 3-4 ವರ್ಷಗಳಿಂದಲೂ ಡಾಕ್ಟರುಗಳಿಲ್ಲ ಡಾಕ್ಟರನ್ನು ಕಳುಹಿಸಿ ಎಂದರೆ ಯಾರು ಬರುವುದಿಲ್ಲ. ಈಗ ಸ್ವಲ್ಪ ಅಲೋಯೆನ್ಸ್ ಹೆಚ್ಚಿಸಿದ್ದಾರೆ. ಗ್ರ್ಯಾಜುಯೆಟುಗಳಿಗೆ 50 ರೂಪಾಯಿ, ಎಲ್. ಎಂ. ಪಿ. ಗಳಿಗೆ 25 ರೂಪಾಯಿ ಅಲೋಯೆನ್ಸ್ ಕೊಡುತ್ತಾರೆ ಎಂದು ಕೇಳಿದ್ದೇನೆ. ಯಾವ ತಾರತಮ್ಯವೂ ಇಲ್ಲದೇ ಎಲ್ಲರಿಗೂ 50 ರೂಪಾಯಿ ಅಲೋಯೆನ್ಸು ಸಾಧ್ಯವಾದರೆ ಮನೆ ಸೌಕರ್ಯ ಕೂಡ ಮಾಡಿಕೊಟ್ಟರೆ ಹೆಚ್ಚಿನ ಆಕರ್ಷಣೆ ಉಂಟಾಗಿ ಹಳ್ಳಿಗಾಡಿನ ಕಡೆ ಡಾಕ್ಟರುಗಳು ಹೋಗುವುದಕ್ಕೆ ಸಾಧ್ಯವಾಗುತ್ತದೆ. ಈ ರೀತಿ ಮಾಡುವುದು ಬಹಳ ಅವಶ್ಯಕವಾಗಿದೆ.

ಇನ್ನೊಂದು ಅನಿಸುತ್ತದೆ. ನಾನು ಕೂಡ ಮೆಡಿಕಲ್ ಸ್ಕೂಲು ಸೆಲೆಕ್ಷನ್ ಕಮಿಟಿಯಲ್ಲಿ ಸದಸ್ಯನಾಗಿದ್ದೆ. ವಿದ್ಯಾರ್ಥಿಗಳನ್ನು ಎಲ್. ಎಂ. ಪಿ.ಗೆ ಸೆಲೆಕ್ಟ್ ಮಾಡುವಾಗ ನನ್ನ ಮಿತ್ರರಾದ ಶ್ರೀಮಾನ್ ಪುಟ್ಟಸ್ವಾಮಿಯವರು ಹೇಳುತ್ತಾ ಇದ್ದರು ಗ್ರಾಮಾಂತರಗಳಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಅದರಲ್ಲೂ ಮಲೆನಾಡಿನಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಸ್ವಲ್ಪ ಹೆಚ್ಚಿನ ರಿಯಾಯಿತಿಯನ್ನು ಕೊಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸಿಕೊಳ್ಳಬೇಕು, ಹೆಣ್ಣು ಮಕ್ಕಳನ್ನು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸಿಕೊಳ್ಳಬೇಕು ಎಂದು. ಇದಕ್ಕೆ ಕಾರಣವೇನೆಂದರೆ ಯಾರಾದರೂ 4-5 ವರ್ಷಗಳ ಹಿಂದಿನ ಲಿಸ್ಟನ್ನು ತೆಗೆದುಕೊಂಡು ನೋಡಬಹುದು. ಸೀಟು ದೊರಕಿರುವುದೆಲ್ಲಾ ಪಟ್ಟಣಗಳಲ್ಲಿರತಕ್ಕವರು, ಶ್ರೀಮಂತರ ಮಕ್ಕಳು, ದೊಡ್ಡ ದೊಡ್ಡ ಅಧಿಕಾರಿಗಳ ಮಕ್ಕಳಿಗೇ ಈ ಸೌಲಭ್ಯ ದೊರೆಕಿದೆ. ಇದು ಹೊಟ್ಟೇಕಿಚ್ಚು ಪಡುವ ವಿಚಾರವಲ್ಲ. ವಾಸ್ತವವಾಗಿ ಏನಾಗಿದೆ ಎಂದರೆ ಶ್ರೀಮಂತರ ಮಕ್ಕಳು, ದೊಡ್ಡ ದೊಡ್ಡ ಅಧಿಕಾರಿಗಳ ಮಕ್ಕಳು ಸೀಟು ಹೊಂದಿದವರಾಗಿ ಅವರಿಗೆ ಹಳ್ಳಿಗಳ ಜೀವನದ ಗಂಧವೇ ಇಲ್ಲದೇ ಅವರು ಪಾಸ್ ಮಾಡಿಕೊಂಡು ಏನು ಮಾಡುತ್ತಾರೆ. ಬೆಂಗಳೂರಿನಲ್ಲೇ ಇಲ್ಲಿಯ ಆಸ್ಪತ್ರೆಗಳಲ್ಲಿ ಅಥವಾ ಮೈಸೂರು, ದಾವಣಗೆರೆ ಇಂಥ ಆಸ್ಪತ್ರೆಗಳಲ್ಲಿ ಕೆಲಸ ಮಾಡಲು ಬಯಸುತ್ತಾರೆ. ಹಳ್ಳಿಯ ಆಸ್ಪತ್ರೆಗಳಿಗೆ ಹೋಗಿ ಅಲ್ಲಿ ವಾಸ ಮಾಡುವುದಕ್ಕೆ ಇಷ್ಟ ಪಡುವುದಿಲ್ಲ. ಆದ್ದರಿಂದ ಗ್ರಾಮಾಂತರ ಪ್ರದೇಶದ ಅದರಲ್ಲೂ ಮಲೆನಾಡು ಪ್ರಾಂತ್ಯಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಹೆಚ್ಚಿಗೆ ಸೀಟು ಕೊಡುವುದರಿಂದ ಈ ನ್ಯೂನತೆ, ತೊಂದರೆ ಸ್ವಲ್ಪ ಕಡಿಮೆಯಾಗಬಹುದು. ಆದರೆ ಇದಕ್ಕೆ ಸರ್ಕಾರದ ರೂಲ್ಸ್ ವಿರೋಧ ಬರುತ್ತದೆ. ಮೆರಿಟ್ ಪ್ರಕಾರ ಕೊಡಬೇಕೆಂಬ ತತ್ವ ಇದೆ. ಇದು ಅಡ್ಡಿ ಬರಬಹುದು. ಈಗ ಯಾವ ರೀತಿ ನಡೆಯುತ್ತಾ ಇದೆ ಎಂಬುದನ್ನು ಯೋಚನೆ ಮಾಡಿದರೆ ನೆನ್ನೆ ಮೊನ್ನೆಯಿಂದ ಪಿ. ಯು. ಸಿ. ಪರೀಕ್ಷೆ ನಡೆಯುತ್ತಾ ಇದೆ. ಬೆಂಗಳೂರು ಪಟ್ಟಣದಲ್ಲಿ

ಸಾಮಾನ್ಯವಾಗಿ ಎಲ್ಲಾ ವಿದ್ಯಾರ್ಥಿಗಳಿಗೂ ಕೂಡ question papers ಗೊತ್ತಾಗಿದೆ. ರಾತ್ರಿ ಹತ್ತು ಹತ್ತುವರೆ ಗಂಟೆ ಆದರೆ ಒಬ್ಬರಿಂದ ಒಬ್ಬರಿಗೆ ಪ್ರಶ್ನೆಗಳು ಗೊತ್ತಾಗಿ ಪರೀಕ್ಷೆಗೆ ಹೋಗುತ್ತಾರೆ. ಹೀಗಿರುವಾಗ ಮೆರಿಟ್ ಅನ್ನುವುದು ಹೇಗೆ ಬರುತ್ತದೆ. ಈ ಸೌಕರ್ಯ, ಸೌಲಭ್ಯ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಇರುವುದಿಲ್ಲ. ಇದನ್ನೇ ಒಂದು ದೊಡ್ಡ ಕ್ರೈಟೇರಿಯಾ ಮಾಡಿ ಕೊಂಡು ಶೇಕಡ 50 ಬಂದವನು ಅರ್ಹನಲ್ಲ. ಶೇಕಡ 65 ಬಂದವನು ಅರ್ಹ ಅವನಿಗೆ ಸೀಟು ಕೊಡಬೇಕು ಎಂದು ಹೇಳುವುದು ನ್ಯಾಯವಾದ ಮಾರ್ಗವಾಗುವುದಿಲ್ಲ. ಹಳ್ಳಿಗಳಲ್ಲಿ ಹೋಗಿ ಕೆಲಸ ಮಾಡುವುದಕ್ಕೆ, ಹಳ್ಳಿಗಳ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುವುದಕ್ಕೆ ಆಶೆ ಇರುವವರಿಗೆ ಸೀಟು ಸಿಕ್ಕದೇ ಇರುವುದರಿಂದ ಈ ನ್ಯೂನತೆ ಆಗಿದೆ. ಇದರಿಂದ ಡಾಕ್ಟರುಗಳ ಅಭಾವ ಕಡಿಮೆ ಮಾಡು ವುದಕ್ಕೆ ಕಷ್ಟವಾಗುತ್ತದೆ ಎಂದು ಹೇಳ ಬಯಸುತ್ತೇನೆ. ನಾನು ಕಮಿಟಿಯಲ್ಲಿ ಸದಸ್ಯನಾಗಿದ್ದಾಗ ಶೇಕಡ45, ಶೇಕಡ 50 ಶೇಕಡ 55 ಬಂದವರಿಗೆ 4-5 ಜನರಿಗೆ ಸೀಟು ಕೊಟ್ಟು ಪ್ರತಿ ವರ್ಷವೂ ಕೂಡ ಪಾಸ್ ಮಾಡಿ ಯೋಗ್ಯರಾದ, ದಕ್ಷರಾದ ಡಾಕ್ಟರುಗಳಾಗಿ ಹಳ್ಳಿಗಳಲ್ಲಿ ಕೆಲಸ ಮಾಡುತ್ತಾ ಇದ್ದಾರೆ. ಪ್ರೈವೇಟ್ ಪ್ರಾಕ್ಟೀಸ್ ವಿಚಾರದಲ್ಲು ಕೂಡ ನಮ್ಮ ಸ್ನೇಹಿತರು ಮಾತನಾಡಿದರು. ಪ್ರೈವೇಟ್ ಪ್ರಾಕ್ಟೀಸ್‌ಗೆ ಅವಕಾಶ ಕೊಟ್ಟಿರುವುದು ಸರಿಯಾವಲ್ಲ ಏಕೆಂದರೆ ಪ್ರೈವೇಟ್ ಪ್ರಾಕ್ಟೀಸಿಗೆ ಅವಕಾಶ ಕೊಟ್ಟರೆ ಅವರ ಪೇಷೆಂಟುಗಳನ್ನು ಸರಿಯಾಗಿ ನೋಡುತ್ತಾರೆ, ಅವರ ಕಡೆಗೆ ಹೆಚ್ಚು ಆಸಕ್ತಿ ವಹಿಸುತ್ತಾರೆಯೇ ಹೊರತು ಆಸ್ಪತ್ರೆಗೆ ಬರತಕ್ಕ ರೋಗಿಗಳ ಕಡೆಗೆ ಅಷ್ಟಾಗಿ ಗಮನ ಕೊಡುವುದಿಲ್ಲ ಎಂದು ಅನೇಕ ಕಡೆಗಳಿಂದ ಕೇಳಿ ಬರುತ್ತಾ ಇವೆ. ಈ ಡಾಕ್ಟರುಗಳಿಗೆ ಹೆಚ್ಚು ಸಂಬಳ ಸಾರಿಗೆ ಮಾಡದಿದ್ದರೂ ಪರವಾಗಿಲ್ಲ ಪ್ರೈವೇಟ್ ಪ್ರಾಕ್ಟೀಸ್ ಮಾಡುವುದನ್ನು ಕಡ್ಡಾಯವಾಗಿ ತಪ್ಪಿಸುವುದು ಯೋಗ್ಯವಾದದ್ದು, ಎಂದು ಅನೇಕರ ಅಭಿಪ್ರಾಯವಾಗಿದೆ. ಆಸ್ಪತ್ರೆಗಳಲ್ಲಿ ಸರಿಯಾ ದಂಥ ಔಷಧಿ ದೊರೆಯುತ್ತಾ ಇಲ್ಲ ಎಂಬ ದೂರು ಹೆಚ್ಚಾಗಿದೆ. ಸಾಮಾನ್ಯವಾಗಿ ಬಹಳ ಅಗ್ಗ ವಾಗಿರತಕ್ಕ ಔಷಧಿ ಸಿಕ್ಕುತ್ತದೆಯೇ ಹೊರತು ಯಾವ ರೋಗಿ ಹೋದರೂ ಕೂಡ ಬೆಲೆಯಾದಂಥ ಅತ್ಯವಶ್ಯಕವಾಗಿ ಬೇಕಾಗಿರತಕ್ಕಂಥ, ಹೆಚ್ಚಿನ ಕಾಯಿಲೆಗಳಿಗೆ ಬೇಕಾಗಿರತಕ್ಕ ಯಾವುದಾದರೂ ಇಂಜೆಕ್ಷನ್ ಟ್ಯೂಬು ವಗೈರೆ, ಬಡವನಾದರೂ ಕೂಡ ಅಂಗಡಿಯಿಂದ ತೆಗೆದುಕೊಂಡು ಬಾ ಎಂದು ಹೇಳುತ್ತಾರೆ, ಬೆಲೆ ಬಾಳುವ ಔಷಧಿಗಳು ಬಹಳ ಇರುತ್ತವೆ. ಅಂಥ ಔಷಧಿಗಳು ಬಡವರಿಗೆ ಸಿಕ್ಕುವ ಹಾಗೆ ಗ್ರಾಮಾಂತರದ ಆಸ್ಪತ್ರೆಗಳಿಗೆ ಸರಬರಾಯಿ ಮಾಡಲು ತಕ್ಕ .ವ್ಯವಸ್ಥೆ ಮಾಡ ಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಚನ್ನಬೈರೇಗೌಡ (ಹೊಸಕೋಟೆ).—ಸ್ವಾಮಿ, ಈಗ ನಮ್ಮ ಮುಂದಿರತಕ್ಕ ಜನಾ ರೋಗ್ಯ ಮತ್ತು ವೈದ್ಯಕೀಯ ಡಿಮ್ಯಾಂಡುಗಳನ್ನು ನಾನು ಅನುಮೋದಿಸುತ್ತ ಈ ಬಾಬುಗಳಲ್ಲಿರ ತಕ್ಕ ಕೆಲವು ನ್ಯೂನತೆಗಳನ್ನು ಈಗ ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಇಲ್ಲಿಯತನಕ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರಿಗೆ ಮೆಡಿಕಲ್ ಎಯ್ಡ್ ಸರಿಯಾಗಿ ಸಿಕ್ಕುತ್ತಿಲ್ಲ. ಹತ್ತಾರು ಗ್ರಾಮಗಳಿಗೊಂದು ಆಸ್ಪತ್ರೆಯಿದ್ದು ಜನರು ಆ ಆಸ್ಪತ್ರೆಗೆ 8–10 ಮೈಲಿ ಗಳಿಂದ ನಡೆದು ಬರಬೇಕಾಗಿದೆ. ಏನೋ ನಮ್ಮ ರಾಜ್ಯದಲ್ಲೂ ಎಲ್ಲ ಕಡೆಗಳಲ್ಲೂ ಆಸ್ಪತ್ರೆಗಳಿವೆ ಅಂತ ಹೇಳಿಕೊಳ್ಳಲು ಇದರಿಂದ ಒಂದು ಅವಕಾಶವಿರಲಿ ಅಂತ ಇವುಗಳನ್ನು ಮಾಡಿರುವಂತೆ ಕಂಡುಬರುತ್ತಿದೆ. ಅನೇಕ ಆಸ್ಪತ್ರೆಗಳಲ್ಲಿ 6 ತಿಂಗಳಗಟ್ಟಲೆ ಇನ್ನು ಕೆಲವು ಕಡೆ ವರ್ಷಗಟ್ಟಲೆ ಆಸ್ಪತ್ರೆಗಳಲ್ಲಿ ಡಾಕ್ಟರು ಗಳೇ ಇರುವುದಿಲ್ಲ—ಅಂದ ಮೇಲೆ ಈ ವೈದ್ಯಕೀಯ ಸಹಾಯ ದೊರೆಯುತ್ತಿಲ್ಲ ಎಂಬುದನ್ನು ಮತ್ತೆ ಹೇಳಬೇಕಾದ್ದೇ ಇಲ್ಲ. ನಮ್ಮ ತಾಲ್ಲೂಕಿನಲ್ಲಿ ಒಂದು ಲಕ್ಷ ರೂ. ಗಳನ್ನು ಖರ್ಚುಮಾಡಿ ಅಲ್ಲಿ ಒಂದು ಮೆಟರ್ನಿಟಿ ಆಸ್ಪತ್ರೆಯನ್ನು ಕಟ್ಟಿಸಲಾಗಿದೆ. ಅಲ್ಲಿ ಹೆಸರಿಗೆ ಮಾತ್ರ 23 ಬೆಡ್ಡುಗಳಿವೆ. ಒಂದರಲ್ಲೂ ಹಾಸಿಗೆಯಿಲ್ಲ, ತಲೆದಿಂಬಿಲ್ಲ, ಬೆಡ್‌ಷೀಟಿಲ್ಲ, ಕಂಬಳಿಯಿಲ್ಲ. ಇಷ್ಟೇ ಅಲ್ಲ ಅಲ್ಲಿ ಯಾರಾದರೂ ಕೈ– ಕಾಲು ಮುರಿದವರು ಬಂದರೆ ಅವರಿಗಾದರೂ ಆ ಕಾಟನ್–ಬ್ಯಾಂಡೇಜ್ ಬಟ್ಟೆ ಸಹ ಇರುವುದು ಬೇಡವೇ? ಇಂಥಾ ಪರಿಸ್ಥಿತಿ ಇದೆ. ಇದನ್ನು ನಾನೇ ಕಣ್ಣಾರೆ ನೋಡಿ ಮೊನ್ನೆ ನಾನೇ ಬೆಂಗ ಳೂರಿನಿಂದ ಅಲ್ಲಿಗೆ ಎರಡು ಬಂಡಲ್ ತೆಗೆದುಕೊಂಡು ಹೋಗಿ ಕೊಟ್ಟಿದ್ದೇನೆ. ಆದರೆ ಈ ದಿವಸ ಈ ಡಾಕ್ಟರ ಅಭಾವ ಎಷ್ಟೋ ಇದೆ ಅಂತ ಹೇಳುವುದು ಒಂದು ಕಡೆಗಿರಲಿ. ಇರತಕ್ಕ ಆ ಡಾಕ್ಟರುಗಳೇ ಇದ್ದಾರೆ ಅವರಿಗೆ ರೋಗಿಗಳ ವಿಚಾರದಲ್ಲಿ ಸ್ವಲ್ಪವೂ ಕನಿಕರವಿಲ್ಲ — ಅಂದರೆ ಅವರಿಗೆ ಹಾರ್ಟಿಲ್ಲ ಎಂತ ಹೇಳುತ್ತೇನೆ. ಆ ಡಾಕ್ಟರುಗಳು ಎಲ್ಲೇ ಸೇರಲಿ ಅವರು ಬರಿ ಈ ಒಂದು ದುಡ್ಡಿನ ಸಂಪಾ ದನೆ ವಿಚಾರವೋ ಅಥವಾ ಅವರಿಗೆ ಇಕ್ವಿಪ್‌ಮೆಂಟುಗಳು ಸರಿಯಾಗಿ ದೊರೆತಿಲ್ಲ—ಫರ್ನಿಚರ್ ದೊರೆತಿಲ್ಲ, ನಮಗೆ ಬಿಲ್ಡಿಂಗ್ ಕಟ್ಟಿಸಲು ಸಿಮೆಂಟ್ ಸಿಗುತ್ತಿಲ್ಲ—ಕಬ್ಬಿಣ ಸಿಕ್ಕುತ್ತಿಲ್ಲ, ನನಗೆ ಸರ್ಕಾರದಿಂದ ಇನ್ನೂ ಅಡ್ವಾನ್ಸ್ ಸಾಲ ಮಂಜೂರಾಗಲಿಲ್ಲ ಅಂತ ಇಂಥಾ ಮಾತುಗಳು ಕೇಳಿ ಬರುತ್ತಿವೆಯೇ ವಿನಾ ಅವರ ಬಾಯಿನಲ್ಲಿ ನಾನು ಇಂಥಾ ಪೇಷಂಟಿಗೆ ಟ್ರೀಟ್‌ಮೆಂಟ್ ಕೊಟ್ಟೆ—

(ಶ್ರೀ ಬಿ. ಚನ್ನಬೈರೇಗೌಡ)

ನನ್ನಲ್ಲಿ ಇಂಥ ಒಂದು ಪೆಕ್ಯೂಲಿಯರ್ ಕೇಸ್ ಬಂದಿತ್ತು, ಹೀಗೆ ಟ್ರೀಟ್‌ಮೆಂಟ್ ಕೊಟ್ಟೆ ಎನ್ನತಕ್ಕ ಮಾತುಗಳೇ ಬರುವುದಿಲ್ಲ. ಇಂಥಾ ಅಭ್ಯಾಸವೇ ಅವರಲ್ಲ. ಹೀಗಿರುವಾಗ ಈ ಡಾಕ್ಟರುಗಳನ್ನು ನಾವು ಹೊರ ದೇಶಗಳಿಗೆ ಬೇರೆ ಕಳುಹಿಸಿ ಆ L. R. C. P & M. R. C. P. ಎಂಬ ಡಿಗ್ರಿಗಳನ್ನು ಕೊಡಿಸುವ ಬದಲು ಅವರನ್ನೆಲ್ಲ ಇಲ್ಲೇ ಸಮೀಪದಲ್ಲೇ ವೇಲೂರು ಅಂತ ಇದೆ, ಅಲ್ಲಿ ಒಂದು ಆಸ್ಪತ್ರೆಯಿದೆ, ಅಲ್ಲಿಗೆ ಈ ನಮ್ಮ ಡಾಕ್ಟರುಗಳನ್ನೆ ಕಳುಹಿಸಿ ಅಲ್ಲಿಯ ಆಸ್ಪತ್ರೆಯಲ್ಲಿ ಕೆಲಸ ಕಾರ್ಯಗಳು ಹೇಗೆ ನಡೆಯುತ್ತಿವೆ, ಅಲ್ಲಿ ಕೆಲಸ ಮಾಡತಕ್ಕ ಆ ಡಾಕ್ಟರುಗಳ ಮನೋಭಾವನೆ, ಅವರ ಆ ಒಂದು ಮನೋವೃತ್ತಿ ಹೇಗೆ ಇರುತ್ತದೆ ಎಂಬುದನ್ನು ಅಭ್ಯಾಸಮಾಡಿಕೊಂಡು ಬರುವುದು ಬಹಳ ಪ್ರಾಮುಖ್ಯವೆಂದು ನನಗೆ ತೋರುತ್ತದೆ. ಈ ದಿವಸ ನಮ್ಮ ಡಾಕ್ಟರುಗಳ ರೂಮಿನ ಗೋಡೆ ಮೇಲೆ ಒಂದು ದೊಡ್ಡ ಬೋರ್ಡ್‌ನೋ ಇರುತ್ತೆ. ಆದರೆ ಅವರಲ್ಲಿ ಅಂಥಾ ದೊಡ್ಡ ಮನೋಭಾವನೆ ಮಾತ್ರ ಇರುವುದಿಲ್ಲ. ನಾವು ಸಾರ್ವಜನಿಕರ ಹಣದಲ್ಲಿ ಕೋಟಿಗಟ್ಟಲೇ ಈ ಡಾಕ್ಟರುಗಳಿಗೆ ಸಂಬಳ ಸಾರಿಗೆ ಕೊಟ್ಟು ಕೋಟ್ಯಾಂತರ ರೂ.ಗಳನ್ನು ಈ ಆಸ್ಪತ್ರೆಗಳಿಗಾಗಿ ಖರ್ಚು ಮಾಡುತ್ತಿದ್ದರೆ ಈ ದಿವಸ ಈ ಸರ್ಕಾರಿ ಆಸ್ಪತ್ರೆಗಳಿಂದ ಯಾರಿಗೆ ಪ್ರಯೋಜನವಾಗುತ್ತಿದೆಯೆಂದರೆ—ಮಂತ್ರಿಗಳಿಗೆ, ಮಂತ್ರಿಗಳ ಅಳಿಯಂದಿರುಗಳಿಗೆ, ಮಂತ್ರಿಗಳ ಮಕ್ಕಳಿಗೆ ಹಾಗೂ ಅವರ ಸ್ನೇಹಿತರಿಗೆ ಅಥವಾ ಅವರು ಶಿಫಾರ್ಸು ಮಾಡತಕ್ಕವರಿಗೆ. ಇಷ್ಟುವಿನಾ ಈ ದೊಡ್ಡ ದೊಡ್ಡ ಮೆಡಿಕಲ್ ಇನ್‌ಸ್ಟಿಟ್ಯೂಷನ್‌ಗಳಿಂದ ಈ ದಿವಸ ಹಳ್ಳಿಗಾಡಿನ ಜನರಿಗೆ ಸುತರಾಂ ಪ್ರಯೋಜನವಾಗುತ್ತಿಲ್ಲ. ಇದನ್ನು ಮಂತ್ರಿಗಳು ಪರೀಕ್ಷೆಮಾಡಿ ನೋಡಬಹುದು — ಆಗ ಅವರಿಗೇ ನಾನು ಹೇಳುತ್ತಿರುವುದು ಸರಿ ಎಂದು ಗೊತ್ತಾಗುತ್ತದೆ. ಈ ದಿವಸ ಈ ಮಂತ್ರಿಗಳ ಆಸ್ಪತ್ರೆ ಪರೀಕ್ಷೆಯಾದರೂ ಹೇಗೆ ನಡೆಯುತ್ತಿದೆ ಎಂದರೆ-ಇವರು ಆ ಆಸ್ಪತ್ರೆಗಳ ಇನ್‌ಸ್ಪೆಕ್ಷನ್‌ಗೆ ಹೋಗುವ ಮೊದಲೇ ಪ್ರೋಗ್ರಾಂ ಕೊಟ್ಟು ಹೋಗುತ್ತಾರೆ. ಅಂದಾಗ ಇವರಿಗೆ ಅಲ್ಲಿಯ ಹುಳುಕು ಹೇಗೆ ಗೊತ್ತಾಗುತ್ತದೆ? ಇವರು ಆ ಆಸ್ಪತ್ರೆಗೆ ಹೋದಕೂಡಲೆ ಅಲ್ಲಿಯ ಡಾಕ್ಟರುಗಳು ಇವರನ್ನು 10-15 ರೂ.ಗಳ ವಾರ್ಡಿಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲೆಲ್ಲ ಸಾಮಾನ್ಯವಾಗಿ ದೊಡ್ಡ ದೊಡ್ಡ ಶ್ರೀಮಂತರ ಮನೆಯ ಪೇಷಂಟುಗಳಿರುತ್ತಾರೆ. ಅಂಥಾವರನ್ನು ತೋರಿಸಿ ಬಿಡುತ್ತಾರೆ. ಆಗ ಈ ಮಂತ್ರಿಗಳು ನಮ್ಮ ಡಾಕ್ಟರುಗಳೆಲ್ಲ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಂತ ತಿಳಿದುಕೊಳ್ಳುತ್ತಾರೆ. ಈ ದಿವಸ ಈ ಸರ್ಕಾರಿ ಆಸ್ಪತ್ರೆಗಳಲ್ಲಿ ನಿಜವಾಗಿಯೂ ಏನು ನಡೆಯುತ್ತಿದೆ ಎಂಬುದನ್ನು ಪರಿಶೀಲನೆ ಮಾಡತಕ್ಕ ಇರಾದೆ ನಮ್ಮ ಮಂತ್ರಿಗಳಿಗಿದ್ದರೆ ಅವರು ಆ ಜನರಲ್ ವಾರ್ಡುಗಳಿಗೆ ಹೋಗಿ ಅಲ್ಲಿರತಕ್ಕ ಸ್ಥಿತಿಗತಿಗಳೇನು ಅನ್ನುವುದನ್ನು ಪರೀಕ್ಷೆ ಮಾಡಬೇಕು. ಆಗಲೇ ಇವರಿಗೆ ನಿಜಸ್ಥಿತಿ ಗೊತ್ತಾಗುವುದು. ಈ ದಿವಸ ಅಲ್ಲಿರತಕ್ಕ ಆ ನರ್ಸುಗಳೂ, ಡಾಕ್ಟರುಗಳೂ ಆ ರೋಗಿಗಳಿಗೆ ಕೊಡಬೇಕಾದ ಬೆಲೆ ಬಾಳತಕ್ಕ ಅನೇಕ ಇಂಜಕ್ಷನ್‌ಗಳನ್ನು 20-30 ರೂ.ಗಳ ಬೆಲೆಯಾಗತಕ್ಕ ಇಂಜಕ್ಷನ್ ಟ್ಯೂಬುಗಳನ್ನೂ ನೂರಾರು ಮಾತ್ರೆಗಳನ್ನು ಆ ರೋಗಿಗಳಿಗೆ ಉಪಯೋಗ ಮಾಡದೆ ಹಾಗೆ ಜೋಬಿನಲ್ಲಿ ತುಂಬಿಕೊಂಡು ಅದೇ ವಿಕ್ಟೋರಿಯಾ ಆಸ್ಪತ್ರೆಯ ಎದುರಿಗಿರುವ ಡ್ರಗ್ ಷಾಪುಗಳಿಗೆ ಮಾರಾಟಮಾಡುತ್ತಿದ್ದಾರೆ. ಈ ಸಂಬಂಧದಲ್ಲಿ ನನಗೆ ಒಬ್ಬ ಡಾಕ್ಟರು ಮಾಡಿದ ಕೃತ್ಯ ಜ್ಞಾಪಕಕ್ಕೆ ಬರುತ್ತದೆ. ನಾನು ಅವರ ಹೆಸರನ್ನು ಈಗ ಹೇಳುವುದಿಲ್ಲ. ಏನಾಯಿತು ಎಂದರೆ ಒಂದಾವರ್ತಿ ಒಬ್ಬ ಹುಡುಗ ಚೆಂಡಾಡುತ್ತ ಕೈ ಮುರಿದುಕೊಂಡಿದ್ದನು. ಅವನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ—ಆಗ ಅಲ್ಲಿದ್ದ ಡಾಕ್ಟರು ಈಗ R. M. O. ಅವರಿಲ್ಲ. ಇದಕ್ಕೆ ಆಂಟಿ ಗ್ಯಾಂಗ್ ಇಂಜೆಕ್ಷನ್ ಟ್ಯೂಬ್ ಬೇಕು. ಈಗಲೇ ಇಂಜಕ್ಷನ್ ಕೊಡಬೇಕೆಂದರೆ ನೀವು ಬೇರೆ ಷಾಪಿನಲ್ಲಿ ಹೋಗಿ ತಂದುಕೊಟ್ಟರೆ ಈಗಲೇ ಇಂಜಕ್ಷನ್ ಕೊಡುತ್ತೇನೆಂದು ಹೇಳಿ ಆ ಟ್ಯೂಬನ್ನು ತರಿಸಿಕೊಂಡು ಇಂಜಕ್ಷನ್ ಮಾಡಿದರು. ಆದರೆ ಆ ಮಾರನೇ ದಿವಸ R. M. O. ಹತ್ತಿರ ಹೋಗಿ ಆ ಹುಡುಗನ ಹೆಸರಿನಲ್ಲಿ ಅದೇ ಇಂಜಕ್ಷನ್ ಟ್ಯೂಬ್ ಖರ್ಚುಹಾಕಿ ಅದನ್ನು ಆ ಡಾಕ್ಟರು ಅವರ ಜೇಬಿಗೆ ಬಿಟ್ಟರೆಂಬ ವಿಚಾರ ಗೊತ್ತಾಯಿತು. ಆದರೂ ಆ ಹುಡುಗನಿಗೆ ಕೈ ಬರಲೇ ಇಲ್ಲ. ಒಂದೇ ಕೈ ಆಯಿತು. ಇಲ್ಲಿಗೆ 2 ವರ್ಷಗಳ ಹಿಂದೆ ಇನ್ನೊಬ್ಬ ಸರ್ಕಾರಿ ಡಾಕ್ಟರು ಏನು ಮಾಡಿದರು ಅಂದರೆ...

Mr. SPEAKER.—If he has got a more recent instance, give it to the Minister and he will certainly look into it.

ಶ್ರೀ ಬಿ. ಚನ್ನಬೈರೇಗೌಡ.—ಹಾಗಾದರೆ ಕಳೆದ ವರ್ಷ ನಡೆದ ವಿಚಾರವನ್ನೇ ಹೇಳುತ್ತೇನೆ. ಈ ವಿಚಾರ ನಡೆದದ್ದು ಈಗ ಹಾಲಿ ಇರತಕ್ಕ ಮಂತ್ರಿಗಳ ಕಾಲದ್ದೇ. ಶಾಂತಮಲ್ಲಪ್ಪ ಅಂತ ಒಬ್ಬ ಲಾರಿ ಮಾಲೀಕ ಆತನಿಗೆ ಒಂದು ಆಕ್ಸಿಡೆಂಟ್ ಆಗಿತ್ತು. ಆತನನ್ನು ಇದೇ ಬೆಂಗಳೂರಿನಲ್ಲಿರತಕ್ಕ

ಬೌರಿಂಗ್ ಆಸ್ಪತ್ರೆಗೆ ಕರೆದುಕೊಂಡು ಹೋದೆನು. ಆತನಿಗೆ ಕಾಲು ಮುರಿದಿತ್ತು. ಆದರೆ ಆತನಿಗೆ ಚಿಕಿತ್ಸೆ ಮಾಡುವಾಗ ಆ ಘಾಯದಲ್ಲಿ ಸೇರಿದ್ದ ಮಣ್ಣು—ಕಸ ಕಡ್ಡಿಗಳನ್ನು ಸರಿಯಾಗಿ ತೆಗೆಯದೆ ಟ್ರೀಟ್‌ಮೆಂಟ್ ಕೊಟ್ಟಿದ್ದರಿಂದ ಮೂರು ತಿಂಗಳಾದರೂ ಆತನಿಗೆ ವಾಸಿಯಾಗಲೇ ಇಲ್ಲ. ಅರ್ಧ-ಮುಕ್ಕಾಲು ಕಾಲನ್ನೇ ಆಪರೇಟ್ ಮಾಡಿಬಿಟ್ಟರು. ಹೀಗೆ ಎಷ್ಟೋ ತಾತ್ಸಾರಮಾಡಿದ ನಿದರ್ಶನಗಳಿವೆ. ನಮಗೆ ಜಾಯಿಂಟ್ ರೆಸ್‌ಪಾನ್ಸಿಬಿಲಿಟಿಯಿದೆ, ನಾವು ಗಾಂಧೀ ಭಕ್ತರು, ಗಾಂಧಿ ನೆರಳಲ್ಲಿ ಕೆಲಸ ಮಾಡತಕ್ಕವರು ಅಂತ ಹೇಳಿಕೊಳ್ಳತಕ್ಕ ಜನರು ಮಾಡತಕ್ಕ ಕೆಲಸ ಇದೇನೇ ಎಂತ ಕೇಳುತ್ತೇನೆ ? ಮಾತೆತ್ತಿದರೆ ನಮ್ಮ ಸರ್ಕಾರ ಯಾವ ರಾಜ್ಯಕ್ಕೂ ಹಿಂದೆ ಬಿದ್ದಿಲ್ಲ ಅಂತ ಬೇರೆ ಹೇಳಿಕೊಳ್ಳುತ್ತಿದ್ದಾರೆ. ಇದಕ್ಕೆ ಒಂದು ನಿದರ್ಶನ ಹೇಳುತ್ತೇನೆ. ನಾನೇ ಒಂದುಸಾರ್ತಿ ಒಂದು ಕೇಸನ್ನು ಆಸ್ಪತ್ರೆಗೆ ತಂದಿದ್ದೆ. ಅಲ್ಲಿ ದೇಶಕ್ಕೇ ದೊಡ್ಡ ಡಾಕ್ಟರ್ ಇದ್ದರು. ಅವರು ಎರಡುಸಾರ್ತಿ ಆಪರೇಷನ್ ಮಾಡಿ, ಮೂರನೇ ಸ್ಟೇಜಿನಲ್ಲಿ ಇದು ಇಲ್ಲಿ ವಾಸಿಯಾಗುವುದಿಲ್ಲ, ಮೂಳೆ ಗಂಟು ಕಟ್ಟಿದೆ, ಕ್ಯಾನ್ಸರ್ ಆಗಿದೆ ಎಂತ ಹೇಳಿ ಕಳುಹಿಸಿಬಿಟ್ಟರು. ಅನಂತರ ಆ ಪೇಷಂಟನ್ನು ನಾನೇ ಕೋಲಾರದಲ್ಲಿರತಕ್ಕ ಮಿಷನ್ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಅಲ್ಲಿ ಕೇಸು ಏನು ಅಂತ ಕೇಳಿದರು—ಆಗ ನಾನು ಕ್ಯಾನ್ಸರ್ ಎಂತ ಹೇಳಿದೆ. ಅದಕ್ಕೆ ಅಲ್ಲಿದ್ದ ಡಾಕ್ಟರು ನಕ್ಕು—ನಿಮಗೆ ಕ್ಯಾನ್ಸರ್ ಎಂತ ಯಾರ ಹೇಳಿದರು ಎಂದು ಕೇಳಿದರು. ನಾನು ಮೊದಲು ಟ್ರೀಟ್‌ಮೆಂಟ್ ಕೊಟ್ಟಿದ್ದ ಸರ್ಜನ್ನರ ಹೆಸರನ್ನು ಹೇಳಿದೆ. ಆಗ ಅವರು ನಕ್ಕು ಸುಮ್ಮನಾಗಿಬಿಟ್ಟರು. ಆದರೆ ಅವರು ಅಲ್ಲಿ ಆತನಿಗೆ ಟ್ರೀಟ್‌ಮೆಂಟನ್ನು ಕೊಟ್ಟರು. ಈಗ ಆತ ಚೆನ್ನಾಗಿ ಬದುಕಿಕೊಂಡು ಸುಖವಾಗಿದ್ದಾನೆ. ಆದರೆ ನಾನು ಹೇಳುವುದಿಷ್ಟೇ. ಇಲ್ಲಿ ನಮ್ಮ ಡಾಕ್ಟರುಗಳಿಗೆ ಸರ್ಜನ್‌ಗಳಿಗೆ ವಿದ್ಯೆ ಇಲ್ಲ ಅಂತ ಹೇಳುವುದಿಲ್ಲ. ಇವರಲ್ಲೂ ಬೇಕಾದಷ್ಟು ವಿದ್ಯೆ ಇದೆ. ಆದರೆ ಇವರಿಗೆ ಹಾರ್ಟ್ ಇಲ್ಲ. ಆದ್ದರಿಂದ ಇವರಿಗೆ ಒಬ್ಬ ರೋಗಿ ಆಸ್ಪತ್ರೆಗೆ ಹೋದರೆ ಅವನೊಂದಿಗೆ ಹೇಗೆ ಮಾತನಾಡಬೇಕು, ಆತನಿಗೆ ಏನು ಟ್ರೀಟ್‌ಮೆಂಟು ಕೊಡಬೇಕು ಎನ್ನತಕ್ಕ ಈ ಬಾಬುಗಳು ಇವರಿಗೆ ಗೊತ್ತಿಲ್ಲ ಎಂಬ ಅಂಶವನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಪರಿಸ್ಥಿತಿ ಹೀಗೇ ಮುಂದುವರಿಯುವುದಾದರೆ ಸಾರ್ವಜನಿಕರಿಗೆ ಈ ಸರ್ಕಾರಿ ಆಸ್ಪತ್ರೆಗಳ ಅವಶ್ಯಕತೆ ಇರುವುದಿಲ್ಲ—ಇದ್ದರೂ ಇವುಗಳಿಂದ ಅವರಿಗೇನೂ ಪ್ರಯೋಜನವೂ ಆಗುವುದಿಲ್ಲ. ಆದುದರಿಂದ ಈಗಿರತಕ್ಕ ಸರ್ಕಾರಿ ಆಸ್ಪತ್ರೆಗಳನ್ನೆಲ್ಲ ನಿಲ್ಲಿಸಿ—ಈ ಕಟ್ಟಡಗಳನ್ನು ಆ ಪ್ರೈವೇಟ್ ಡಾಕ್ಟರುಗಳಿಗಾದರೂ ಕೊಟ್ಟರೆ ಇದರಿಂದ ಸರ್ಕಾರಕ್ಕೆ ಈಗ ಆಗುತ್ತಿರುವ ಅಪಾರ ವೆಚ್ಚವೂ ತಪ್ಪುತ್ತದೆ ಮತ್ತು ಸರ್ಕಾರಕ್ಕೆ ಈ ಕಟ್ಟಡಗಳಿಂದ ಬಾಡಿಗೆ ರೂಪದಲ್ಲಿ ಹೆಚ್ಚಿನ ವರಮಾನ ಬರುತ್ತದೆ. ಈಗ ಆ ಸಾಮಾನ್ಯ ಜನರು ಸಾಮಾನ್ಯ ವಾರ್ಡಿಗೆ ಹೋಗಿ ಅಲ್ಲಿ ಸಾಯುವುದನ್ನು ಕೂಡ ತಪ್ಪಿಸಿದಹಾಗೆ ಆಗುತ್ತದೆ. ಈ ದಿವಸ ಈ ದೊಡ್ಡ ದೊಡ್ಡ ಆಸ್ಪತ್ರೆಗಳಿರುವುದು ಸಾಮಾನ್ಯ ಜನರಿಗಾಗಿ ಅಲ್ಲ. ಇವುಗಳೇನಿದ್ದರೂ ದೊಡ್ಡ ಶ್ರೀಮಂತರಿಗೂ—ಮಂತ್ರಿಗಳಿಗೂ ಇರುತ್ತವೆ. ಇಂಥಾ ಬಾಬಿಗೆ ನಾವೇಕೆ ಈ ದಿವಸ ಈ 8 ಕೋಟಿ ರೂ.ಗಳನ್ನು ಖರ್ಚು ಮಾಡಬೇಕು ? ಈಗ ಸರಿಯಾಗಿ ಲೆಕ್ಕ ಹಾಕಿದರೆ ಈ ಮೆಡಿಕಲ್ ಅಂಡ್ ಪಬ್ಲಿಕ್ ಹೆಲ್ತ್ ಬಾಬಿಗೆ ಈ ರೆಗ್ಯುಲರ್ ಬಡ್ಜೆಟ್ಟಿನಲ್ಲೇನೊ 8 ಕೋಟಿ ರೂ.ಗಳನ್ನು ಕೇಳಿದ್ದಾರೆ. ನಾಳೆ ಸಪ್ಲಿಮೆಂಟರಿ ಗ್ರ್ಯಾಂಟ್ ರೂಪದಲ್ಲಿ ಏನಿಲ್ಲ ಅಂದರೂ ಮತ್ತೆ ಒಂದು ಕೋಟಿ ರೂ.ಗಳನ್ನು ಕೇಳುತ್ತಾರೆ. ಹೀಗೆ ಈ 9 ಕೋಟಿ ರೂ.ಗಳ ಖರ್ಚನ್ನು ನಾವು ಉಳಿಸಿದಂತಾಗುತ್ತದೆ. ಜನರಿಗೂ ಕೂಡ ಇದರಿಂದ ಅಂಥಾ ಅನಾನುಕೂಲವೇನೂ ಆಗುವುದಿಲ್ಲ—ಸರ್ಕಾರಕ್ಕೂ ದುಡ್ಡು ಉಳಿತಾಯವಾಗುತ್ತದೆ. ಇದರಿಂದ ದೇಶಕ್ಕೊಂದು ಹೆಚ್ಚಿನ ಲಾಭಬಂದ ಹಾಗಾಗುತ್ತದೆ. ಆದ್ದರಿಂದ ನಾನು ಮಾಡತಕ್ಕ ಸಲಹೆ ಏನೆಂದರೆ ಈ ಸರ್ಕಾರಿ ಆಸ್ಪತ್ರೆಗಳನ್ನೆಲ್ಲ ರದ್ದು ಮಾಡಬೇಕು ಇಲ್ಲವೇ ಈ ನಮ್ಮ ಡಾಕ್ಟರುಗಳ ಹೃದಯ ಪರಿವರ್ತನೆ ಮಾಡಲು ಏನಾದರೂ ಅವಕಾಶವಿದ್ದರೆ ಮಾಡಿ ಅದನ್ನು ಮಾಡಿ ಈ ಆಸ್ಪತ್ರೆಗಳನ್ನು ನಡೆಸಿ ಇಲ್ಲವೇ ಇವುಗಳನ್ನೆಲ್ಲ ರದ್ದು ಮಾಡಿ ಈ ಬಿಲ್ಡಿಂಗುಗಳನ್ನೆಲ್ಲ ಬಾಡಿಗೆಗೆ ಕೊಟ್ಟುಬಿಡಿ ಎಂತ ಹೇಳುತ್ತಿದ್ದೇನೆ.

ಹೊಸಕೋಟೆ ಟೌನಿನಲ್ಲಿ ಒಬ್ಬ ಡಾಕ್ಟರಿದ್ದರು. ಅವರು ಒಬ್ಬ ಹೆಂಗಸನ್ನು ಅಡಿಗೆ ಕೆಲಸಕ್ಕೆ (cook) ನೇಮಿಸಿಕೊಂಡಿದ್ದರು. ಅವರು ಅಡಿಗೆ ಮಾಡಲು ಪಾತ್ರೆ, ಪದಾರ್ಥಗಳೊಂದೂ ಇರುವುದಿಲ್ಲ. ಅವರಿಗೆ ತಿಂಗಳಿಗೆ ಸಂಬಳ 80-100 ರೂಪಾಯಿಗಳು. ಡಾಕ್ಟರು ತಮ್ಮ ವ್ಯವಹಾರಕ್ಕೋಸ್ಕರ ಆಕೆಯನ್ನು ಅಡಿಗೆಯ ಕೆಲಸಕ್ಕೆ ನೇಮಿಸಿಕೊಂಡಿದ್ದರು. ನಾನು ಮುನಿಸಿಪಲ್ ಪ್ರೆಸಿಡೆಂಟ್ ಆಗಿದ್ದಾಗ ಆ ಡಾಕ್ಟರನ್ನು ವರ್ಗ ಮಾಡಬೇಕೆಂದು ಕಾಗದ ಬರೆದೆ. ಡೈರೆಕ್ಟರ್ ಆಫ್ ಪಬ್ಲಿಕ್ ಹೆಲ್ತ್ ಮತ್ತು ಚೀಫ್‌ಸೆಕ್ರೆಟರಿಯವರಿಗೆ ಕಾಗದ ಬರೆದೆ.

12 NOON

MR. SPEAKER.—When was the letter written to Government ?

ಶ್ರೀ ಬಿ. ಚನ್ನಬೈರೇಗೌಡ.—ಶಾರಿಖು ಜ್ಞಾಪಕವಿಲ್ಲ. ಸುಮಾರು ಒಂದೂವರೆ ವರ್ಷವಾಯಿತು.

ಅಮೇಲೆ ಹೆಲ್ತ್ ಆಫೀಸರ್ ಬಂದು enquiry ಮಾಡಿದರು. ಡಾಕ್ಟರು ಒಪ್ಪಿಕೊಂಡು ತಮ್ಮ ತಪ್ಪನ್ನು ಕ್ಷಮಿಸಬೇಕೆಂದು ಪ್ರಾರ್ಥಿಸಿದರು. ಡಾಕ್ಟರು ತಮ್ಮ ತಪ್ಪನ್ನು ಒಪ್ಪಿಕೊಂಡ ಮೇಲೆ ಸಹ ಅವರನ್ನು ಅಲ್ಲಿಯೇ ಇಟ್ಟು, ಏನೂ ತಪ್ಪು ಇಲ್ಲದೆ ಇದ್ದರೂ ಅಡಿಗೆಯಾಕೆಯನ್ನು ವರ್ಗಮಾಡಿದರು. ಇಂಥ ಸಂದರ್ಭಗಳು ಅನೇಕವಿರುತ್ತವೆ. ಈ ಬಾಬುಗಳಿಗೆ ಎಂಟುಕೋಟಿ ರೂಪಾಯಿಗಳನ್ನು ದೇಶದ ದುಡ್ಡನ್ನು ಕೊಡುತ್ತಿರುವಾಗ ಸರಿಯಾದ ಹತೋಟಿ ಮತ್ತು ವ್ಯವಸ್ಥೆಯನ್ನಿಟ್ಟು ಕೊಂಡು, ಸರಿಯಾದ ನಿಗಾವಣೆ ಇಟ್ಟು ಕೆಲಸ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ (ದೇವನಹಳ್ಳಿ).—ಸ್ವಾಮಿ, ಆರೋಗ್ಯ ಮಂತ್ರಿಗಳು ನಮ್ಮೆದುರಿಗೆ ಇಟ್ಟಿರುವ ಬೇಡಿಕೆಗಳನ್ನು ಸಂಪೂರ್ಣವಾಗಿ ಅನುಮೋದಿಸುತ್ತ ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣಾ ಇಲಾಖೆಗಳಲ್ಲಿರುವ ಕೆಲವೊಂದು ನ್ಯೂನತೆಗಳನ್ನು ತಮ್ಮ ಗಮನಕ್ಕೆ ತರಬೇಕು ಮತ್ತು ಆ ನ್ಯೂನತೆಗಳನ್ನು ಸರಿಪಡಿಸಬೇಕು ಎಂದು ಸಲಹೆ ಮಾಡುವುದಕ್ಕೋಸ್ಕರ ನಾಲ್ಕು ಮಾತುಗಳನ್ನು ಹೇಳುತ್ತೇನೆ ಸ್ವಾಮಿ.

ಪ್ರಾರಂಭದಲ್ಲಿ ನಾನು ವಿಕ್ಟೋರಿಯಾ ಆಸ್ಪತ್ರೆಯ ವಿಷಯ ಸ್ವಲ್ಪ ಹೇಳುತ್ತೇನೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ Spirit lamps ಉರಿಸುವುದಕ್ಕೆ ಸ್ಪಿರಿಟ್ ಇಲ್ಲದೆ ಅದಕ್ಕೆ Tr. Iodine ಹಾಕಿ ಪರೀಕ್ಷಾ ಕೆಲಸಗಳಿಗೆ ಉಪಯೋಗಿಸುತ್ತಿದ್ದಾರೆಂದು ಕೇಳಿದ್ದೇನೆ. ಸ್ಪಿರಿಟ್ ವೆಚ್ಚ ಕಡಮೆ ಮತ್ತು Tr. Iodine ವೆಚ್ಚ ಬಹಳ ಜಾಸ್ತಿ ಎಂದು ವೈದ್ಯರು ಹೇಳುತ್ತಾರೆ. ಇಲ್ಲಿಗೆ ಸ್ಪಿರಿಟ್ ಏಕೆ ಸಪ್ಲೈ ಮಾಡುತ್ತಿಲ್ಲ ಅಥವಾ ಸಪ್ಲೈ ಮಾಡಿದ ಸ್ಪಿರಿಟ್ ಎಲ್ಲಿ ಹೋಯಿತು ಎನ್ನುವುದರ ಕಡೆ ಗಮನ ಕೊಟ್ಟು ಚೆಕ್‌ಮಾಡಬೇಕೆಂದು ಮಂತ್ರಿಗಳಿಗೆ ಹೇಳುತ್ತೇನೆ.

Wheel chairs, stretchers. ಇವುಗಳ ಚಕ್ರಗಳಿಗೆ ರಬ್ಬರ್ ಹಾಕಿ ಎಷ್ಟೋ ದಿವಸಗಳಾಗಿವೆ. ಇವುಗಳನ್ನು ತಳ್ಳಿಕೊಂಡು ಹೋಗುವಾಗ ಕಟ ಕಟ ಶಬ್ದವಾಗುತ್ತ ಪಕ್ಕದಲ್ಲಿರುವ ರೋಗಿಗಳು ಇದೇನು ಬಂತಪ್ಪ ಎಂದು ಎದ್ದು ನೋಡುವ ಪರಿಸ್ಥಿತಿ ಇದೆ. Wheel chairs and stretchers ಇಷ್ಟೊಂದು ಅಧ್ವಾನವಾಗಿರುವಾಗ ಅವುಗಳನ್ನು ರಿಪೇರಿ ಮಾಡಿಸಿಲ್ಲ. ಇವು ಬಂದು ಎಷ್ಟು ಕಾಲವಾಯಿತೋ ಗೊತ್ತಿಲ್ಲ. ಇದನ್ನು ಡಾಕ್ಟರಾಗಿರುವ ನಮ್ಮ ಆರೋಗ್ಯ ಮಂತ್ರಿಗಳು ಚೆನ್ನಾಗಿ ಪರೀಕ್ಷೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇದಲ್ಲದೆ ಅಲ್ಲಿಗೆ ಕೊಟ್ಟಿರತಕ್ಕ ಚಾಕುಗಳು ಮತ್ತು ಕತ್ತರಿಗಳು ಯಾವ ಕಾಲದಲ್ಲಿ ಬಂದವೋ ಗೊತ್ತಿಲ್ಲ. ಇದನ್ನು ಕೂಡ ಮಾನ್ಯ ಮಂತ್ರಿಗಳು ಪರೀಕ್ಷೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಚ್ಚುಗಳನ್ನು ಇಟ್ಟುಕೊಂಡಿದ್ದಾರೆ.

ಶ್ರೀ ಆರ್. ಮುನಿಸ್ವಾಮಯ್ಯ.—ಇದ್ದರೂ ಇರಬಹುದು.

ಆಹಾರ ಪದಾರ್ಥಗಳಿಗೆ ವರ್ಷಕ್ಕೆ ಒಂದು ಸಲ ಟೆಂಡರ್ ಕರೆಯುತ್ತಾರೆಂದು ಕೇಳಿದ್ದೇನೆ. ಈ ಟೆಂಡರ್ ಒಂದು ಸಲ ಕೊಟ್ಟರೆ ಅದು ಮೂರು ವರ್ಷವಾದರೂ approve ಆಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಸರ್ಕಾರಕ್ಕೆ ಬಂದು approve ಆಗಿ ಹಿಂದಕ್ಕೆ ಹೋಗುವುದರಲ್ಲಿ ಬಹಳ ತಡವಾಗುತ್ತದೆಂದು ಕೇಳಿದ್ದೇನೆ. ಎಷ್ಟೋ ದಿನಗಳಲ್ಲಿ diet, ಮೊಟ್ಟೆ ಮತ್ತು ಹಣ್ಣುಗಳು ಮೊದಲಾದವುಗಳನ್ನು ಸಕಾಲದಲ್ಲಿ ರೋಗಿಗಳಿಗೆ ಕೊಡದೆ ನೀವೇ ತರಿಸಿಕೊಳ್ಳಿ, ಹೊರಗಿನಿಂದ ತರಿಸಿಕೊಳ್ಳಿ ಎಂದು ಹೇಳುತ್ತಾರಂತೆ. ಈ ಕಡೆಗೂ ಗಮನ ಕೊಡಬೇಕೆಂದು ಹೇಳುತ್ತೇನೆ.

ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಆಸ್ಪತ್ರೆಗಳಿವೆ. ಅನೇಕರು ಸ್ಪೆಷಲ್ ವಾರ್ಡಿನಲ್ಲಿರುವುದಕ್ಕೆ ಶಕ್ತಿಯಿರುವವರು, ಹೆಚ್ಚಿನ ಸೌಲಭ್ಯಗಳನ್ನು ಪಡೆಯತಕ್ಕ ಶಕ್ತಿಯಿರುವವರೂ ಹೋಗಿ ಜನರಲ್ ವಾರ್ಡ್‌ಗಳಲ್ಲಿ ಸೇರಿಕೊಂಡು ಸ್ಪೆಷಲ್ ವಾರ್ಡ್‌ಗಳಿಗೆ ಕೊಡಬೇಕಾದ ಹಣವನ್ನು ಕಳ್ಳತನದಲ್ಲಿ ಉಳಿಸಿಕೊಳ್ಳುತ್ತಾರೆಂದು ಕೇಳಿದ್ದೇನೆ. ಅದಕ್ಕೆ ಒಬ್ಬ assessing ಆಫೀಸರನ್ನು ಹಾಕಿ, ರೋಗಿಗಳು ಆದಾಯವನ್ನು ಕಡಮೆ ಕೊಡದೆ ಇರುವ ಹಾಗೆ ಮಾಡಿದರೆ ಆಸ್ಪತ್ರೆಗಳ ವರಮಾನವನ್ನು ಹೆಚ್ಚಿಸಬಹುದೆಂದು ನಾನು ಅಭಿಪ್ರಾಯ ಪಡುತ್ತೇನೆ.

ವೈದ್ಯಕೀಯ ಸಹಾಯಕ್ಕೆ ಬಂದಂಥ ರೋಗಿಗಳಿಂದಲೇ ಆಸ್ಪತ್ರೆಗಳಲ್ಲಿ ಸರಿಯಾದ ವರಮಾನವನ್ನು ತಿಳಿದುಕೊಳ್ಳುವುದಕ್ಕೆ ಆಗದೆ ಹೋದರೆ, ಅವರ ಖಾಯಂ ವಿಳಾಸಗಳನ್ನು ಪಡೆದು ಆಯಾ ಸ್ಥಳಗಳಿಂದ ಮಾಹಿತಿಯನ್ನು ಪಡೆದು ಅವರಿಂದ ಬರಬೇಕಾಗುವ ಹಣವನ್ನು ವಸೂಲ್ಮಾಡಬೇಕು. ಒಂದು ವೇಳೆ ತಕ್ಷಣ ವಸೂಲ್ಮಾಡುವುದಕ್ಕೆ ಆಗದೆ ಇದ್ದ ಪಕ್ಷದಲ್ಲಿ ನಿಧಾನವಾಗಿಯಾದರೂ ಸ್ಥಳದ ತಹಸೀಲ್ದಾರರ ಮೂಲಕ ವಸೂಲ್ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಅನೇಕ ವೇಳೆ ವಿಕ್ಟೋರಿಯಾ, ವಾಣಿವಿಲಾಸ, ಬೌರಿಂಗ್ ಇಂಥ ಆಸ್ಪತ್ರೆಗಳಿಗೆ ರೋಗಿಗಳು ಚಿಕ್ಕ ಚಿಕ್ಕ ಆಸ್ಪತ್ರೆಗಳಿಂದ Barium meal examination, X-ray ಮುಂತಾದುವುಗಳಿಗೆ ಚೀಟಿಗಳನ್ನು ತೆಗೆದುಕೊಂಡು ಬರುತ್ತಾರೆ. ಅಂಥವರಿಗೆ ಹತ್ತು ದಿನಬಿಟ್ಟು ಬನ್ನಿ, Barium meal ಪರೀಕ್ಷೆಗೆ ಆರು ದಿವಸ ಬಿಟ್ಟು ಬನ್ನಿ, ಮತ್ತೊಂದಕ್ಕೆ ಒಂದೆರಡು ದಿವಸ ಬಿಟ್ಟು ಬನ್ನಿ ಎಂದು ಹೇಳುತ್ತಾರೆ. ಹೀಗೆ ಹೇಳಿದರೆ ಹೊರಗಡೆಯಿಂದ ಬಂದ ರೋಗಿಗಳು ಎಷ್ಟೋ ತೊಂದರೆ ಪಡಬೇಕಾಗುತ್ತದೆ. ಆದುದರಿಂದ ಅಂಥವರಿಗೆ ಬಂದ ಕೂಡಲೇ ಪರೀಕ್ಷೆ ನಡೆಸುವುದಕ್ಕೇರ್ಪಾಡಾಗಲೀ, ಹಾಗೆ ಸಾಧ್ಯವಿಲ್ಲದೆ ಇದ್ದರೆ ಬಂದ ಒಂದೆರಡು ದಿನಗಳಲ್ಲಿ ಪರೀಕ್ಷ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಸಲಹೆ ಮಾಡುತ್ತೇನೆ ಮತ್ತು ಇವರು ಅಷ್ಟು ದಿನಗಳು ಇರಲು ವಸತಿ ಸೌಕರ್ಯವನ್ನು ಏರ್ಪಾಡು ಮಾಡಿಕೊಡಬೇಕೆಂದು ಹೇಳುತ್ತೇನೆ.

ಈಗ ಗುಲ್ಬರ್ಗ, ಮತ್ತು ಮಂಗಳೂರುಗಳಲ್ಲಿ ಮೆಡಿಕಲ್ ಕಾಲೇಜುಗಳು ಸ್ಥಾಪಿತವಾಗಬೇಕಾಗಿವೆ. ಮಂಗಳೂರಿನಲ್ಲಿ Chemical facilities ಇರುವುದರಿಂದ ಅಲ್ಲಿ ಒಂದು ಕಾಲೇಜನ್ನು ಸ್ಥಾಪಿಸಬೇಕೆಂದು ಹೇಳುತ್ತೇನೆ.

ಬೆಂಗಳೂರಿನಲ್ಲಿರುವ ಮೆಡಿಕಲ್ ಕಾಲೇಜಿನಲ್ಲಿ ಬಹಳ ದಿನಗಳಿಂದ Lecturers, Assistant Professors ಮತ್ತು Professors ಸ್ಥಳಗಳು ಖಾಲಿ ಬಿದ್ದಿವೆ. ಆದರಿಂದ ಪಾಠಗಳು ಸಾಕಾದಷ್ಟು ರೀತಿಯಲ್ಲಿ ನಡೆಯುತ್ತಿಲ್ಲವೆಂದು ವಿದ್ಯಾರ್ಥಿಗಳು ಹೇಳುತ್ತಿದ್ದಾರೆ. ಖಾಲಿಯಾಗಿರುವ ಸ್ಥಳಗಳಿಗೆ ಜನರನ್ನು ನೇಮಿಸಿ ಪಾಠಗಳು ಸರಿಯಾಗಿ ನಡೆಯುವಂತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ, ಸ್ವಾಮಿ.

ಬೆಂಗಳೂರಿನಲ್ಲಿ ಒಂದು Ch.istian College ಆಗುವುದರಲ್ಲಿದೆ. ಅಲ್ಲಿ ಸೀಟುಗಳನ್ನು ಹಂಚುವಾಗ ಒಂದೇ ಪಂಗಡದವರಿಗೆ, ಪಕ್ಷದವರಿಗೆ, ಜಾತಿಯವರಿಗೆ ಎಲ್ಲ ಸೀಟುಗಳೂ ಹೋಗುತ್ತವೆಯೋ ಏನೋ ಅನ್ನಿಸುತ್ತದೆ. ವೆಲ್ಲೂರಿನಲ್ಲಿರುವ ಕಾಲೇಜಿನಲ್ಲಿ 50 ಸೀಟುಗಳಲ್ಲಿ 46 ಸೀಟುಗಳನ್ನೂ Protestant Christians ಗೆ ಮಾತ್ರ ಮೀಸಲಾಗಿಡುವ ಪದ್ಧತಿ ಇದೆ. ಅದೇ ರೀತಿ ಬೆಂಗಳೂರಿನಲ್ಲಿ ಪ್ರಾರಂಭವಾಗಲಿರುವ ಕಾಲೇಜಿನಲ್ಲಿ Catholic Christians ಗೆ ಎಲ್ಲ ಸೀಟುಗಳನ್ನು ಕೊಟ್ಟು ಬೇರೆಯವರಿಗೆ ಸೀಟು ಸಿಕ್ಕುತ್ತದೆಯೋ ಇಲ್ಲವೋ ಎಂದು ಅನುಮಾನವಿದೆ. ಅದಕ್ಕೋಸ್ಕರವಾಗಿ ಅಲ್ಲಿ ಸೀಟುಗಳನ್ನು ಹಂಚುವ ಕಾಲಕ್ಕೆ ಸರ್ಕಾರದವರು ಪ್ರವೇಶ ಮಾಡಿ ಬೇರೆ ಕಾಲೇಜುಗಳಿಗೆ ಹೇಗೆ ಸೀಟುಗಳನ್ನು ಹಂಚುತ್ತಾರೆಯೋ ಅದೇ ರೀತಿ ಹಂಚುವುದಕ್ಕೆ ಏರ್ಪಾಡು ಮಾಡಬೇಕೆಂದು ಈಗಲೇ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ.

ಬೆಂಗಳೂರು ಕಾಲೇಜಿನಲ್ಲಿ M. D. Course ಪ್ರಾರಂಭಿಸಿದ್ದಾರೆ. ಅದಕ್ಕೆ ಸರ್ಕಾರವನ್ನು ನಾವು ಅಭಿನಂದಿಸಬೇಕು. M. D. Seats ಇಷ್ಟೇ ಇರಬೇಕು ಎಂದು ಖಚಿತವಾಗಿದೆ. ಆದರೆ ಇಲ್ಲಿಗೆ ಸೇರುವುದಕ್ಕೆ ಅವಕಾಶ ಸಿಕ್ಕದೆ ಇರತಕ್ಕ ಕೆಲವು ವೈದ್ಯರು ಹೊರಗಡೆ ಕಲ್ಕತ್ತ, ದೆಹಲಿ, ಲಕ್ನೋ ಇಂಥ ಕಡೆ ಇರುವ ಕಾಲೇಜುಗಳಲ್ಲಿ M. D. ವ್ಯಾಸಂಗಕ್ಕೆ ಸೇರಿ ಹೆಚ್ಚಿನ ತಜ್ಞತೆಯನ್ನು ಪಡೆಯಲು ರಜ ಕೇಳುತ್ತಿದ್ದಾರೆ ಏನೋ ಕಾರಣದಿಂದ ಅವರಿಗೆ ರಜ ಕೊಡುತ್ತಿಲ್ಲ. ಒಂದ — ಡಾಕ್ಟರುಗಳ ಅಭಾವವಿದೆ ಎಂದು ಮೆಡಿಕಲ್ ಕಾಲೇಜುಗಳನ್ನು ಸ್ಥಾಪನೆ ಮಾಡಲು ಹೊರಟಿದ್ದೇವೆ. ಅವುಗಳಿಗೆ ಹೆಚ್ಚಿನ ವಿದ್ಯಾವಂತರನ್ನು ನೇಮಿಸಬೇಕಾಗಿದೆ. ಅದಕ್ಕೋಸ್ಕರವಾಗಿ ಈಗ ಹೆಚ್ಚಿನ ವ್ಯಾಸಂಗಕ್ಕಾಗಿ ಬೇರೆ ಕಾಲೇಜುಗಳಿಗೆ ಹೋಗಲು ರಜ ಕೇಳಿರುವವರಿಗೆ ರಜ ಕೊಡಬೇಕೆಂದು ಹೇಳುತ್ತೇನೆ.

ಇನ್ನೊಂದು ರೀತಿಯ ಪಕ್ಷಪಾತ ನಡೆಯುತ್ತಿರುವ ಹಾಗೆ ಕಾಣುತ್ತದೆ, ಅಮೆರಿಕ, ಇಂಗ್ಲೆಂಡ್ ದೇಶಗಳಿಗೆ ಹೆಚ್ಚಿನ ವ್ಯಾಸಂಗಕ್ಕೆ ಹೋಗಲು ಕೆಲವರು ಅರ್ಜಿಗಳನ್ನು ಕೊಟ್ಟಿದ್ದಾರೆ. ಅವರು ಈಗ ಪರದೇಶಗಳಿಗೆ ಹೋಗಬೇಕಾದ್ದಿಲ್ಲ, ಇಲ್ಲೇ M. D. ಪ್ರಾರಂಭವಾಗಿದೆ ಎಂದು ಕೆಲವರಿಗೆ ಅವಕಾಶ ಕೊಡದೆ ಕೆಲವರಿಗೆ ಮಾತ್ರ ಅವಕಾಶವನ್ನು ಕೊಟ್ಟಿದ್ದಾರೆ. ಇದನ್ನು ಮಂತ್ರಿಗಳು ಚೆನ್ನಾಗಿ ಪರಿಶೀಲನೆ ಮಾಡಿ, ಪಕ್ಷಪಾತ ಏಕೆ ತೋರಿಸಿದ್ದಾರೆ, ಅರ್ಜಿ ಹಾಕಿಕೊಂಡಿರುವ ವಿದ್ಯಾರ್ಥಿಗಳಿಗೆ ಏನು ಅನ್ಯಾಯವಾಗಿದೆ, ಎಂಬುದನ್ನು ನೋಡಿ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

ಇನ್ನೊಂದು ಮುಖ್ಯವಾದ ವಿಷಯವೆಂದರೆ ಬಹಳ ಅನುಭವ ಪಡೆದಂಥ ಉಪಾಧ್ಯಾಯರುಗಳು ಮೆಡಿಕಲ್ ಕಾಲೇಜಿನಿಂದ ಜಾರಿಕೊಂಡು ಹೊರಗೆ ಹೋಗುತ್ತಿದ್ದಾರೆ. ಕಾಲೇಜಿನಲ್ಲಿರುವುದಕ್ಕೆ ಬದಲು ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರೆ private practice ಸಿಕ್ಕುತ್ತದೆಂದು ಕಾಲೇಜಿನ ಲೆಕ್ಚರರ್ ಹುದ್ದೆಯನ್ನು ಬಿಟ್ಟು ಹೊರಗಡೆ ಹೋಗುತ್ತಿದ್ದಾರೆ.

ಹೆಚ್. ಎಂ. ಟಿ. ಮುಂತಾದ ಕಾರ್ಖಾನೆಗಳಲ್ಲಿ ಅಥವಾ ಖಾಸಗೀ ಆಸ್ಪತ್ರೆಗಳಲ್ಲಿ ಪಾರ್ಟ್‌ಟೈಂ ಕೆಲಸ ಮಾಡಲು ಸೇರಿಕೊಂಡು ಸಂಪಾದನೆಮಾಡಿಕೊಳ್ಳುವುದಕ್ಕಾಗಿ, ಕಾಲೇಜು ತರಗತಿಗಳನ್ನು

(ಶ್ರೀ ಆರ್. ಮುನಿಸ್ವಾಮಯ್ಯ)

ತೆಗೆದುಕೊಂಡು ಬೋಧಿಸುವುದಿಲ್ಲ. ಆದರೂ ಅವರು ವಿಕ್ಟೋರಿಯಾ ಆಸ್ಪತ್ರೆ ಎಂದರೆ, ಕಾಲೇಜು ಪಡೆದಿರುವ ಆಸ್ಪತ್ರೆಯಲ್ಲಿ ಉದ್ಯೋಗ ಮಾತ್ರ ಬೇಕೆಂದು ಸೇರಿದ್ದಾರೆ. ಹತ್ತಾರು ವರ್ಷಗಳಿಂದ ಈ ಆಸ್ಪತ್ರೆಗೇನ ಅಲ್ಲದೆ ಬೌರಿಂಗ್ ಆಸ್ಪತ್ರೆಗೂ ಅಂಟಿಕೊಂಡಿದ್ದಾರೆ. ಇಲಾಖೆಯ ಅಧೀನದಲ್ಲಿರುವ ಬೇರೆಬೇರೆ ದೊಡ್ಡ ಆಸ್ಪತ್ರೆಗಳಿಂದ ಅನುಭವಪಡೆದಿರುವ ಹೆಚ್ಚು ಪರಿಣಿತರಾಗಿರುವ ಮತ್ತು ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಬೋಧಿಸುವುದಕ್ಕೂ ಒಪ್ಪಿಕೊಳ್ಳುವ ಡಾಕ್ಟರುಗಳನ್ನು ವರ್ಗ ಮಾಡಿಕೊಂಡು ಬೆಂಗಳೂರಿಗೆ ತರಬೇಕೆಂದು ಹೇಳುತ್ತೇನೆ. ಅಥವಾ ಇಲ್ಲಿರುವ ಡಾಕ್ಟರುಗಳಿಗೆ ಹೊರಗಡೆ ಕಾರ್ಖಾನೆ ಮುಂತಾದುವುಗಳಲ್ಲಿ ಪಾರ್ಟ್‌ಟೈಂ ಕೆಲಸಮಾಡುವುದಕ್ಕೆ ಹೋಗಲು ಅವಕಾಶ ಕೊಡಬಾರದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮೀ, ಈ ಸಭೆಯ ಮುಂದೆ ಇರುವ ವೈದ್ಯ ಮತ್ತು ಜನಾರೋಗ್ಯ ರಕ್ಷಣೆ ಇಲಾಖೆಯ ಬೇಡಿಕೆಗಳನ್ನು ನಾನು ವಿರೋಧಿಸುತ್ತೇನೆ.

ಇತ್ತೀಚೆಗೆ ಸರಕಾರದವರು ಆಸ್ಪತ್ರೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ತೆರೆಯುತ್ತಿದ್ದಾರೆ. ಇದು ಬಹಳ ಸಂತೋಷದ ವಿಷಯ. ಆದರೆ ನಮ್ಮ ಸರಕಾರಕ್ಕೆ ಈ ದೇಶದಲ್ಲಿ ಎಷ್ಟು ಆಸ್ಪತ್ರೆಗಳನ್ನು ತೆರೆದಿದ್ದೇವೆಯೋ ಅದಕ್ಕೆ ತಕ್ಕಷ್ಟು ಜನ ಡಾಕ್ಟರುಗಳು ಇರಬೇಕು ಎನ್ನುವುದು ಅವರ ಲೆಕ್ಕದಲ್ಲಿ ಇದ್ದಹಾಗೆ ಕಾಣಿಸುತ್ತಿಲ್ಲ. ಡಾಕ್ಟರರುಗಳ ಅಭಾವವಿದೆ ಅದನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಸರಕಾರದವರು ನಾನಾ ಸಂದರ್ಭಗಳಲ್ಲಿ ಜನರಿಗೆ ಭರವಸೆ ಕೊಡುತ್ತಿರುತ್ತಾರೆ. ಆದರೆ ಈ ಅಭಾವ ಇನ್ನೂ ಸರಿಹೋಗಲಿಲ್ಲ. ಇದು ಸರಿಹೋಗುವ ಹಾಗೂ ಕಾಣಿಸುವುದಿಲ್ಲ. ಇದಕ್ಕೆ ಕಾರಣವೇನು ಎನ್ನುವುದನ್ನು ಸರಿಯಾಗಿ ಪರಿಶೀಲನೆಮಾಡಿದರೆ ಈ ಇಲಾಖೆಯವರು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲಿಕ್ಕೆ ತಯಾರಾಗಿರುವ ಹಾಗೆ ಕಾಣುತ್ತಿಲ್ಲ. ಪ್ರತಿ ವರ್ಷವೂ ಎಷ್ಟೋ ಡಾಕ್ಟರರುಗಳು ಬೇರೆ ಪ್ರಾಂತ್ಯಗಳಿಗೆ, ನೂರಾರು ಸಂಖ್ಯೆಯಲ್ಲಿ ಹೋಗುತ್ತಿರುವುದನ್ನು ನೋಡುತ್ತಿದ್ದೇವೆ. ಅದಕ್ಕೆ ಕಾರಣ ಸ್ವಾಭಾವಿಕವಾಗಿ ತಿಳಿದದ್ದು. ಬೇರೆ ಪ್ರಾಂತಗಳಲ್ಲಿ ಕೊಡುವ ಸಂಬಳದ ಸ್ಕೇಲುಗಳಿಗೂ ನಮ್ಮ ಪ್ರಾಂತದಲ್ಲಿ ಕೊಡುವ ಸ್ಕೇಲುಗಳಿಗೂ ಏನೇನೂ ಸಂಬಂಧವಿಲ್ಲ. ಬೇರೆ ಪ್ರಾಂತಗಳಲ್ಲಿ ಹೆಚ್ಚಿನ ಸಂಬಳ ಮತ್ತು ಹೆಚ್ಚಿನ ಅನುಕೂಲಗಳು ಈ ದಿನ ಇದೆ ನಮ್ಮ ಪ್ರಾಂತದಲ್ಲಿರುವ ಸ್ಕೇಲುಗಳು ಕಡಿಮೆಯಿರುವುದರಿಂದ, ಡಾಕ್ಟರುಗಳು ಹೊರಗಡೆಗೆ ಹೋಗುತ್ತಿದ್ದಾರೆ.

ಇನ್ನೊಂದು ವ್ಯಸನಕರವಾದ ವಿಷಯ ಇದೆ. ಈ ಇಲಾಖೆಯಲ್ಲಿರುವ ಉನ್ನತ ಅಧಿಕಾರಿಗಳು ಡಾಕ್ಟರುಗಳಾಗಿರುವವರನ್ನು ಪೋಲೀಸು ಇಲಾಖೆಯ ಪೋಲೀಸರಂತೆ ಕನಿಷ್ಟವಾಗಿ ಕಡಿಮೆ ರೀತಿಯಲ್ಲಿ ಕಾಣುತ್ತಾರೆ. ಅವರು ಸಮಾಜದಲ್ಲಿ ಬಹಳ ಮುಖ್ಯವಾದ ಪಾತ್ರ ವಹಿಸತಕ್ಕ ಇಂತಹ ಡಾಕ್ಟರುಗಳನ್ನು ಇಲಾಖೆಯ ಉನ್ನತ ಅಧಿಕಾರಿಗಳು ಸ್ವಲ್ಪ ಕನಿಕರ ದೃಷ್ಟಿಯಿಂದ ನೋಡಿಕೊಂಡು ಅವರ ಸಮಸ್ಯೆಗಳನ್ನು ಬಗೆಹರಿಸಬೇಕು ನನಗೇ ಗೊತ್ತಿರುವ ಹಾಗೆ L. M. P. ಪಾಸಾಗಿರುವ ಡಾಕ್ಟರುಗಳು ಈಚೆಗೆ M. B. B. S. ನ್ನು ಪಾಸುಮಾಡಿ ಕೆಲಸ ಮಾಡುತ್ತಿರುವವರಿಗೆ ಇನ್ನೂ L. M. P. Scale ನ ಸಂಬಳವನ್ನೇ ಕೊಡುತ್ತಿದ್ದಾರೆ. ಇದರ ಬಗ್ಗೆ ಅಧಿಕಾರಿಗಳಲ್ಲಿ ಅವರು ಕೇಳಿಕೊಂಡರೂ ಅದಿನ್ನೂ ಪರಿಹಾರವಾಗಿಲ್ಲ. ಹಾಗೇ ಪರಿಸ್ಥಿತಿ ಮುಂದುವರಿಯುತ್ತಿದೆ. ಡಾಕ್ಟರುಗಳ ಅಭಾವವಿದೆ, ಡಾಕ್ಟರುಗಳನ್ನು ಸರಿಯಾಗಿ ನೋಡಿಕೊಳ್ಳಬೇಕೆಂದು ನಮ್ಮ ಮಂತ್ರಿಗಳಲ್ಲಿ ನಾವು ಆಗಿಂದಾಗ್ಗೆ ಹೇಳುತ್ತಿರುತ್ತೇವೆ. ಇದರ ಬಗ್ಗೆ ಕೆಲವು ಸಲಹೆಗಳನ್ನು ನಾನಾಗಲೇ ಮಂತ್ರಿಗಳಿಗೆ ಕೊಟ್ಟಿದ್ದೇನೆ. ಇಲ್ಲಿ ಹೆಸರುಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಕೆಲವರಿಗೆ ಅನ್ಯಾಯವಾಗಿದೆ ಎನ್ನುವುದೂ ಮಂತ್ರಿಗಳಿಗೆ ಗೊತ್ತಿದೆ. ಆ ಬಗ್ಗೆ ನಮ್ಮ ಮಂತ್ರಿಗಳು ಜಾಗ್ರತೆಯಾದ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದಾರೆಂದು ನಾನು ಭಾವಿಸುತ್ತೇನೆ. ಆದರೆ ಉನ್ನತಾಧಿಕಾರಿಗಳು ಡಾಕ್ಟರುಗಳ ಪೇಪರುಗಳನ್ನು ಡಿಲೇಮಾಡುತ್ತಿದ್ದಾರೆ. ಇದನ್ನು ಈಗಲಾದರೂ ಸರಿಪಡಿಸುತ್ತಾರೆಂದು ನಾನು ಆಶಿಸುತ್ತೇನೆ. ಆದರೆ ಇಲಾಖೆಯ ಅಧಿಕಾರಿಗಳಿಗೂ ಸರಕಾರಕ್ಕೂ ಏನೇನೂ ಸಂಬಂಧವಿರುವಹಾಗೆ ಕಾಣುವುದಿಲ್ಲ. ನಮ್ಮ ಕೋಲಾರದ ಜಿಲ್ಲಾ ಆಸ್ಪತ್ರೆಗಳಲ್ಲಿ ಬಹಳ ನ್ಯೂನತೆಗಳಿದ್ದು ಅದರ ಬಗ್ಗೆ ಈಗಿನ ಮಂತ್ರಿಗಳಿಗೂ ಹಿಂದೆ ಬಂದಿದ್ದಂತಹ ಮಂತ್ರಿಗಳಿಗೂ ಮತ್ತು ಈ ಮಾನ್ಯ ಸಭೆಗೂ ತಿಳಿಸಿದ್ದೆ. ಮತ್ತು ಮನವಿಯನ್ನೂ ಸಲ್ಲಿಸಿದ್ದೇನೆ. ಅನೇಕ ಸಾರಿ ಮಂತ್ರಿಗಳನ್ನೂ ಭೇಟಿಮಾಡಿ ತಿಳಿಸಿದ್ದೇನೆ. ಅಲ್ಲಿ ಈಗಿರುವ ಸ್ಥಳಾವಕಾಶ ಸಾಲದು ನೂರಾರು ಜನ ಪೇಷೆಂಟುಗಳು ಜಾಗ ಸಿಗದೆಹೋಗುವ ಪರಿಸ್ಥಿತಿ ಇದೆ. ಆದರಿಂದ ಈಗಿರುವ ಆಸ್ಪತ್ರೆಗೆ ಒಂದು upstair ನ್ನು ಕಟ್ಟಿಸಿಕೊಡಬೇಕೆಂದು ಕೇಳುತ್ತಿದ್ದೇವೆ. ಅದರ ಬಗ್ಗೆ ಮಂತ್ರಿಗಳೂ ಭರವಸೆ ಕೊಟ್ಟಿರುತ್ತಾರೆ. ಮತ್ತು P. W. D. ಇಲಾಖೆಯವರು ಟೆಂಡರೂ ಕರೆದದ್ದೂ ಆಯಿತು. ಆದರೆ

ಇದಕ್ಕೆ ಇನ್ನೂ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಸಿಕ್ಕಿಲ್ಲ ಎಂದು ಗೊತ್ತಾಗಿದೆ. ಇದು ಉನ್ನತಾಧಿಕಾರಿಗಳ ಕೆಲಸದಿಂದಾಗಿ ನಿಧಾನವಾಗಿದೆ ಎಂದು ತೋರುತ್ತದೆ. ಇದೂ ಅಲ್ಲದೆ ಅಲ್ಲಿಗೆ Post operation ward ಆರು ರೂಮುಗಳ, ಒಂದು ರೆಸ್ಟ್ ಹೌಸು, ಈ ಆಸ್ಪತ್ರೆಗೆ ಅನುಕೂಲವಾಗುವಂತಹ ಒಂದು ವಾಟರು ಟ್ಯಾಂಕು ಕಟ್ಟಿಸಿಕೊಡಬೇಕೆಂದು ಅನೇಕಸಾರಿ ಮಂತ್ರಿಗಳಿಗೂ ಅಧಿಕಾರಿಗಳಿಗೂ ತಿಳಿಸಿದ್ದೇನೆ ಸರಕಾರದವರು ಈಗಲಾದರೂ ಬೇಗ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ನು ಕೊಟ್ಟು ಕೋಲಾರದ ಆಸ್ಪತ್ರೆಗೆ upstair ನ್ನು ಕಟ್ಟಲು ಅನುಕೂಲಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇಷ್ಟೇ ಅಲ್ಲದೇ ಅನಭವಸ್ಥರಾದ ಡಾಕ್ಟರುಗಳ ಅಭಾವವನ್ನು ಏನಾದರೂಮಾಡಿ ಹೋಗಲಾಡಿಸಬೇಕಾದರೆ ಅದಕ್ಕೆ ತಾವು ಪರಿಣಾಮಕಾರಿಯಾದ ಕ್ರಮಗಳನ್ನೇ ತೆಗೆದುಕೊಳ್ಳಬೇಕಾಗಿದೆ, ನಾನು ಒಂದು ಸಲಹೆಯನ್ನು ಸೂಚಿಸುತ್ತೇನೆ. ತಾವು ಪಟ್ಟಣಗಳಲ್ಲಿರುವ ಡಾಕ್ಟರುಗಳಿಗೆ ಹೆಚ್ಚಿನ ಅನುಕೂಲಗಳನ್ನು ಸಂಬಳಗಳನ್ನು ಕೊಡುತ್ತಿರುವಂತೆ ಹಳ್ಳಿಗಳಲ್ಲಿರುವ ಡಾಕ್ಟರುಗಳಿಗೂ ಅಷ್ಟೇ ಸಂಬಳಕೊಡದೇ ಇರುವುದರಿಂದ ಡಾಕ್ಟರುಗಳು ಹಳ್ಳಿಗಳಿಗೆ ಬರುತ್ತಿಲ್ಲ. ಇದಕ್ಕಾಗಿ ಹಳ್ಳಿಗಳಲ್ಲಿಯೇ ಕೆಲಸಮಾಡಲು ಬರುವಂತಹ ಡಾಕ್ಟರುಗಳಿಗೆ ತಿಂಗಳ 50 ರೂ. ಗಳನ್ನು ಒಂದು ರೀತಿ incentive bonus ನಂತೆ ಹೆಚ್ಚಿಗೆ ಕೊಡುವುದಾದರೆ ಹೆಚ್ಚಿನ ಸಂಖ್ಯೆಯಲ್ಲಿ ಡಾಕ್ಟರುಗಳು ಹಳ್ಳಿಗಳಿಗೆ ಬರಲು ಇಷ್ಟಪಡುತ್ತಾರೆ. ಈ ರೀತಿಯಾದ ಒಂದು ತರಹೆ incentive ಕೊಡುವುದರ ಬಗ್ಗೆ ಸರಕಾರ ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮೆಡಿಕಲ್ ಕಾಲೇಜುಗಳಲ್ಲಿ ಸೀಟುಗಳನ್ನು ಕೊಡುವಾಗ ಈಗ ಮೆರಿಟ್ಟಿನ ಮೇಲೆ ಸೀಟುಗಳನ್ನು ಕೊಡಬೇಕೆಂದು ಮಾಡಿದ್ದಾರೆ. ಆದರೆ ಇದರಂತೆ ಸೀಟಿಗಾಗಿ ಬರುವವರೆಲ್ಲ ಪಟ್ಟಣಗಳಿಗೆ ಸೇರಿದ ವಿದ್ಯಾರ್ಥಿಗಳೆ ಬರುತ್ತಾರೆಯೇ ಹೊರತು, ಹಳ್ಳಿಗಾಡಿನಿಂದ ಬಂದ ಹುಡುಗರಿಗೆ ಸೀಟುಗಳು ಸಿಗುತ್ತಿಲ್ಲ ಸರಕಾರದವರು ಈ ಕ್ರಮವನ್ನು ಅನುಸರಿಸುತ್ತಿರುವುದರಿಂದ ದೊಡ್ಡ ದೊಡ್ಡ ಪಟ್ಟಣಗಳಿಗೇ ಸೇರಿದ ವಿದ್ಯಾರ್ಥಿಗಳಿಗೇ ಮಾತ್ರ ಸೀಟುಗಳು ದೊರೆಯುತ್ತಿದೆ. ಈ ನೀತಿಯನ್ನನುಸರಿಸುವುದಕ್ಕೆ ಬದಲಾಗಿ ಹಳ್ಳಿಗಾಡಿನಿಂದ ಬರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸೀಟುಗಳನ್ನು ಕೊಟ್ಟರೆ ಹಳ್ಳಿಗಾಡಿಗೆ ಹೆಚ್ಚಿನ ಡಾಕ್ಟರುಗಳನ್ನು ಬರುವಂತೆ ಮಾಡಿಕೊಳ್ಳಬಹುದು. ಇದರಿಂದ ಹಳ್ಳಿಗಳಲ್ಲಿ ಡಾಕ್ಟರುಗಳ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸಬಹುದೆಂದು ಸಲಹೆ ಮಾಡುತ್ತೇನೆ. ಈ ಬಗ್ಗೆ ಸರಕಾರ ತೀವ್ರಗಮನಕೊಡುತ್ತದೆಂದು ಆಶಿಸುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಪಿ. ಫಾಯದೆ (ಅಂಕೋಲ).—ಮಾನ್ಯ ಸಭಾಪತಿಗಳೇ, ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣಾ ಇಲಾಖೆಯ ಡಿಮ್ಯಾಂಡುಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ.

ಈ ಸಂದರ್ಭದಲ್ಲಿ ಸರಕಾರಕ್ಕೆ ನನ್ನ ಜಿಲ್ಲೆಯ ಬಗ್ಗೆ ಇರುವ ಕೆಲವು ತೊಂದರೆಗಳನ್ನು ತಮ್ಮ ಮೂಲಕ ತಿಳಿಸಬೇಕೆಂದು ಆಶಿಸುತ್ತೇನೆ. ಈ ಬಗ್ಗೆ ಕಳೆದ ಸೆಷಿನ್ನಿನಲ್ಲಿ ಒಂದು ಪ್ರಶ್ನೆ ಕೇಳಿದಾಗ, ಈ ದೇಶದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಡಾಕ್ಟರುಗಳಿಲ್ಲ ಎಂದು ಹೇಳಿದರು. ನಮ್ಮ ಜಿಲ್ಲೆಯಲ್ಲೂ ಎಷ್ಟೋ ದವಾಖಾನೆಗಳಲ್ಲಿ ಡಾಕ್ಟರುಗಳಿಲ್ಲದೆ ಖಾಲಿ ಇವೆ ಎಂದು ಕೇಳಿದ್ದೇನೆ. ಈ ಬಗ್ಗೆ ಎಷ್ಟು ಇದೆ ಎನ್ನುವ ಮಾಹಿತಿಯನ್ನು ಕೂಡ ನಾನು ಕೇಳಿದ್ದೆ. ಅದೂ ಕೂಡ ಸಿಗಲಿಲ್ಲ. ಸಾಧಾರಣವಾಗಿ ಶೇಕಡ ಐವತ್ತರಷ್ಟು ದವಾಖಾನೆಗಳಲ್ಲಿ ಡಾಕ್ಟರುಗಳಿಲ್ಲದೆ ಖಾಲಿ ಇವೆ ಎಂದು ನನಗೆ ತಿಳಿದು ಬಂದಿದೆ. ಎರಡು ಮೂರು ಉದಾಹರಣೆಗಳನ್ನು ಹೇಳುತ್ತೇನೆ. ಮುಂಡಗೋಡಗೆ ಸೇರಿದ ತಾತೂರ ಗ್ರಾಮದಲ್ಲಿ ಒಂದು ಮೊಬೈಲ್ ಡಿಸ್‌ಪೆನ್‌ಸರಿ ಇದೆ. ಮೊಬೈಲ್ ವ್ಯಾನ್ ಇದೆ. ಡ್ರೈವರು ಇದ್ದಾರೆ, ಎಲ್ಲರೂ ಇದ್ದಾರೆ. ಆದರೆ ಡಾಕ್ಟರರೇ ಇಲ್ಲ. ಇಷ್ಟು ಕಾಲವಾದರೂ ಇಲ್ಲಿಗೆ ಡಾಕ್ಟರರನ್ನು ಇನ್ನೂ ನೇಮಕ ಮಾಡಿದ ಹಾಗಿಲ್ಲ. ಈ ಮೊಬೈಲ್ ಡಿಸ್‌ಪೆನ್ಸರಿಯಲ್ಲಿ ಡ್ರೈವರು ಇತರ ಎಲ್ಲಾ ನೌಕರರೂ ಇದ್ದಾರೆ ಮುಖ್ಯವಾದ ಡಾಕ್ಟರುಗಳೇ ಇಲ್ಲದಿದ್ದರೆ ಇದರಿಂದ ಜನಕ್ಕೆ ಉಪಯೋಗ ಹೇಗೆ ಸಿಗುತ್ತದೆ. ಇದರ ಬಗ್ಗೆ ಹಿಂದೆ ಒಂದು ಪ್ರಶ್ನೆ ಕೇಳಿದಾಗ ಮುಂಡಗೋಡು ತಾಲ್ಲೂಕಿನ ಡಾಕ್ಟರುಗಳೇ ಅಲ್ಲಿಗೆ ಹೋಗಿ ಬರುವಂತೆ ವ್ಯವಸ್ಥೆ ಮಾಡಿದೆ ಎಂದು ಹೇಳಿದರು. ಇದರಿಂದ ಎಷ್ಟುಮಟ್ಟಿಗೆ ಹಳ್ಳಿಯವರೆಗೆ ಉಪಯೋಗವಾಗುತ್ತದೆ ಎನ್ನುವುದನ್ನು ತಾವೇ ವಿಚಾರ ಮಾಡಬೇಕು. ತಹಶೀಲಿನಲ್ಲಿರುವ ಒಬ್ಬರು ಡಾಕ್ಟರು ಹಳ್ಳಿಗಳಿಗೆ ಬಂದು ಒಂದು ತಾಸು ಹಳ್ಳಿಗಳಲ್ಲಿ ಔಷಧಿ ಕೊಡುತ್ತ ಹೋದರೆ, ಅದರಿಂದ ಹಳ್ಳಿಯ ಜನಕ್ಕೆ ಏನು ಉಪಯೋಗವಾಗುತ್ತದೆ, ಅವರ ಕಷ್ಟಗಳನ್ನು ತಿಳಿಯುವುದಕ್ಕೆ ಹೇಗೆ ಸಾಧ್ಯವಾಗುತ್ತದೆ. ಈ ರೀತಿ ಎಷ್ಟೋ ತಾಲ್ಲೂಕುಗಳಲ್ಲಿವೆ. ಅಂಕೋಲದಲ್ಲಿರುವ ರಾಮನಹಳ್ಳಿ ಆಸ್ಪತ್ರೆ ಇದೆ. ಅಲ್ಲಿಯೂ ಕೂಡ ಬಹುಕಾಲದಿಂದಲೂ

(ಶ್ರೀ ಎಸ್. ಪಿ. ಫಾಯದೆ)

ಡಾಕ್ಟರಿಲ್ಲ. ಎಂದು ಹೇಳುವುದು ಬಹಳ ವಿಷಾದದ ಸಂಗತಿ. ಹಾಗೆ ಮಂಚಕೇರೆಯಲ್ಲಿ ಡಿಸ್‌ಪೆನ್ಸರಿಯಲ್ಲಿಯೂ ಡಾಕ್ಟರಿಲ್ಲದೆ ಎಂಟು ತಿಂಗಳಾಗಿವೆ. ಇನ್ನೂ ಇಲ್ಲಿಯ ಜನಕ್ಕೆ ಡಾಕ್ಟರರ ಸಹಾಯ ಸಿಕ್ಕಿಲ್ಲ. ಅಲ್ಲಿ ಇನ್ನೂ ಪರಿಹಾರ ಸಿಕ್ಕಿಲ್ಲ. ಪ್ರೈವೇಟ್ ಪ್ರಾಕ್ಟೀಶನರ್ಸ್ ಯಾರೂ ಇಲ್ಲ. ಈ ರೀತಿಯಾದರೆ ಅಲ್ಲಿಯ ಜನರ ಅವಸ್ಥೆ ಏನಾಗಬಹುದು ಎನ್ನುವುದನ್ನು ಸರಕಾರ ಯೋಚನೆ ಮಾಡಬೇಕು. ದೇಶದಲ್ಲಿ ಇಂದು ಡಾಕ್ಟರರ ಅಭಾವ ಹೆಚ್ಚಾಗಿದೆ. ನಮ್ಮ ತಾಲ್ಲೂಕಿನಲ್ಲಿ ಒಂದು ಕಡೆ ಡಾಕ್ಟರ್ ಇಲ್ಲದೆ 8 ತಿಂಗಳಾಯಿತು. ಡಿಸ್ಪೆನ್ಸರಿ ಖಾಲಿ ಇಡುವದರಿಂದ ಜನರಿಗೆ ಏನು ತೊಂದರೆಯಾಗುತ್ತದೆ ಎಂಬುದಕ್ಕೆ ಮಾನ್ಯ ಸಚಿವರು ಲಕ್ಷ್ಯ ವಹಿಸಬೇಕು. ಈ ರೀತಿ ಮಾಡಬಾರದು ಎಂದು ಕೇಳಿಕೊಳ್ಳುತ್ತೇನೆ.

ನಮ್ಮ ಮುಂಬಯಿ ಕರ್ನಾಟಕ ಭಾಗದಲ್ಲಿ ಎಸ್. ಎಂ. ಪಿ. ಡಿಸ್ಪೆನ್ಸರೀಜ ಇವೆ. ಅದರಲ್ಲಿ ಅಯುರ್ವೇದ ಅಲೋಪಥಿ ಎರಡೂ ಇವೆ. ನಮ್ಮ ಹಲ್ಯಾಳ ತಾಲ್ಲೂಕಿನಲ್ಲಿ ಮುರಕವಾಡದಲ್ಲಿ ಒಂದು SMP dispensary ಇದೆ. ಅಲ್ಲಿಗೆ ಅಲೋಪಥಿ ಡಾಕ್ಟರರು ಯಾರೂ ಬರಲಿಲ್ಲ. ಅಲ್ಲಿ ಆಯುರ್ವೇದ ಡಾಕ್ಟರರ ನೇಮಕಮಾಡಿ ಎಂದು ಅಲ್ಲಿಯ ಪಂಚಾಯತಿ ಕಮಿಟಿಯವರು ತಾಲ್ಲೂಕ್ ಬೋರ್ಡ್ ಅವರಿಗೆ ವಿನಂತಿ ಮಾಡಿಕೊಂಡರು. ಆದರೂ ಸಹ ಡಾಕ್ಟರರ ನೇಮಕ ಮಾಡಿಲ್ಲ. ಅಲೋಪಥಿ ಡಾಕ್ಟರ್ ಸಿಕ್ಕದೇ ಇದ್ದರೆ ಆಯುರ್ವೇದ ಡಾಕ್ಟರರನ್ನಾದರೂ ಕೊಡಬಹುದಾಗಿತ್ತು. ಯಾರೂ ಇಲ್ಲದೇ ಬಹಳ ಕಾಲ ಖಾಲಿ ಇರುವುದು ವಿಷಾದಕರ. ಇದರಲ್ಲಿರುವ ಅಡಚಣೆಗಳನ್ನು ಆದಷ್ಟು ಬೇಗ ಪರಿಹರಿಸಬೇಕು. ಮತ್ತು ಈ ವಿಚಾರದಲ್ಲಿ ಬೇಗ ನಿರ್ಣಯ ಮಾಡಬೇಕು. ಯಾಕಂದರೆ ಮಲೆನಾಡು ಪ್ರದೇಶದಲ್ಲಿ ಡಾಕ್ಟರರ ಅಭಾವ ಬಹಳ ದಿವಸ ಇಡಬಾರದು. ಎರಡು ಮೂರು ತಿಂಗಳಿನಲ್ಲಿ ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ತಾಲ್ಲೂಕ್ ಬೋರ್ಡ್ ಡಿಸ್ಪೆನ್ಸರಿಗಳು ಮೆಡಿಕಲ್ ಇಂಡೆಂಟ್ ಮೆಡಿಕಲ್ ಸ್ಟೋರ್ಸಿಗೆ ಮಾಡಬೇಕಾಗುತ್ತದೆ. ಮೆಡಿಸಿನ್ಸ್ ಸಕಾಲದಲ್ಲಿ ಬರುವದಿಲ್ಲ. ಇದರಿಂದ ಬಹಳ ತೊಂದರೆಯಾಗುತ್ತಿದೆ. ಮೆಡಿಸಿನ್ಸ್ ಮೆಡಿಕಲ್ ಸ್ಟೋರ್ಸಿನಿಂದ ಸಿಕ್ಕದೇ ಹೋದರೆ ಅಲ್ಲಲ್ಲಿಯೇ ಅವರು ಕೊಂಡುಕೊಳ್ಳುವ ವ್ಯವಸ್ಥೆ ಮಾಡಬೇಕು. ನಾನು ತಿಳಿಸಿದ ತೊಂದರೆಗಳ ನಿವಾರಣೆಗೆ ಲಕ್ಷ್ಯ ವಹಿಸಿ ಸೂಕ್ತ ಸಲಹೆ ಮಾಡಬೇಕೆಂದು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ವೈದ್ಯಕೀಯ ಇಲಾಖೆ ಮತ್ತು ಜನಾರೋಗ್ಯ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡುವುದು ದುರ್ದೈವದ ಸಂಗತಿಯಾಗಿದೆ. ವೈದ್ಯಕೀಯ ಇಲಾಖೆಗೆ ಒಬ್ಬ ಡೈರೆಕ್ಟರ್ ಮತ್ತು ಜನಾರೋಗ್ಯ ಇಲಾಖೆಗೆ ಪ್ರತ್ಯೇಕವಾದ ಡೈರೆಕ್ಟರ್ ಹೀಗೆ ಎರಡು ಡೈರೆಕ್ಟರುಗಳು ಕೆಲಸ ಮಾಡುತ್ತಿರುವದರಿಂದ ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಂಬಂತಾಗಿ ಯಾವ ಹೊಂದಾಣಿಕೆಯಿಲ್ಲ. ಜನತೆಯ ಆರೋಗ್ಯ ರಕ್ಷಣೆಯಾಗುತ್ತಿಲ್ಲ ಈ ಎರಡು ಇಲಾಖೆಗಳನ್ನು ಬೈಫರ್‌ಕೇಟ ಮಾಡಿರುವದರಿಂದ ಯಾವ ಹೊಂದಾಣಿಕೆಯಿಲ್ಲ. ಎಜ್ಯುಕೇಷನ್ ಡಿಪಾರ್ಟ್‌ಮೆಂಟಿನ ಮೇಲೆ ಯಾವ ರೀತಿ ಟೀಕೆ ಟಿಪ್ಪಣಿಗಳು ಆಗುತ್ತಿವೋ ಅದೇ ರೀತಿ ಎರಡು ಇಲಾಖೆಗಳಲ್ಲಿಯೂ ಇದೆ. ಶಿಕ್ಷಣ ಇಲಾಖೆಯಂತೆ ಈ ಎರಡು ಇಲಾಖೆಗಳಲ್ಲಿಯೂ ರಾಜಕೀಯ ಮನೆ ಮಾಡಿಕೊಂಡಿದೆ. ಸರಕಾರ ಇದನ್ನು ಯೋಚನೆ ಮಾಡಬೇಕು.

Sri K. NAGAPPA ALVA.—We have already taken a decision.

Sri C. J. MUCKANNAPPA.—We do not know what happens tomorrow. Some Amavasya will come and you will decide to change the decision because some Director has to be accommodated some where and trouble will crop up.

ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇದು ರಾಜಕೀಯದ ತವರುಮನೆಯಾಗಿದೆ. ಎಲ್ಲ ಕಡೆ ರಾಜಕೀಯ ಬೆಳೆದಿದೆ. ಡಾಕ್ಟರ್ ನೇಮಕವಾಗಲಿ, ಔಷಧ ತರಿಸುವುದು ಆಗಲಿ, ಮೆಡಿಕಲ್ ಕಾಲೇಜಕ್ಕೆ ಸೀಟು ಕೊಡುವುದು ಆಗಲಿ ಎಲ್ಲದರಲ್ಲೂ ರಾಜಕೀಯ ಬೆಳೆದಿದೆ. ನಮ್ಮ ಆರೋಗ್ಯ ಮಂತ್ರಿಗಳ ಬಗ್ಗೆ ನಾನು ಅಪಾರ ಗೌರವ ಇಟ್ಟುಕೊಂಡಿದ್ದೇನೆ. ಆದರೆ ಈ ಇಲಾಖೆಗೆ ಒದಗಿಸುವ ಹಣದ ದುರುಪಯೋಗವಾಗುತ್ತದೆಂಬ ಭಯವಿದೆ. ಆದ ದರಿಂದ ಮಾನ್ಯ ಸಚಿವರು ಧೈರ್ಯಶಾಲಿಗಳಾಗಿ ದಿಟ್ಟತನದಿಂದ ಹೆಜ್ಜೆ ಇಟ್ಟು ತೀರ್ಮಾನ ತೆಗೆದುಕೊಳ್ಳಬೇಕು. ಈ ಬಗ್ಗೆ ಸ್ಟೇಟಮೆಂಟ್ ಕೊಟ್ಟು ಎಂಟು ದಿನಗಳಾದುವು. ಅಸೆಂಬ್ಲಿ ಪ್ರಾರಂಭವಾಗಿ ಒಂದು ತಿಂಗಳಾಯಿತು. ಗೆಜೆಟ್

ನೋಟಿಫಿಕೇಷನ್ ಆಗಲಿ ಗವರ್ನಮೆಂಟ್ ಆರ್ಡರ್ ಆಗಲಿ ಆಗಿಲ್ಲ. ಡಾಕ್ಟರ್ ನಾಗಪ್ಪ ಆಳ್ವಾ ಅವರಿಗೆ ಸ್ವಲ್ಪ ನಿಧಾನವಾಗಿ ಮಾಡುವ ಪ್ರವೃತ್ತಿಯಿದೆ. ಈ ಕೆಲಸ ಚುರುಕಾಗಿ ಮಾಡಬೇಕೆಂದು ಹೇಳುತ್ತೇನೆ.

ಗ್ರಾಮಾಂತರ ಪ್ರದೇಶದಲ್ಲಿ ಸಾಕಷ್ಟು ಔಷಧಾಲಯಗಳಿಲ್ಲ. ಔಷಧಾಲಯವಿದ್ದರೆ ಡಾಕ್ಟರರು ಇಲ್ಲ. ಔಷಧಾಲಯ ವೈದ್ಯರು ಇದ್ದರೆ ಔಷಧಗಳಿರುವದಿಲ್ಲ. ಔಷಧೋಪಚಾರದ ಸೌಲಭ್ಯ ಈ ರೀತಿ ಇದೆ. ಹಳ್ಳಿಗಾಡಿಗೆ ಡಾಕ್ಟರರು ಹೋಗುವದಿಲ್ಲ. ಡಾಕ್ಟರರು ಹಳ್ಳಿಗಾಡಿಗೆ ಹೋಗಿ ಕೆಲಸ ಮಾಡುವ ಹಾಗೆ ಮಾಡಬೇಕಾದುದು ಅಗತ್ಯವಾಗಿದೆ. ಮೆಡಿಕಲ್ ಕಾಲೇಜಕ್ಕೆ ಅಡ್ಮಿಷನ್ ಕೊಡುವಾಗ್ಗೆ ಕಟ್ಟುನಿಟ್ಟಾಗಿ ನಿರ್ಬಂಧ ಹಾಕಬೇಕು. ಪಾಸ್ ಆದ ಮೇಲೆ ಹಳ್ಳಿಗಾಡಿನಲ್ಲಿ ಸರ್ವಿಸ್ ಮಾಡಬೇಕೆಂದು ಅವರಿಗೆ ಹೇಳಬೇಕು. ಈಗ ಇರತಕ್ಕ ಡಾಕ್ಟರರನ್ನು ಟ್ರಾನ್ಸ್‌ಫರ್ ಮಾಡಿದರೆ ಹಳ್ಳಿಗಾಡಿಗೆ ಹೋಗುವದಿಲ್ಲ. ಇಂದು ಹಳ್ಳಿಗಾಡಿನಲ್ಲಿ 400 ಆಸ್ಪತ್ರೆಗಳಲ್ಲಿ ಡಾಕ್ಟರರಿಲ್ಲ. ಡಾಕ್ಟರರನ್ನು ಕಳಿಸುವುದಕ್ಕೆ ಆಗಿಲ್ಲ. ಇದರಲ್ಲಿ ಕಷ್ಟವಿದೆ. ಸ್ವಲ್ಪ ಯೋಚನೆ ಮಾಡಬೇಕು ಈ ಡಾಕ್ಟರರ ನೇಮಕಗಳಲ್ಲಿ ಪೊಲಿಟಿಕಲ್ ಪ್ರೆಷರ್ ಪುಲ್ಲಿಂಗಗೆ ಅವಕಾಶ ಕೊಡಬಾರದು. ಎಲ್ಲ ಆಸ್ಪತ್ರೆಗಳಲ್ಲಿಯೂ ಡಾಕ್ಟರರನ್ನು ತುಂಬುವ ಶಕ್ತಿ ನಿಮಗೆ ಕೊಡಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನೀವು ಈವಾಗ ಯೋಚನೆ ಮಾಡಿ, ಎಲ್ಲಿ ಡಾಕ್ಟರ್ ಇಲ್ಲ, ಎಲ್ಲ ಕಾಂಪೌಂಡರ್ ಇಲ್ಲ ಅನ್ನುವುದನ್ನು ಶ್ರೀಮಾನ್ ಲಕ್ಷ್ಮೀಪತಿಯವರು ಹೇಳಿದರು: ಆಸ್ಪತ್ರೆಗಳಲ್ಲಿ ನರ್ಸುಗಳಿದ್ದರೆ, ಡಾಕ್ಟರುಗಳು ಇಲ್ಲ, ಡಾಕ್ಟರುಗಳಿದ್ದರೆ ನರ್ಸುಗಳಿಲ್ಲ, ನರ್ಸುಗಳು ಡಾಕ್ಟರುಗಳು ಇದ್ದರೆ ಕಾಂಪೌಂಡರು ಇಲ್ಲ, ಇದೆಲ್ಲಾ ಇದ್ದರೆ ಔಷಧಿ ಇಲ್ಲ, ಔಷಧಿ ಸರಬರಾಜು ಆಸ್ಪತ್ರೆಗಳಿಗೆ ಸರಿಯಾಗಿಲ್ಲ. ಔಷಧಿ ಸರಬರಾಜಾಗುವುದಕ್ಕೆ ನೀವು ಕೊಂಡುಕೊಂಡದ್ದಕ್ಕೆ ದುಡ್ಡು ಕೊಟ್ಟರೆತಾನೆ ಮೆಡಿಕಲ್ ಸ್ಟೋರಿಗೆ ಸಪ್ಲೈ ಮಾಡಿರತಕ್ಕಂಥ ಔಷಧಿಗಳ ಬಿಲ್ಲುಗಳು ಪೆಂಡೆನ್ಸಿ ಎಷ್ಟು ಹೆಚ್ಚಿಯಾಗಿದೆ, ಗೊತ್ತೆ. ಬಿಲ್ಲುಗಳ ಹಣ ಕೊಡದೆ ಇಷ್ಟು ದೀರ್ಘಾವಧಿ ಕಾಲ ಉಳಿದರೆ ನಿಮಗೆ ಔಷಧ ಯಾರು ಸಪ್ಲೈ ಮಾಡುವವರು. ಬಿಲ್ಲುಗಳು ಹಣವನ್ನು ಕಾಲ ಕಾಲಕ್ಕೆ ವಿನಿಯೋಗ ಮಾಡಿದರೆ, ನಿಮಗೆ ಸಾಲ ಕೊಡುತ್ತಾರೆ. ಇಲ್ಲದೆ ಹೋದರೆ ಸರ್ಕಾರದಲ್ಲಿ ನಂಬಿಕೆ ಇಟ್ಟುಕೊಂಡು ಸಾವಿರಾರು ರೂಪಾಯಿಗಳ heavy pendency ಇಟ್ಟುಕೊಳ್ಳುವುದಕ್ಕೆ ಔಷಧಿ ವ್ಯಾಪಾರಸ್ಥರು ತಯಾರಿಸುತ್ತಾರೆಯೇ ನಿಮ್ಮ ಮೆಡಿಕಲ್ ಸ್ಟೋರಿಗೇ ಮೆಡಿಸನ್ ಸಪ್ಲೈ ಇಲ್ಲದಿದ್ದರೆ ಹಳ್ಳಿಗಾಡಿಗೆ ನೀವು ಔಷಧ ಹಂಚುವುದು ಹೇಗೆ. ಇದರಲ್ಲಿ ತಪ್ಪು ಎಲ್ಲಿದೆ ನೋಡಿ, ತಪ್ಪಿರತಕ್ಕಂಥ ಸ್ಥಳದಲ್ಲಿ ಸರಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

12-30 P.M.

ತುಂಕೂರು ಆಸ್ಪತ್ರೆಯಲ್ಲಿ ಒಂದೂ ಸರಿಯಾಗಿ ನಡೆಯುತಾ ಇಲ್ಲ. ಅವ್ಯವಸ್ಥೆ ತುಂಬಾ ಇದೆ, ಇದನ್ನು ವಿಚಾರ ಮಾಡಿ, ತಪ್ಪಿತಸ್ಥರನ್ನು ಶಿಕ್ಷೆಮಾಡಿ ಎಂದು ಹೇಳಿದರೆ, ಆ ಡಾಕ್ಟರನ್ನು ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡಿದರೇ ಹೊರತು, ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಡೆಲಿವರಿ ಆಗತಕ್ಕಂಥ ಹೆಣ್ಣು ಮಕ್ಕಳನ್ನು ಡೆಲಿವರಿ ಟೇಬಲ್ ಮೇಲೆ ಮಲಗಿಸಿ, ಆಸ್ಪತ್ರೆ ಚಾರ್ಜಿನಲ್ಲಿರತಕ್ಕಂಥ ಒಬ್ಬ ಮನುಷ್ಯ ಪಾಪಗಡಕ್ಕೆ ಹೋದರೆ ಅವರನ್ನು ಬೇರೆ ಕಡೆಗೆ ವರ್ಗ ಮಾಡಿದರೆ, ದಂಡನೆ ವಿಧಿಸಿದ ಹಾಗಾಯಿತೆ. ಡೆಲಿವರಿ ಅಂದರೆ ಹೆಣ್ಣು ಮಕ್ಕಳು ತಿರುಗಿ ಬದುಕಿ ಬಂದು ಹುಟ್ಟಿದ ಹಾಗೆ. ಅಂಥ ಮುಖ್ಯವಾದ ವಿಷಯದಲ್ಲಿ ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಯಾವ ಯಾವ ಕ್ರಮವನ್ನು ತೆಗೆದುಕೊಂಡು ಹೇಳುತ್ತೀರ ? ತಾವು ಸ್ವಲ್ಪ ಕೋಪ ಮಾಡಿ ಕೊಳ್ಳಕೂಡದು, ಸಾವಧಾನದಿಂದ ಕೇಳಿ ತಪ್ಪಿರುವ ಕಡೆ ಸರಿ ಮಾಡಿ ಜನತೆಯ ಶಹಭಾಸ್ ಪಡೆಯಿರಿ.

ತುಮಕೂರು ಆಸ್ಪತ್ರೆ ಸ್ವಲ್ಪ ನೋಡಿದ್ದೀರ? ಕ್ಷಯ ರೋಗದ ಆಸ್ಪತ್ರೆ ನೋಡಿದ್ದೀರ? ದೇವರಾವ್ ಶಿವರಾಂ ಕ್ಷಯರೋಗದ ಆಸ್ಪತ್ರೆ ನೋಡಿದ್ದೀರ. ದಯೆಯಿಟ್ಟು ನೋಡಿ. ಮೊನ್ನೆ ಪ್ರಶ್ನೆ ಕೇಳಿದರೆ ಉತ್ತರ ಹೇಳುವುದಕ್ಕಾಗುವುದಿಲ್ಲ, ನೋಟಿಸುಬೇಕು ಎಂದು ಹೇಳಿದಿರಿ. ನಿಮ್ಮ ಜಾಗದಲ್ಲಿ ನಾನೇ ಇದ್ದು ಇಕ್ಕಟ್ಟಿನ ಪ್ರಸಂಗ ಬಂದರೆ ನಾನೂ ಹಾಗೆ ಹೇಳುತ್ತಿದ್ದೆನೋ ಏನೋ, ಒಂದು ನಿಜಾಂಶವಿದ್ದರೆ ಒಪ್ಪಿಕೊಳ್ಳಬಾರದೇಕೆ? Waiting list ನಲ್ಲಿ ಎಷ್ಟೋ ಜನ ರೋಗಿಗಳು ಇದಾರೆಂದು ನೋಡಿದ್ದೀರ ? ಕ್ಷಯರೋಗಕ್ಕೆ ತುತ್ತಾಗಿರತಕ್ಕಂಥ ಜನಕ್ಕೆ, ಕ್ಷಯರೋಗ ಏತಕ್ಕೆ ಬಂದಿತು, ಅದಕ್ಕೆ ಉಚಿತವಾಗಿ ಏನು ಪರಿಹಾರ ಕೊಡಬೇಕು ಎಂಬುದನ್ನು ಸರ್ಕಾರದವರು ಯೋಚನೆ ಮಾಡಿದ್ದೀರ ? ಕ್ಷಯ ರೋಗದ ರೋಗಿಗಳಿಗೆ ಸರಿಯಾದ treatment ದೊರೆಯುವುದಕ್ಕೆ ಹೆಚ್ಚಿನ ಸಾಹಸ ಮಾಡಿದ್ದೀರ ?

ಶ್ರೀ ಕೆ. ನಾಗಪ್ಪ ಆಳ್ವ.—ಈ ಪ್ರಶ್ನೆಗೆ ಸರಿಯಾಗಿ ಉತ್ತರ ಕೊಟ್ಟಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರಿಯಾಗಿ ಹೇಳಿದ್ದೀರ ಅಂತ ಹೇಳಿದ್ದೇನೆ. ಈ ಜನತಂತ್ರ ರಾಜ್ಯದಲ್ಲಿ ಜನ ಹೇಳಿದ್ದನ್ನು ಅರ್ಥ ಮಾಡಿಕೊಳ್ಳಬೇಕು. ಕ್ಷಯ ರೋಗದ ಆಸ್ಪತ್ರೆಯಲ್ಲಿ ವೇಟಿಂಗ್ ಲಿಸ್ಟಿನಲ್ಲಿರುವವನ ಟ್ರೀಟ್‌ಮೆಂಟಿಗೆ ಏನು ವ್ಯವಸ್ಥೆ ಮಾಡಿದ್ದೀರಿ ? 100 ಜನ ರೋಗಿಗಳು ಕ್ಷಯ ರೋಗದಿಂದ ನರಳುತ್ತಿದ್ದರೆ ಆ ಜನಗಳ ಕ್ಷಯರೋಗ ನಿವಾರಣೆಗೆ ಏನು ಅವಕಾಶ ಮಾಡಿ ಕೊಟ್ಟಿದ್ದೀರ. ಅವರು ಸತ್ತ ಮೇಲೆ ಅವರಿಗೆ ಅವಕಾಶ ಸಿಗುತ್ತದೆಯೇ ? ಮೈಸೂರಿನಲ್ಲಿ ಕ್ಷಯ ಎನ್ನುವ ರೋಗದಿಂದ ನರಳುತ್ತಿರುವವರಿಗೆ ಸಾಕಷ್ಟು ಪ್ರಮಾಣದಲ್ಲಿ ಪರಿಹಾರ ಕೊಟ್ಟು, ಈ ರೋಗ ರುಜಿನವನ್ನು ನಿವಾರಣೆ ಮಾಡುವ ದಾರಿಯಲ್ಲಿ ಏನು ಮಾಡಬೇಕೆಂಬುದರ ಬಗ್ಗೆ ಸರ್ಕಾರ ತೀವ್ರ ಯೋಚನೆ ಮಾಡಬೇಕೆಂದು ಹೇಳಿದರೆ, ತಾವು ಪ್ರಶ್ನೆಗೆ ಕೊಟ್ಟ ಉತ್ತರದಲ್ಲಿ ಈ ಮಾತೇ ಇಲ್ಲ. ಕ್ಷಯರೋಗದ ಆಸ್ಪತ್ರೆಗಳಲ್ಲಿ ಬೆಡ್ ಸ್ಟ್ರೆಂಗ್ತ್ ಇನ್‌ಕ್ರೀಸ್ ಮಾಡಬೇಕು, ಇಲ್ಲ additional annexures ಮಾಡಬೇಕು, ಏನೊಂದಾದರೂ ಮಾಡಬೇಕು. ಹೀಗೆ ದೇಶದಲ್ಲಿ ಸೂಕ್ತ ಕ್ರಮ ತೆಗೆದು ಕೊಂಡು ಸರಿಯಾದ ಪರಿಹಾರ ಹುಡುಕುತ್ತೀರೆಂದು ನಂಬಿದ್ದೇನೆ.

ಮಾರ್ಚಿ 1962 ರೊಳಗೆ ಒಬ್ಬ ಮನುಷ್ಯನಿಗೆ ಚೇಳು ಕಡಿದರೆ, ಮಧ್ಯಾಹ್ನ 12 ಘಂಟೆ ಹೊತ್ತಿಗೇ ಗುತ್ತಿಗವರೆಗೆ ಕುಡಿದಿರುವ ಅಲ್ಲಿಯ ಡಾಕ್ಟರು ಚೇಳು ಔಷಧಿಯಿಂದ ಚಿಕಿತ್ಸೆ ಮಾಡದೆ, ಚೇಳು ಕಚ್ಚಿದ್ದ ಬೆಟ್ಟನ್ನೇ ಕತ್ತರಿಸಿಹಾಕಿಬಿಟ್ಟ. ಈ ವಿಷಯವನ್ನು ಇದೇ ಸಭೆಯಲ್ಲಿ ಹೋದಸಲ ಹೇಳಿದ್ದರಮೇಲೆ ಆ ಡಾಕ್ಟರ ಮೇಲೆ ಏನು ಕ್ರಮ ತೆಗೆದುಕೊಂಡಿರಿ ?

ಶ್ರೀ ಕೆ. ನಾಗಪ್ಪ ಆಳ್ವ.—ತಾವು ಕಂಪ್ಲೆಂಟ್ ಕೊಟ್ಟರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೆನು, ಇಷ್ಟರವರೆಗೆ ಅವರು ಕೊಡಲಿಲ್ಲ.

ಶ್ರೀ ಜೆ. ಮುಕ್ಕಣ್ಣಪ್ಪ.—ಇಲ್ಲಿ ಸ್ಟೇಟ್‌ಮೆಂಟ್ ಮಾಡಿದರೆ, ಈ ಸಭೆಯಲ್ಲಿ ಒಬ್ಬ ಸದಸ್ಯರು ಹೇಳಿದ್ದರ ಮೇಲೆ ಪರೀಕ್ಷೆಮಾಡಿ ಅವರು ಹೇಳಿದ್ದು ಸರಿಯೋ ಇಲ್ಲವೋ ಎಂದು ನೋಡಬಾರದೇ ? Why do you reduce a member of the State Legislature to the position of a petitioner ? ನಾವು ಹೇಳಿದ್ದರಲ್ಲಿ ಸತ್ಯವಿದ್ದರೆ ಸತ್ಯ ಎಂದು ಹೇಳಿ, ಅಸತ್ಯವಿದ್ದರೆ ಅಸತ್ಯವೆಂದು ಹೇಳಿ. You can say whether a statement mad by a Member of this House is true or not. ನಾವು ಹೇಳಿದ್ದನ್ನು ತಾವು ಪರೀಕ್ಷೆ ಮಾಡಿ, ನಾವು ಸುಳ್ಳು ಹೇಳಿದ್ದರೆ, ನೀವು ಹೇಳಿರುವುದು ಬೇಸ್‌ಲೆಸ್, ಇಲ್ಲ fact, ಇಲ್ಲ ನಿಜಾಂಶ, ಯಾವುದಾದರೂ ಹೇಳಿ, ಒಪ್ಪಿಕೊಳ್ಳುತ್ತೇವೆ. ಇಂಥ ನಾಗರೀಕ ಡಿಪಾರ್ಟ್‌ಮೆಂಟಿನಲ್ಲಿ ಒಬ್ಬ ಡಾಕ್ಟರು 24 ಗಂಟೆಯೂ ಭಟ್ಟಿ ಷರಾಬು ಕುಡಿದಿರುತ್ತಾನೆಂದು ಈ ಸಭೆಯಲ್ಲಿ ಹೇಳಿದರೆ ಸಾಲದೇ, ಅವನ ಮೇಲೆ ಆಕ್ಷನ್ ತೆಗೆದುಕೊಳ್ಳಲು personal request ಮಾಡಬೇಕೇ ? ಒಬ್ಬ ಮನುಷ್ಯನಿಗೆ ತುಕ್ಕು ಹಿಡಿದ ಸೂಜಿಯಿಂದ ಇಂಟ್ರಾಮಸ್ಕ್ಯುಲರ್ ಇಂಜೆಕ್ಷನ್ ಕೊಡುವುದಕ್ಕೆ ಹೋದಾಗ, ಡಾಕ್ಟರಿಗೆ ತುಕ್ಕು ಹಿಡಿದಿದೆ ಸೂಜಿಗೆ ಎಂದು ಹೇಳಿದರೆ, ಡಾಕ್ಟರು ಹೇಳಿದರು, ''ತೀಟೆ ಇದ್ದರೆ ತೆಗೆದುಕೋ, ಇಲ್ಲದೆ ಹೋದರೆ ಹೊರಟು ಹೋಗು'' ಎಂದು.

ಪರೋಪಕಾರ, ಸೇವೆ ಮಾಡುವುದಕ್ಕೆ ವೈದ್ಯಕೀಯ ವೃತ್ತಿಯಂಥ ಇನ್ನೊಂದು ವೃತ್ತಿ ಇಲ್ಲ. ತಂದೆ ತಾಯಿಗಳು ಪ್ರಾಣದಾನ ಮಾಡಿದ್ದರೆ, ಮನುಷ್ಯನು ಯಾವುದಾದರೂ ರೋಗ ರುಜಿನಕ್ಕೆ ಸಿಕ್ಕಿದರೆ, ಅದರಿಂದ ಪಾರು ಮಾಡಿ ಪ್ರಾಣ ರಕ್ಷಣೆ ಮಾಡುವ ಕಾರ್ಯ ಡಾಕ್ಟರುಗಳದು, ಅದಕ್ಕಿಂತ ಉತ್ಕೃಷ್ಟ ಸೇವೆ ಇಲ್ಲ. ಆದರೆ ಡಾಕ್ಟರ ಕೈಲಿ ಸೂಜಿ, ಸ್ಟೆತಸ್ಕೋಪ್, ಚಾಕು,ಬಾಕು,ಕತ್ತರಿ, ಇವನ್ನು ಉಪಯೋಗಿಸುವಾಗ ಅವುಗಳು ಪರಿಶುದ್ಧವಾಗಿವೆಯೇ, ಪರಿಶುದ್ಧ ಮಾಡಬೇಡವೇ ಎಂದು ಮೊದಲು ನೋಡಬೇಕು. ನನಗೆ ಗಾಯವಾಗಿದೆ, ಒಂದು ಇಂಜಕ್ಷನ್ ಕೊಡಿ ಎಂದು ನಮ್ಮ ಡಾಕ್ಟರಿಗೆ ನಿನ್ನೆ ಹೇಳಿದರೆ ಯಾವುದೋ ಒಂದು ಔಷಧ ಪ್ರಿಸ್‌ಕ್ರೈಬ್ ಮಾಡಿದರು, ಅದನ್ನು ತೆಗೆದುಕೊಂಡು ಬಂದರೆ, ಇಂಜಕ್ಷನ್ ಕೊಡುವಾಗ ಅದರ ಸೂಜಿಮೇಲೆ ಡಸ್ಟ್ ಇದೆ ಎಂದು ಹೇಳಿದರೆ ಡಾಕ್ಟರು ಕಣ್ಣು ಮುಚ್ಚಿಕೊಂಡು ಇಂಜಕ್ಷನ್ ತೆಗೆದುಕೊಂಡುಬಿಡಿ ಎಂದು ಹೇಳಿದರು. ಇನ್ನು ಜಾಸ್ತಿ ಹೇಳಿದರೆ ಎಲ್ಲರ ಮೇಲೆ ವ್ಯಾಜ್ಯ ಮಾಡುತ್ತವೆಂದು ಹೇಳುತ್ತಾರೆ. ಹೀಗೆ ನಮ್ಮ ಕಣ್ಣೆದುರಿಗಿರುವ ಆಸ್ಪತ್ರೆಯ ವೈಶಿಷ್ಟ್ಯ ಇದು. ಲೆಜಿಸ್ಲೇಟರುಗಳ ಉಪಯೋಗಕ್ಕಾಗಿ ಒಂದು ಆಸ್ಪತ್ರೆ ಇಟ್ಟಿದ್ದಾರೆ. ಅದನ್ನು ನೋಡಿ, ಅಲ್ಲಿ ಎಷ್ಟರಮಟ್ಟಿಗೆ ಮಾನ್ಯ ಸದಸ್ಯರುಗಳಿಗೆ ಟ್ರೀಟ್‌ಮೆಂಟ್ ದೊರೆಯುತ್ತಾ ಇದೆ, ಮುಖಂಡರಿಗೆ ಈ ರೀತಿ ಏರ್ಪಾಡು ಮಾಡಿರುವಾಗ, ಇನ್ನು ಆಸ್ಪತ್ರೆಗಳಲ್ಲಿ ಸಾಮಾನ್ಯ ಜನಗಳಿಗೆ ಎಷ್ಟರ ಮಟ್ಟಿಗೆ ವೈದ್ಯಕೀಯ ಸೌಲಭ್ಯ ದೊರೆಯುತ್ತಾ ಇದೆ ಎಂದು ಊಹಿಸಿಕೊಳ್ಳಬಹುದು. ಆಸ್ಪತ್ರೆಯಲ್ಲಿರುವ ನಮ್ಮ ಅಧಿಕಾರಿಗಳನ್ನು approach ಮಾಡುವುದೇ ಕಷ್ಟ. ಸರ್ಕಾರಿ ನೌಕರಿಯಲ್ಲಿರುವ ಡಾಕ್ಟರುಗಳಲ್ಲಿ ಬರ್‌ಸೀನ್ಸ್ ಬಹಳ ಬಂದಿದೆ ಡಾಕ್ಟರು

ಗಳು ಇಲ್ಲಿಗೆ ಬಂದು ನಿಮ್ಮ ಹತ್ತಿರ ಮಾತನಾಡಿಕೊಂಡು ಹೋಗುತ್ತಾರೆ. ಅವರಿಗೂ ನಮಗೂ ನೇರವಾದ ಸಂಬಂಧವಿಲ್ಲವೆಂದು ಅಂದುಕೊಂಡು ಬಿಟ್ಟಿದ್ದಾರೆ. ಮಂತ್ರಿಗಳ ಹತ್ತಿರ ಸರಿಯಾಗಿದ್ದು ಬಿಟ್ಟರೆ ತಮಗೆ ಅಪಾಯ ಬರುವುದಿಲ್ಲವೆಂದು ಸರ್ಕಾರಿ ನೌಕರರು ತಿಳಿದುಕೊಂಡಿದ್ದಾರೆ. ಸರ್ಕಾರಿ ನೌಕರರು ಈ ರಾಜ್ಯದಲ್ಲಿ ಅವರು, ನಾವೂ, ನೀವೂ ಬೇರೆ ಬೇರೆ ರಾಜ್ಯದಲ್ಲಿದ್ದೇವೆ ಎಂಬ ಮನೋಭಾವದಿಂದ ಕೆಲಸ ಮಾಡುತ್ತಾರೆ. ಇಂಥ ರಾಜಕೀಯ ಭೂತ ವೈದ್ಯಕೀಯ ಇಲಾಖೆಯಲ್ಲಿ ಹಿಡಿದಿದೆ, ನಿಮ್ಮ ಹತ್ತಿರ ಅದು ಬಂದಿಲ್ಲ. ನಿಮ್ಮ ಮೈ ಮೇಲೆ ಆ ಭೂತ ಇಲ್ಲದೆ ಹೋದರೂ, ಅದು ಇಲಾಖೆಯಲ್ಲಿ ಅಧಿಕಾರಿಗಳಲ್ಲಿ ಸೇರಿಕೊಂಡಿದೆ. ಅವರಲ್ಲಿ ಮರಳುಗೊಳಿಸಿವೆ. ಅದಕ್ಕೋಸ್ಕರ ತಮ್ಮ ಕೈಗೆಳಗಿರುವ ಅಧಿಕಾರಿಗಳನ್ನು whip ಮಾಡಿ, ರಾಜ್ಯದಲ್ಲಿ ವೈದಕೀಯ ಸೌಕರ್ಯಗಳಿಲ್ಲದೆ ಏನೇನು ತೊಂದರೆಗಳಿವೆಯೋ, ಅವುಗಳನ್ನೆಲ್ಲಾ ನಿವಾರಿಸಿ ಇಲಾಖೆಯನ್ನು ದುರಸ್ತುಮಾಡಿ ಉತ್ತಮ ಸ್ಥಿತಿಗೆ ತರಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಈ ಆರೋಗ್ಯ ಕೇಂದ್ರಗಳಲ್ಲಿ Government of India pattern, Mysore pattern ಎಂಬ ಹೆಸರು ಇಟ್ಟುಬಿಟ್ಟಿದ್ದಾರೆ. ಇವುಗಳನ್ನು ಸ್ಥಾಪನೆ ಮಾಡಬೇಕಾದರೂ ರಾಜಕೀಯವೆಲ್ಲ, ಬಿಲ್ಡಿಂಡ್ ಕೊಟ್ಟಿರುತ್ತಾರೆ, ಕೆಲಸ ಮಾಡುತ್ತಿರುತ್ತಾರೆ, ರಾಜಕೀಯ ಬಂದು ಅಲ್ಲಿಗೆ ಕೇಂದ್ರ ಕೊಡುವುದಿಲ್ಲ. ಬೇರೆ ಕಡೆಗೆ ಕೊಟ್ಟುಬಿಟ್ಟಿರುತ್ತೀರಿ, ಏಕೆ ? ಕಾರಣವೇನು ಸ್ವಲ್ಪ ಹೇಳುತ್ತೀರಾ ? ಒಂದು ಜಾಗ ಸರಿಯಾಗಿದ್ದರೆ, ಅಲ್ಲಿಗೆ ಏಕೆ ಇಲ್ಲ ? ನಿಮ್ಮ ಕಾಂಗ್ರೆಸ್ಸಿನವರು ಅಲ್ಲಿ ಗೆದ್ದಿದ್ದಾರೆಯೇ, ಪಿ. ಎಸ್. ಪಿ. ಯವರು ಅಲ್ಲಿ ಗೆದ್ದಿದ್ದಾರೆಯೆ, ಮುಕ್ಕಣ್ಣಪ್ಪ ಗೆದ್ದು ಬಂದಿದ್ದಾನೆಯೇ ? ಈ ರಾಜಕೀಯವೇಕೆ ? ಕಾಂಗ್ರೆಸ್ ರಾಜ್ಯ ಇರುತ್ತದೆಯೋ ಹೋಗುತ್ತದೆಯೋ. ಒಂದು ಆಸ್ಪತ್ರೆ, ಒಂದು ಕೇಂದ್ರ, ಒಂದು ವೈದ್ಯಕೀಯ ಸೌಕರ್ಯ ಕೊಡಬೇಕಾಗಿದ್ದರೆ ಮುಕ್ಕಣ್ಣಪ್ಪನಿಗೆ ಬೆಲೆ ಇದೆಯೋ ಇಲ್ಲವೋ ಅನ್ನುವುದನ್ನು ನೋಡಿ ಕೊಡಬೇಕೆ ? ಇದು ನನ್ನ ಕ್ಷೇತ್ರದಲ್ಲಿ ನಡೆದಿಲ್ಲ, ನನ್ನ ಕ್ಷೇತ್ರದ ಅಕ್ಕಪಕ್ಕದಲ್ಲಿ ನಡೆದಿರತಕ್ಕಂಥ ವಿಷಯ ಹೇಳುತ್ತಿದ್ದೇನೆ.

ಶ್ರೀ ಕೆ. ನಾಗಪ್ಪ ಆಳ್ವ.—Specific instance ಹೇಳಿ ಎಲ್ಲೆಲ್ಲಿ ರಾಜಕೀಯವಿದೆಯೋ ಅದನ್ನು ತೆಗೆದು ಹಾಕಲಿಕ್ಕೆ ಪ್ರಯತ್ನ ಪಡುತ್ತಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶಹಭಾಸ್, ಬಹಳ ಧನ್ಯ, ಒಪ್ಪಿಕೊಳ್ಳುತ್ತೇನೆ. ಇದು ಹೇಳಲಿಕ್ಕೆ ಎಂತಹ ಧೈರ್ಯ ನಿಮಗೆ ?

Mr. SPEAKER.—Has the Honble Member agreed ?

Sri C. J. MUCKANNAPPA.—I have agreed Sir. ಇಂಥ ಆಶ್ವಾಸನ ಕೊಡತಕ್ಕಂಥ ಸರ್ಕಾರವಿದ್ದರೆ ಬಹಳ ಕೃತಕೃತ್ಯ. ರಾಜಕೀಯವನ್ನು ಬೆರಸಬೇಡಿ, ಇದನ್ನು ಬೆರೆಸಿ ಸ್ವಚ್ಛವಾಗಿರುವ ನಿಮ್ಮ ಮುಖಕ್ಕೆ ಟಾರ್ ಬಳಿದುಕೊಳ್ಳಬೇಡಿ.

ಸರ್ವೀಸಿನಲ್ಲಿ ಸಮಾಧಾನ ಇದೆಯೇ ? ಒಬ್ಬರಿಗೊಂದು ಮಾಡುತ್ತೀರಿ ಇನ್ನೊಬ್ಬನಿಗೆ ಇನ್ನೊಂದು ಮಾಡುತ್ತೀರಿ. ಯಾವುದಾದರು ಒಂದು ಜಾಗ ಖಾಲಿ ಬಿದ್ದರೆ ಅದನ್ನು ಜಾಗ್ರತೆ ಏಕೆ ಭರ್ತಿಮಾಡಬಾರದು? ವಿಕ್ಟೋರಿಯಾ ಆಸ್ಪತ್ರೆಯ ಫೇಮಸ್ ಫಿಸಿಷಿಯನ್, ಗೋವಿಂದಶೆಟ್ಟರು ಸತ್ತು ಹೋದರು. ಅವರ ಜಾಗದಲ್ಲಿ ಯಾರನ್ನು ನೇಮಕಮಾಡಿದ್ದೀರಿ ? ಅವರು ಸತ್ತು ಎಷ್ಟು ದಿವಸ ಆಯಿತು ? ಇಷ್ಟು ನಿಧಾನವಾಗುವುದಕ್ಕೆ ಕಾರಣವೇನು ? ಇದರಲ್ಲಿ ರಾಜಕೀಯ ಇದೆಯೇ ಅವರಂತೆ ಕೆಲಸ ಮಾಡತಕ್ಕ ಜನ ಇಲ್ಲವೆ ? ಅವರಷ್ಟು ಕ್ವಾಲಿಫಿಕೇಷನ್ ಇರುವವರು ಇಲ್ಲವೇ ಎಂದು ಕೇಳುತ್ತೇನೆ.

ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿ ನೋಡಿದೆ. ಪಾಪ ಆ ಜನ ಪಡುವ ಕಷ್ಟವನ್ನು ತಪ್ಪಿಸಿ ಎಂದು ಹೊರಗೂ ಒಳಗೂ ಪ್ರಾರ್ಥನೆಮಾಡುತ್ತೇನೆ. ಅಲ್ಲಿಗೆ ಹೋದರೆ ಡೀನ್, ಡೀನ್ ಅಂತ ಅದೇನು ಡೀನ್ ಡೀನೋ ಗೊತ್ತಿಲ್ಲ (ನಗು !) ಈ ಡೀನ್ (Dean) ಗಳ ಕಾಟ ತಪ್ಪಿಸಿ. ಅವರ ಅಟ್ಟಹಾಸ ಏನು ; ಅವರ ಠೀವಿ ಏನು ; ಇದನ್ನು ತಪ್ಪಿಸಿ, ಜನರ ಸೇವೆಗೆ ಇದ್ದೇವೆ ಎಂದ ಮೇಲೆ ಜನರ ಸೇವೆ ಮಾಡುವುದಕ್ಕೆ ಕಲಿತುಕೊಳ್ಳೋಣ. ತಾನು ಏನೇ ಇರಲಿ, ಆ ಡೀನ್ ಇರುವುದು ಪ್ರತಿಷ್ಠೆಗೆ ಅಲ್ಲ, ರೋಗರುಜಿನ ಅನುಭವಿಸತಕ್ಕ ಜನಗಳಿಗೆ ತೊಂದರೆಯಾಗದಹಾಗೆ ನೋಡಿಕೊಳ್ಳಬೇಕು. ಕಡಪಾಕಲ್ಲಿನ ಮೇಲೆ ಮಲಗಿಕೊಂಡರೆ ಅದೆಂಥಹೋ ಖಾಯಿಲೆ ಬರುತ್ತದೆ ಎಂದು ಹೇಳುತ್ತೀರಿ. ರೋಗಿಗಳನ್ನು ಕಾರಿಡಾರ್‌ನಲ್ಲಿ ಕಡಪಾಕಲ್ಲಿನ ಮೇಲೆ ಮಲಗಿಸಿದ್ದೀರಿ. ನನಗೆ ಒಂದು ಅನ್ನಿಸುತ್ತದೆ ಆರೋಗ್ಯಭಾಗ್ಯ ಸಿಕ್ಕಬೇಕು, ಜನ ಆರೋಗ್ಯವಾಗಿರಬೇಕು ಎಂದು ಹೇಳಿದರೆ ಆಸ್ಪತ್ರೆಯಲ್ಲಿ ಜಾಗ ಇಲ್ಲದೇ ಹೋದರೆ ಸ್ವೇಚ್ಛೆಯಾಗಿ ವೆಚ್ಚವಾಗತಕ್ಕ ಬೇರೆ ಖಾತೆಗಳಿಂದ ದುಡ್ಡು ತೆಗೆದುಕೊಂಡು ಇನ್ನು 100 ಹಾಸಿಗೆಗಳನ್ನು ಹಾಕಿ. ಕಡಪಾಕಲ್ಲಿನ ಮೇಲೆ ರಾತ್ರಿ ಹೊತ್ತು ಉದ್ದಕ್ಕೂ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮಲಗಿಸಿದ್ದೀರಿ, ಇದು ಒಳ್ಳೆಯದೇ ಮನುಷ್ಯತ್ವವೇ; ಮನುಷ್ಯ ಮಾತ್ರದವರು ನೋಡುವುದಕ್ಕೆ ಸಾಧ್ಯವೇ ? ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಯಾರೂ ಕಂಡೂ ಕಾಣದ ದಾರಿಯಲ್ಲಿ ಸುತ್ತಿಕೊಂಡು ಬರಬೇಕು ಆಗ ಅಲ್ಲಿ ಯಾವ ಪರಿಸ್ಥಿತಿ ಇದೆ, ಯಾವ ತೊಂದರೆ ಇದೆ ಎನ್ನುವುದು ಗೊತ್ತಾಗುತ್ತದೆ. ಯಾವಾಗಲೂ ನಮ್ಮ ಸಂಬಳ ಸಾರಿಗೆ ಅಂತ ಹೇಳಿ ವ್ಯವಹಾರ ನಡೆಯುತ್ತಾ ಇರುತ್ತದೆ. ನಮ್ಮ ಸಂಬಳ ಕಡಿಮೆ ಮದರಾಸಿನಲ್ಲಿ ಜಾಸ್ತಿ ಕೊಡುತ್ತಾರೆ. ಇಂಗ್ಲೆಂಡಿನಲ್ಲಿ ಹಾಗೆ, ಬೊಂಬಾಯಿ ನಲ್ಲಿ ಹೀಗೆ ಅಂತ ಹೇಳಿ ನಮ್ಮ ರಾಜ್ಯದಲ್ಲಿ ನಮ್ಮ ಜನ ಕೊಟ್ಟಂಥ ಹಣ ವೆಚ್ಚಮಾಡಿ, ವಿದ್ಯಾಭ್ಯಾಸ ಮಾಡಿ ದಂಥ ಜನ ನಮ್ಮ ಜನಗಳ ಸೇವೆ ಮಾಡಬೇಕೆಂದು ಅಭಿಮಾನ ಹೊಂದದೆ, ನಿರಭಿಮಾನಿಗಳಾಗಿ ಅನ್ನದ ಮೇಲೆ, ಕುಂಕುಮದ ಮೇಲೆ, ಬಟ್ಟೆಯ ಮೇಲೆ ಸುಂಕ ಕೆತ್ತು ವಿದ್ಯಾವಂತರನ್ನಾಗಿ ಮಾಡಿದ ಜನರ ಸೇವೆ ಮಾಡುವುದಕ್ಕೆ ಇಚ್ಛೆ ಇಲ್ಲದೇ ಬೊಂಬಾಯಿಗೆ ಹೋಗುತ್ತೇವೆ, ಮದರಾಸಿಗೆ ಹೋಗುತ್ತೇವೆ ಅಲ್ಲಿ ಜಾಸ್ತಿ ಸಂಬಳ ಕೊಡುತ್ತಾರೆ, ಅಲ್ಲಿ ಆ ಅಲೋಯನ್ಸ್ ಇದೆ. ಇಲ್ಲಿ ಈ ಅಲೋಯನ್ಸ್ ಇದೆ ಎಂದು ಹೇಳುತ್ತಾರೆಯಲ್ಲಾ ಇದು ನಿಜವಾಗಿಯೂ ಕೂಡ ಸಲ್ಲದು. ನಮ್ಮಲ್ಲೇ ಬೆಳೆದು ಡಾಕ್ಟರು ಗಳಾಗುತ್ತಾರೆ. ವೈದ್ಯಕೀಯ ವೃತ್ತಿ ಅವಲಂಬಿಸುತ್ತಾರೆ. ಅವರಿಗೆ ಸ್ವಲ್ಪ ಜನಾಭಿಮಾನ, ದೇಶಾಭಿಮಾನ ಇರಬೇಕು. ಹಣದ ಆಶೆ ಇಟ್ಟುಕೊಳ್ಳಬಾರದು. ಹಣದ ಆಶೆ ಹೆಚ್ಚಾಗಿ ಇಟ್ಟು ಕೊಳ್ಳದೆ ಜನ ಸೇವೆ ಮಾಡಬೇಕೆಂಬ ಆಶೆ ಅವರಲ್ಲಿ ಮೂಡಬೇಕು. ಯುವಕರಲ್ಲಿ ಅಂಥ ಒಳ್ಳೆಯ ಬುದ್ಧಿ ಉತ್ಪನ್ನವಾಗಲಿ, ಜನಸೇವೆ ಮಾಡತಕ್ಕ ಆಕಾಂಕ್ಷೆ ಬರಲಿ ಎಂದು ಹೇಳಿ ಯುವಜನರನ್ನು ಈ ಸಭೆಯ ಮೂಲಕ, ತಮ್ಮ ಮೂಲಕ ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಇನ್ನು ಒಂದೇ ಒಂದು ವಿಷಯ ಹೇಳಿ ಮುಗಿಸುತ್ತೇನೆ. ಸುಪ್ರೀಂ ಕೋರ್ಟ್, ಹೈಕೋರ್ಟ್ ತೀರ್ಮಾನ ಮಾಡಿದಂಥಾ ಒಬ್ಬ ಡಾಕ್ಟರಿಗೆ ನೀವು ಕೊಟ್ಟಂಥ ಟ್ರೀಟ್‌ಮೆಂಟ್ ಏನು ? ರೆಡ್ ಹ್ಯಾಂಡೆಡ್ ಆಗಿ ಹಿಡಿದು ಹಣ ತಿಂದಿದ್ದಾನೆ ಎಂದು ಹೇಳಿ ಆಂಟಿಕರಪ್ಷನ್ ಡಿಪಾರ್ಟ್‌ಮೆಂಟಿಗೆ ದೂರು ಕೊಟ್ಟರೆ ಯಾರ ಮೇಲೆ ದೂರು ಕೊಟ್ಟರೂ, ಅವನ ಬದುಕಿದ್ದರೂ, ಗಂಡ ಹೆಂಡತಿ ಜೀವಂತ ವಾಗಿದ್ದರೂ ಗಂಡ ಸತ್ತುಹೋದ ಎಂದು ಹೆಂಡತಿ ಹತ್ತಿರ ಸ್ಟೇಟ್‌ಮೆಂಟ್ ರೆಕಾರ್ಡ್ ಮಾಡಿಸಿ 5 ಸಾವಿರ ರೂಪಾಯಿ ಕೊಟ್ಟಿದ್ದಾರೆ.

ಶ್ರೀ ಎಸ್. ಗೋಪಾಲ ಗೌಡ.—ಇದು ನಡೆದದ್ದು ಎಲ್ಲಿ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದೇ ಊರಿನ ಹುಚ್ಚಾಸ್ಪತ್ರೆಯಲ್ಲಿ ನಡೆದಂಥ ಪ್ರಕರಣ ಇದು

ಶ್ರೀ ಎಸ್. ಗೋಪಾಲ ಗೌಡ.—ಹುಚ್ಚಾಸ್ಪತ್ರೆ ಆದರೆ ಪರವಾಗಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಏಕೆ ಹೇಳುತ್ತೇನೆ ಎಂದರೆ ಒಂದು ಉನ್ನತ ನ್ಯಾಯಾಲಯ, ಈ ಭಾರತ ಭೂಮಿ ಯಲ್ಲಿ ಶ್ರೇಷ್ಠ ನ್ಯಾಯಾಲಯ ಕೊಟ್ಟಂಥ ತೀರ್ಮಾನಕ್ಕೆ ತಲೆಬಾಗದ ಜನ ತಾವೂ ಅವರು ಎಲ್ಲಾ ಒಂದೇ.

ಶ್ರೀ ಕೆ. ನಾಗಪ್ಪ ಆಳ್ವ.—ತಲೆ ಬಾಗಲಿಲ್ಲ ಎಂದು ಹೇಳುತ್ತೀರಿ, ಅದು ಏನು ಎಂದು ಅರ್ಥವಾಗಲಿಲ್ಲ. ಸುಪ್ರೀಂ ಕೋರ್ಟಿನ ತೀರ್ಮಾನಕ್ಕೆ ನಾವು ಯಾವಾಗಲೂ ತಲೆಬಾಗಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಲೆಬಾಗಿದ್ದೀರಿ. ಪರಮಾತ್ಮ, ದೇವರು ಸೃಷ್ಟಿಮಾಡಿ ನಿಮ್ಮನ್ನು ಏಕೆ ಕಳುಹಿಸಿದನೋ ಎಂದು ದೇವರನ್ನು ಶಪಿಸುತ್ತಾ ಇದ್ದೇನೆ. ಇಂಥಾ ಒಳ್ಳೆಯ ಜನ ಗಳ ಕೈಯಲ್ಲಿ ಅಧಿಕಾರ ದುರುಪಯೋಗ ಮಾಡತಕ್ಕ, ಮಾಡಿದಂಥಾ ಷಿಕ್ಮಿದಾರರು ಇದ್ದಾರೆಯಲ್ಲಾ ಎಂದು ವ್ಯಸನಪಡುತ್ತೇನೆ. ರೀ ಇನ್ವೆಸ್ಟಿಗೇಟ್ ಮಾಡಿ. ಕೊಡತಕ್ಕ ಹಣ ಕೊಡಿ. ನ್ಯಾಯ ವಾಗಿದೆಯೇ, ತಕರಾರು ಇದೆಯೇ ಎಂಬುದನ್ನು ನೋಡಿ. ಈ ದೇಶದಲ್ಲಿ ನ್ಯಾಯದೊರೆಯುತ್ತದೆ ಎಂದು ಧೈರ್ಯವಾಗಿ ಮಾಡಿ. ಅನ್ಯಾಯವಾಗಿದ್ದರೆ ಕೋರ್ಟುಗಳು ಇವೆ. ಇಷ್ಟು ಮಾತ್ರ ಹೇಳುತ್ತೇನೆ. ಪ್ರತಿಯೊಂದು ಹೆಜ್ಜೆಯನ್ನು ದಿಟ್ಟತನದಿಂದ, ಧೈರ್ಯವಾಗಿ ಯಾವ ಕಳಂಕವನ್ನೂ ಕಂಡು ಹಿಡಿಯುವುದಕ್ಕಾಗುವುದಿಲ್ಲ ಎನ್ನುವ ರೀತಿಯಲ್ಲಿ, ನಿಮ್ಮ ಕೈಗೆಳಗಿರತಕ್ಕ ಖಾತೆಯನ್ನು ಸರಿ ಯಾದ ರೀತಿಯಲ್ಲಿ ಕೆಲಸಮಾಡುವಂತೆ ದುರಸ್ತಿಪಡಿಸಬೇಕೆಂದು ಹೇಳಿ 15 ನಿಮಿಷ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಾದ ತಮಗೂ ವಂದಿಸಿ ಈ ವೈದ್ಯಕೀಯ ಮತ್ತು ಜನಾರೋಗ್ಯ ಖಾತೆ ಎಲ್ಲಾ ಖಾತೆಗಿಂತಲೂ ಹೆಚ್ಚಿನ ರೀತಿಯಲ್ಲಿ ಕೆಲಸಮಾಡಿ ಜನತೆಯಪ್ರೀತಿ ವಿಶ್ವಾಸಕ್ಕೆ ಪಾತ್ರವಾಗ ಲೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಶರಣಪ್ಪ (ದೇವದುರ್ಗ).—ಸ್ವಾಮಿ, ಸಭಾಪತಿಯವರೇ ಈಗ ಮೆಡಿಕಲ್ ಮತ್ತು ಹೆಲ್ತ್‌ಡಿಮ್ಯಾಂಡ್ ಬಗ್ಗೆ ಇದುವರೆಗೂ ಸಾಕಾದಷ್ಟು ಜನ ಸದಸ್ಯರು ಕೇವಲ ಟೀಕೆ ಟಿಪ್ಪಣಿಗಳನ್ನು

ಅಷ್ಟೇ ಮಾಡದೇ ಸಲಹೆ ಸೂಚನೆಗಳನ್ನು ಕೂಡ ಕೊಟ್ಟಿದ್ದಾರೆ. ಈ ಎರಡು ಡಿಮಾಂಡುಗಳಿಗೂ ಸುಮಾರು 7 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಈ 7 ಕೋಟಿ ರೂಪಾಯಿಗಳನ್ನು ನಾವು ನಮ್ಮ ರಾಜ್ಯದ ಜನ ಸಂಖ್ಯೆಯ ದೃಷ್ಟಿಯಿಂದ ನೋಡಿದ್ದೇ ಆದರೆ ಒಬ್ಬ ಮನುಷ್ಯನಿಗೆ ಕೇವಲ 3 ರೂಪಾಯಿನಂತೆ ಆರೋಗ್ಯ ಮತ್ತು ಔಷಧಿಗೆ ಖರ್ಚು ಮಾಡುತ್ತೇವೆ ಎಂದು ಅಂದಾಜು ಕಂಡುಬರುತ್ತದೆ. 100ಕ್ಕೆ 85ರಷ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಜನರು ಇರುವುದಾದರೂ ಅವರ ಔಷಧಿ ಮತ್ತು ಚಿಕಿತ್ಸೆ, ಸಹಾಯ, ಅನುಕೂಲತೆ ಒದಗಿಸುವುದಕ್ಕೆ ಕೇವಲ 100ಕ್ಕೆ 10–15ರಷ್ಟು ಮಾತ್ರ ಖರ್ಚು ಬರುವುದು ಕಂಡು ಬರುತ್ತದೆ. ಈ ಡಿಮ್ಯಾಂಡಿನಲ್ಲಿ ತೋರಿಸಿದ ಹಣದ ಬಗ್ಗೆ ವಿಚಾರ ಮಾಡಿದ್ದೇ ಆದರೆ ನಮ್ಮ ದೇಶಕ್ಕೆ ಅಥವಾ ನಮ್ಮ ರಾಜ್ಯಕ್ಕೆ ಈ 7 ಕೋಟಿ ರೂಪಾಯಿಗಳು ಸಾಲದು ಎಂದು ನನ್ನ ಅಭಿಪ್ರಾಯ. ಮಹತ್ವದ ಈ ಅವಧಿಯಲ್ಲಿ ಈ ಒಂದು ತುರ್ತು ಪರಿಸ್ಥಿತಿಯಲ್ಲಿ ನಮ್ಮ ಮಂತ್ರಿಗಳಲ್ಲಿ ಕೆಲವೊಂದು ಸಲಹೆಗಳನ್ನು ಹೇಳಲು ಬಯಸುತ್ತಾ ಇದ್ದೇನೆ. ಈಗ 7 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರೂ ಕೂಡ ಸಾಕಾದಷ್ಟು ಜನರಿಗೆ ಸಾಕಾದಷ್ಟು ಹಳ್ಳಿಗಳಲ್ಲಿ ದವಾಖಾನೆ, ಡಾಕ್ಟರುಗಳು ಮತ್ತು ಇತರ ಸೌಕರ್ಯಗಳನ್ನು ಒದಗಿಸಿದ್ದರೂ ಇನ್ನೂ ತೃಪ್ತಿಕರವಾಗಿಲ್ಲ ಎಂದು ಶಂಕೆ, ಸಂದೇಹ ಬರುತ್ತಾ ಇದೆ. ಅದಕ್ಕೆ ಅನೇಕ ಕಾರಣಗಳು ಇವೆ ಎಂದು ನನ್ನಭಾವನೆ ಇದೆ. ಒಂದನೇಯದು ಅನೇಕ ದವಾಖಾನೆಗಳನ್ನು ತೆರೆದಿದ್ದರೂ ಅದರಲ್ಲಿ ಡಾಕ್ಟರುಗಳಿಲ್ಲ. ಎರಡನೇಯದು ಡಾಕ್ಟರುಗಳು ಇದ್ದರೂ ದವಾಖಾನೆಯಲ್ಲಿ ಸಾಕಾದಷ್ಟು ಔಷಧಿ ಸೌಕರ್ಯ ಇಲ್ಲ. ಔಷಧಿಯಿಲ್ಲ ಅಂತ ಅಂದರೆ ಅಲ್ಲಿ ದರವೊಂದೂ ಇಲ್ಲ ಅಂತಲೇ ಹೇಳುತ್ತಾರೆ. ಎಲ್ಲಿಯಾದರೊಂದು ಕ್ರಿಮಿನಲ್ ಕೇಸೋ, ಬಡಿದಾಟಾನೋ ಆದಾಗ ಪೋಲೀಸರು ಆ ಘಾಯಗೊಂಡವರನ್ನು ದವಾಖಾನೆಗೆ ಇಲಾಜಿಗೆ ಕರೆದುಕೊಂಡು ಹೋದಾಗ ಆಗ ಸಹಿತ ಆ ಬ್ಯಾಂಡೇಜ್ ಬಟ್ಟೆ ಕೂಡ ಇಲ್ಲ ಅಂತ ಹೇಳುತ್ತಾರೆ. ಆಗ ಆ ಘಾಯಗೊಂಡವನು ತನ್ನ ಸಂಬಂಧಿಗಳನ್ನೋ ಅಥವಾ ಮತ್ತೆ ಯಾರನ್ನಾದರೂ ಪೇಟೆಗೆ ಕಳುಹಿಸಿ ಆ ಅರಿವೆ ಬಟ್ಟೆತಂದು ಕೊಟ್ಟರೆ ಆಗ ಅವರು ಡ್ರೆಸ್ಸಿಂಗ್ ಮಾಡುತ್ತಾರೆ. ಆ ನಮ್ಮ ರಾಯಚೂರು ಜಿಲ್ಲೆಯಲ್ಲಿ ಇಂದು ಇಂಥ ಒಂದು ಪರಿಸ್ಥಿತಿಯುಂಟಾಗಿದೆ. ಹೀಗೆ ಯಾವಾಗ ಸರ್ಕಾರಿ ದವಾಖಾನೆಗಳಲ್ಲಿ ಸರಿಯಾಗಿ ಸಾಕಷ್ಟು ಔಷಧಿಗಳಿರುವುದಿಲ್ಲವೋ ಆಗ ಅಲ್ಲಿರತಕ್ಕ ಅನಾನುಕೂಲಗಳನ್ನೆಲ್ಲ ನೋಡಿಕೊಂಡು ಈ ಪ್ರೈವೇಟ್ ಪ್ರಾಕ್ಟೀಷನರುಗಳು ಹೀಗೂ ಸರ್ಕಾರದ ವತಿಯಿಂದ ನಡೆಯುತ್ತಿರುವ ದವಾಖಾನೆಗಳೆಲ್ಲ ನಿರುಪಯೋಗವಾಗಿರುವುದರಿಂದ ತಮಗೆ ಲಾಭ ಆಗುತ್ತದೆಂತಲೇ ಅವರು ದವಾಖಾನೆಗಳನ್ನು ತೆಗೆಯುವುದಕ್ಕೆ ಅವಕಾಶ ಉಂಟಾಗಿದೆ. ಈ ದಿವಸ ಸರ್ಕಾರದ ವತಿಯಿಂದ ಈ ದವಾಖಾನೆಗಳು ಸರಿಯಾಗಿ ನಡೆಯದೆ ಇರುವ ಸಂದರ್ಭ ಪ್ರಾಯಿವೇಟ್ ದವಾಖಾನೆಗಳವರಿಗೆ ಒಂದು ಹೆಚ್ಚಿನ ಪ್ರೋತ್ಸಾಹವನ್ನುಂಟುಮಾಡಿದೆ ಅಂತ ಹೇಳದೆ ವಿಧಿಯಿಲ್ಲ. ಈ ದಿವಸ ಒಂದೊಂದು ದವಾಖಾನೆಗೂ ಸುಮಾರು 25 30 ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಇದರಲ್ಲಿ ಕೇವಲ ಔಷಧಿಗೆ ಖರ್ಚಾಗತಕ್ಕ ಮೊಬಲಗು ವರ್ಷಕ್ಕೆ 500-600 ರೂ. ಗಳು ಮಾತ್ರ. ಇನ್ನುಳಿದ ಹಣವೆಲ್ಲ ದವಾಖಾನೆಯ ಶಿಬ್ಬಂದಿ ವೆಚ್ಚಕ್ಕೆ ಖರ್ಚಾಗುತ್ತಿದೆ. ಇಂಥ ಒಂದೊಂದು ದವಾಖಾನೆ ಇರತಕ್ಕ ಪ್ರದೇಶದಲ್ಲಿ ಪ್ರಜಾಸಂಖ್ಯೆಯಾದರೋ ಹತ್ತು ಸಾವಿರಕ್ಕೆ ಕಡಮೆ ಇಲ್ಲದೆ ಒಂದು ಲಕ್ಷದವರೆಗೂ ಇರಬಹುದು. ಹೀಗೆ ಲಕ್ಷಾಂತರ ಜನಗಳಿರತಕ್ಕ ಒಂದು ದವಾಖಾನೆಗೆ ವರ್ಷಕ್ಕೆ 500-600 ರೂ. ಗಳನ್ನು ಔಷಧಿಗಾಗಿ ಒದಗಿಸಿರುವಾಗ ಇನ್ನು ಎಷ್ಟರಮಟ್ಟಿಗೆ ಆ ಜನರು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಅವಕಾಶವಿದೆ ಎಂಬುದನ್ನು ಸರ್ಕಾರದವರೇ ಗಮನಿಸಬೇಕಾಗಿ ಅವರಲ್ಲಿ ಪ್ರಾರ್ಥಿಸಿಕೊಳುತ್ತೇನೆ.

ಇನ್ನು ಕೆಲವು ತಾಲ್ಲೂಕುಗಳಲ್ಲಿ ದವಾಖಾನೆಗಳೇನೋ ಇವೆ. ಆದರೆ ಅಲ್ಲಿ ಇಂಪೇಷಂಟುಗಳಿಗೆ ಅವಕಾಶವಿರುವುದು ಒಬ್ಬರಿಗೋ ಅಥವಾ ಇಬ್ಬರಿಗೋ ಅಷ್ಟೇನೆ. ಇನ್ನು ಕೆಲವು ಆ ತಾಲ್ಲೂಕುಗಳ ದವಾಖಾನೆಯಲ್ಲಿ ಇಷ್ಟೂ ಕೂಡ ಇಲ್ಲ. ಅಂದರೆ ಈಗ ಈ ದವಾಖಾನೆಗಳ ಪರಿಸ್ಥಿತಿ ಎಲ್ಲಿಗೆ ಬಂದಿದೆಯೆಂದರೆ-ದವಾಖಾನೆಗಳಲ್ಲಿ ರೋಗಿಗಳಿಗೆ ಸಾಕಷ್ಟು ಚಿಕಿತ್ಸೆ ಮಾಡಲು ಔಷಧಿಗಳಿಲ್ಲ. ಕೆಲವು ಆಸ್ಪತ್ರೆಗಳಲ್ಲಿ ಡಾಕ್ಟರುಗಳೇ ಇರುವುದಿಲ್ಲ, ಇನ್ನು ಕೆಲವು ದವಾಖಾನೆಗಳಲ್ಲಿ ರೋಗಿಗಳಿಗೆ ಇರಲು ಜಾಗವಿಲ್ಲ ಅಂತ ಅಂದಾಗ ಅಲ್ಲಿ ಜನರ ಆರೋಗ್ಯ ಎಷ್ಟರಮಟ್ಟಿಗೆ ಇರಬಹುದು ಎಂಬುದನ್ನು ಸರ್ಕಾರದವರೇ ಊಹಿಸಬೇಕು. ಈ ದವಾಖಾನೆಗಳ ವ್ಯವಸ್ಥೆಗೆ ಸರ್ಕಾರದವರು ಕೂಡಲೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಈ ದಿವಸ ಸರ್ಕಾರದವರು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನಗಳ ಮೇಲೆ ರೂಪಾಯಿ ಒಂದಕ್ಕೆ 9 ನ. ಪೈ. ಗಳ ಹೆಲ್ತ್ ಸೆಸ್ಸನ್ನು ಹಾಕಿದ್ದಾರೆ. ಇದರಿಂದ ಈಗ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳ ಸಂಪಾದನೆಯಾಗುತ್ತಿದೆ. ಹೀಗೆ ಈ ದಿವಸ ಹಳ್ಳೀ ಜನರಮೇಲೆ ಈ ಹೆಲ್ತ್ ಸೆಸ್ಸನ್ನು ಹಾಕಿ ಅದರಿಂದ ಬರತಕ್ಕ ಹಣದಿಂದ ಈಗ ನಗರ-ಪಟ್ಟಣಗಳಲ್ಲಿರತಕ್ಕ ಜನರಿಗೆ ಔಷಧಿ ಸೌಕರ್ಯ

(ಶ್ರೀ ಎ. ಶರಣಪ್ಪ)

ವನ್ನು ಮಾಡಿಕೊಟ್ಟಂತಾಗಿದೆ. ಇಷ್ಟು ಹೊರತಾಗಿ ಇದರಿಂದ ಹಳ್ಳಿ ಜನರಿಗೆ ಈ ಹಣದಿಂದ ಯಾವ ಪ್ರಯೋಜನವೂ ಆಗಿಲ್ಲ. ಇದಕ್ಕಾಗಿ ನನ್ನ ಒಂದು ಸಲಹೆಯೇನೆಂದರೆ-ಈ ದಿವಸ ಸರ್ಕಾರದವರು ಯಾವ ರೀತಿ ಈ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಒಕ್ಕಲುತನದವರ ಮೇಲೆ ಈ ರೂಪಾಯಿಗೆ ಒಂಭತ್ತು ನಯಾಪೈಸಾ ಹೆಲ್ತ್ ಸೆಸ್ಸನ್ನು ಸರ್‌ಛಾರ್ಜನ್ನು ಹಾಕಿದ್ದಾರೊ ಹಾಗೇ ಪಟ್ಟಣಗಳಲ್ಲೂ-ನಗರಗಳಲ್ಲೂ ಇರತಕ್ಕ ಜನರಮೇಲೆ ಅವರ ಪ್ರಾಪರ್ಟಿಮೇಲೆ ಈ ಒಂದು ಟ್ಯಾಕ್ಸನ್ನು ಹಾಕಿದರೆ ಆಗ ಸರ್ಕಾರಕ್ಕೆ ಇನ್ನೂ ಹೆಚ್ಚು ಉತ್ಪತ್ತಿ ಇದರಿಂದ ಬಂದಹಾಗಾಗುತ್ತದೆ. ಇದರಿಂದ ಹೆಚ್ಚು ಜನರಿಗೆ ಔಷಧಿ ಸರಬರಾಯಿ ಮಾಡಲು ಅವಕಾಶವಾಗುತ್ತದೆ. ಆದ್ದರಿಂದ ಈ ರೀತಿ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥಾನೆ ಮಾಡಿಕೊಳ್ಳುತ್ತೇನೆ.

ಆದರೆ ಈಗಾಗಲೇ ಈ ದವಾಖಾನೆಗಳಬಗ್ಗೆ-ಡಾಕ್ಟರುಗಳಬಗ್ಗೆ ಔಷಧಿಗಳಬಗ್ಗೆ ಮಾನ್ಯ ದಸ್ಯರನೇಕರು ಬೇಕಾದಷ್ಟು ಹೇಳಿದ್ದಾರೆ. ಆದುದರಿಂದ ನನ್ನ ಕೊನೆಯ ಒಂದು ಪ್ರಾರ್ಥನೆ ಏನೆಂದರೆ;—ನಾನೀಗ ಕಡೇದಾಗಿ ಆ ರಾಯಚೂರು-ಗುಲ್ಬರ್ಗ ಮತ್ತು ಬೀದರ್ ಆ ಮೂರು ಜಿಲ್ಲೆಗಳ ಪರವಾಗಿ ಒಂದೆರಡು ಮಾತುಗಳನ್ನಾಡಬೇಕೆಂದು ನಿಂತಿದ್ದೇನೆ. ಈ ಮೂರು ಜಿಲ್ಲೆಗಳಲ್ಲೂ ಸಾಕಷ್ಟು ಪ್ರಮಾಣದಲ್ಲಿ ದವಾಖಾನೆಗಳಿಲ್ಲ. ಅನೇಕ ದವಾಖಾನೆಗಳಲ್ಲಿ ಡಾಕ್ಟರುಗಳು ಇರುವುದಿಲ್ಲ. ಅಲ್ಲೊಂದು ಇಲ್ಲೊಂದು ದವಾಖಾನೆಗಳಲ್ಲಿದ್ದರೂ ಅಲ್ಲಿನ ಪರಿಸ್ಥಿತಿ ಬಹಳ ಕಷ್ಟಕರವಾಗಿದೆ. ಈ ಮೂರು ಜಿಲ್ಲೆಗಳ ಜನ ಸಂಖ್ಯೆಯನ್ನು ವಿಚಾರ ಮಾಡುವುದಾದರೆ ಅದು 30 ಲಕ್ಷಕ್ಕೂ (Thirty Lakhs) ಮೇಲ್ಪಟ್ಟಿದೆ. ಈ ಮೂರು ಜಿಲ್ಲೆಗಳೇನಿವೆ ಅಲ್ಲಿ ಆದಷ್ಟು ಹಳ್ಳಿ ಜನ ಸಂಖ್ಯೆಯೇ ಜಾಸ್ತಿಯಾಗಿದೆ. ಅಲ್ಲಿ ಸರಿಯಾಗಿ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಕೂಡ ಇರುವುದಿಲ್ಲ. ಕೆಲವೊಂದು ಹಳ್ಳಿಗಳಲ್ಲಿ ಕುಡಿಯುವ ನೀರಿಗಾಗಿ ಎಷ್ಟೇ ಪ್ರಯತ್ನ ಪಟ್ಟಾಗ್ಯೂ ಕುಡಿಯುವ ನೀರು ದೊರೆಯುತ್ತಿಲ್ಲ. ಹೀಗೆಲ್ಲ ಅಲ್ಲಿ ತೊಂದರೆಗಳಿವೆ. ಆ ಕ್ಷೇತ್ರದ ಜನರು ತಮ್ಮ ಒಂದು ಆರೋಗ್ಯವನ್ನು ಕಾಪಾಡಿಕೊಂಡು, ಅವರ ಭವಿಷ್ಯವನ್ನು ಕಟ್ಟಿಕೊಳ್ಳಲು ಆ ಕ್ಷೇತ್ರದ ಜನರನ್ನು ತಯಾರು ಮಾಡಲು ನಮ್ಮ ಕಲ್ಲುಬುರ್ಗಿಯಲ್ಲಿ ಈ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಆ ಪ್ರದೇಶಕ್ಕೆ ಎರಡು ಮೆಡಿಕಲ್ ಕಾಲೇಜುಗಳನ್ನು ಮಂಜೂರು ಮಾಡುವುದಾಗಿ ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ. ಈ ವರ್ಷವೇ ಆ ಎರಡು ಮೆಡಿಕಲ್ ಕಾಲೇಜುಗಳನ್ನು ಅಲ್ಲಿ ಮಾಡಿಯೇ ತೀರಬೇಕು ಅಂತ ನಾನೀಗ ಸರ್ಕಾರದವರಲ್ಲೂ, ಮಾನ್ಯ ಮುಖ್ಯಮಂತ್ರಿಗಳವರಲ್ಲೂ ಮತ್ತು ಈ ಬಾಬಿಗೆ ಸಂಬಂಧಪಟ್ಟ ಮಂತ್ರಿಗಳವರಲ್ಲೂ ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದರೆ ಅಲ್ಲಿಗೆ ಈ ಮೆಡಿಕಲ್ ಕಾಲೇಜುಗಳನ್ನು ಕೊಡತಕ್ಕಬಗ್ಗೆ ಏನೋ ಒಂದು ವಿಷಯ ನನ್ನ ಕಿವಿಗೆ ಬಿದ್ದಿದೆ. ಅದನ್ನು ತಮ್ಮ ಮುಂದೆ ಈಗ ಸ್ಪಷ್ಟಪಡಿಸಲು ನಿಂತಿದ್ದೇನೆ. ನಮ್ಮ ಭಾರತವು ಸ್ವಾತಂತ್ರವನ್ನು ಸಂಪಾದಿಸುವ ಮುನ್ನ ಭಾರತೀಯರು ನಮಗೆ ಸ್ವಾತಂತ್ರ್ಯ ಕೊಡಬೇಕೆಂದು ಆ ಬ್ರಿಟಿಷರನ್ನು ಕೇಳುತ್ತಿದ್ದಾಗ-ಅವರು ಆ ಮುಸಲ್ಮಾನರು ಹಾಗೆ ಹೇಳುತ್ತಾರೆ, ಹಿಂದೂಗಳು ಹೀಗೆ ಹೇಳುತ್ತಾರೆ, ಆದ್ದರಿಂದ ನೀವೂ-ಅವರೂ ಅದನ್ನೆಲ್ಲ ಬಗೆ ಹರಿಸಿಕೊಂಡುಬನ್ನಿ ಆನಂತರ ನೋಡೋಣ ಎಂತ ಏನು ಅವರು ಹೇಳುತ್ತಿದ್ದರೋ ಅದೇ ಒಂದು ಭಾವನೆ ಮತ್ತು ನೀತಿ ಈ ದಿವಸ ಈ ನಮ್ಮ ಕಾಲೇಜುಗಳ ವಿಚಾರದಲ್ಲೂ ಬಂದಿರುವಂತೆ ಕಾಣುತ್ತಿದೆ. ಈ ದಿವಸ ಆ ಗುಲ್ಬರ್ಗದಲ್ಲಿರುವ ಜನರು ರಾಯಚೂರು ಜಿಲ್ಲೆಗೆ ಬೇಡ ಅನ್ನುತ್ತಾರೆ, ಹಾಗೆ ರಾಯಚೂರು ಜಿಲ್ಲೆಯವರು ಗುಲ್ಬರ್ಗ ಜಿಲ್ಲೆಗೆ ಬೇಡ ಅನ್ನುತ್ತಾರೆ ಏನು ಮಾಡುವುದು ಅಂತ ಹೇಳುತ್ತಿದ್ದಾರಂತೆ. ಆದರೆ ನಮ್ಮಲ್ಲಿ ಯಾವ ಕಾಲಕ್ಕೂ ಇಂಥ ಭೇದಭಾವನೆಗಳಿಲ್ಲ. ಸರ್ಕಾರದವರು ಈ ಸೌಲಭ್ಯವನ್ನು ರಾಯಚೂರಿಗೆ ಕೊಟ್ಟರು ಸಂತೋಷವೇ ಇಲ್ಲ ಗುಲ್ಬರ್ಗಕ್ಕೆ ಕೊಟ್ಟರೂ ಸಂತೋಷವೇ. ಒಟ್ಟಿನಲ್ಲಿ ಈ ಎರಡೂ ಒಂದೇ ದೇಶದಲ್ಲಿರುತ್ತವೆ. ಒಟ್ಟಿನಲ್ಲಿ ಆ ಕ್ಷೇತ್ರದ ಜನರ ಆರೋಗ್ಯದೃಷ್ಟಿ ಮುಖ್ಯ. ಅಲ್ಲಿಗೆ ಸರ್ಕಾರದವರು ತೀವ್ರವಾಗಿ ಈ ಮೆಡಿಕಲ್ ಕಾಲೇಜನ್ನುಕೊಟ್ಟು ಅದನ್ನು ಕಾರ ರೂಪಕ್ಕೆ ಬೇಗ ಅತಿ ತೀವ್ರವಾಗಿ ತರಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸ್ಥಳ ನಿರ್ಧರದಬಗ್ಗೆ-ಗುಲ್ಬರ್ಗ ಸೂಕ್ತವೆಂತ ಕಂಡುಬಂದರೆ ಅಲ್ಲಿ ಮಾಡಲಿ, ಇಲ್ಲವೇ ರಾಯಚೂರಿನಲ್ಲಿ ಸೂಕ್ತ ಅಂತ ಕಂಡುಬಂದರೆ ಅಲ್ಲಾದರೂ ಮಾಡಬಹುದು. ಅಂತೂ ಕೆಲಸವನ್ನು ಕೂಡಲೇ ಕೈಗೊಳ್ಳಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಂಡು ನನಗೆ ಇಷ್ಟು ವಿಷಯ ಮಾತನಾಡಲು ಕೆಲವು ನಿಮಿಷಗಳಕಾಲಾವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri P. F. D'MELLOW (Nominated).—Mr. Speaker, Sir, I should like to touch on just a few points—When discussing the question of Medical Demand.

Last year, we heard from the Hon'ble Minister for Health that the Government intended to provide suitable hospitals for the treatment of incurable diseases. I am making these observations on this occasion so that the Hon'ble Minister will be able to assure us that we are somewhat nearer that goal.

Sir, the second point I would like to draw the attention of the Government is the question of *Hansen's* disease. I had some personal experience when I used to be attached to the Beggar Relief Committee in this State. To my mind Sir, it is a great pity that anybody should reach the state of disfigurement in what we see so many cases of leprosy. There is really no scientific reason why anybody who is suffering from *Hansen's* disease, should not as a matter of right be provided with facilities for early diagnosis. I submit for the consideration of the Hon'ble Minister that today it is a blot on our civilised society and Government.....

Mr. SPEAKER.—The House will now rise and meet again on Monday at 1 P.M. Sri D'Mellow may continue this speech on Monday.

The House adjourned at One of the Clock to meet again at One of the Clock on Monday, the 18th March 1963.